ಕಲ್ಯಾಣಕಿರಣ

ನವೆಂಬರ್ 2003 ಬೆಲೆ ರೂ. 5-00



ಪೂಜ್ಯಶ್ರೀ ಮಹಾಜಗದ್ಗುರುಮಾತೆ ಮಹಾದೇವಿಯವರು



ಅಮೆರಿಕಾದ ನ್ಯೂಯಾರ್ಕ್‌ದಲ್ಲಿ ಪೂಜ್ಯ ಮಾತಾಜಿ ಪ್ರಾರ್ಥನೆ ಕಾರ್ಯಕ್ರಮದಲ್ಲಿ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ 34 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ.
ಸಂಚಿಕೆ 10 ನವೆಂಬರ್ 2003 ವಾರ್ಷಿಕ ಚಂದಾ 50/- ರೂ.

ಮುಕ್ತಿಯ ಹಂಗು ಕಳೆದ ಗುರು ಚನ್ನಬಸವಣ್ಣ

ಲೋಕದಲ್ಲಿಹ ನೂರಾರು ಗುರುಗಳ ನೋಡಿ ನೋಡಿ
ನಾನು ಬೇಸರಗೊಂಡೆನಯ್ಯಾ.
ವಿತ್ತಾಪಹಾರಿ ಗುರುಗಳು ನೂರಾರು
ಶಾಸ್ತ್ರಾರ್ಥ ಹೇಳುವ ಗುರುಗಳು ನೂರಾರು
ಮಂತ್ರ ತಂತ್ರದಿಂದುಭಯ ಲೋಕದಲ್ಲಿ
ಸುಖ ದುಃಖವೀವ ಗುರುಗಳು ನೂರಾರು
ಸತ್ಕರ್ಮೋಪದೇಶವನರುಹಿ
ಸ್ವರ್ಗ ಮರ್ತ್ಯದಲ್ಲಿ ಸುಖವೀವ ಗುರುಗಳು ನೂರಾರು
ವಿಚಾರ ಮುಖದಿಂದ ಷಟ್ಸಾಧನೆಯನರುಹುವ ಗುರುಗಳು ನೂರಾರು
ವಿಷಯಂಗಳೆಲ್ಲ ಮಿಥ್ಯಂಗಳೆಂದರುಹಿ
ಆತ್ಮಾನುರಾಗತ್ವವನೀವ ಗುರುಗಳು ನೂರಾರು
ಶಿವಜೀವರ ಏಕತ್ವವನರುಹಿ
ನಿರ್ಮಲ ಜ್ಞಾನವೀವ ಗುರುಗಳು (ನಮ್ಮ ಬಸವಾದಿ) ಪ್ರಮಥರು
ಸಂಶಯಾಳಿಗಳನ್ನೆಲ್ಲ ಜ್ಞಾನಾಗ್ನಿಯಿಂದ ದಹಿಸಿ
ಮುಕ್ತಿಯ ಹಂಗೆಂಬುದ ಅರುಹಿನ ಬಂಧದಲ್ಲಿರಿಸಿದ ಗುರು
ಚನ್ನ ಬಸವಣ್ಣನಲ್ಲದೆ ಮತ್ತೋರ್ವನ ಕಾಣೆ ನೋಡಾ
ಕಪಿಲ ಸಿದ್ಧಮಲ್ಲಿಕಾರ್ಜುನಾ

– ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರರು
(ಸಿ.ವ. ಸಂ – 1640)

ಕಲ್ಯಾಣ ಕಿರಣ

ಸಂಪುಟ 34 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ.
ಸಂಚಿಕೆ 10 ನವೆಂಬರ್ 2003 ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

ದಿ. 6-11-2003 ರಂದು ಅಮೆರಿಕಾದಿಂದ ಪೂಜ್ಯ ಮಾತಾಜಿಯವರ ಆಗಮನ

ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು ಗುರು ಬಸವಣ್ಣನವರ ವಿಶ್ವಮಾನ್ಯ ಸಂದೇಶಗಳನ್ನು ಅಮೆರಿಕಾದ್ಯಂತ ಪ್ರಚಾರ ಮಾಡಲು ಜೂನ್ ತಿಂಗಳ 17 ರಂದು ಅಮೆರಿಕಾ ಪ್ರವಾಸ ಕೈಗೊಂಡದ್ದು ಸರಿಯಷ್ಟೆ. ಅಮೆರಿಕಾದ ವಿವಿಧ ರಾಜ್ಯಗಳಾದಂತಹ ಆಸ್ಟಿನ್, ಟೆಕ್ಸಾಸ್, ಕ್ಯಾಲಿಫೋರ್ನಿಯ, ಇಲ್ಲಿನಾಯ್ಸ್, ಪೆನ್ಸಿಲ್ವೇನಿಯಾ, ಫ್ಲಾರಿಡಾ, ನ್ಯೂಯಾರ್ಕ್, ವಾಷಿಂಗ್‌ಟನ್ ಡಿ.ಸಿ., ಮಿಚಿಗನ್ ಮುಂತಾದ ಸ್ಥಳಗಳಲ್ಲಿ ಸುಮಾರು 5 ತಿಂಗಳವರೆಗೆ ನಿರಂತರವಾಗಿ ಅತ್ಯಂತ ಯಶಸ್ವಿಯಾಗಿ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ ಮತ್ತು ವಿವಿಧ ವಿಷಯಗಳ ಬಗ್ಗೆ ಪ್ರವಚನ ಮಾಡುತ್ತಾ, ಬಸವ ತತ್ತ್ವವನ್ನು ಪ್ರಚಾರ ಮಾಡಿ ಅಲ್ಲಿನ ಜನರಿಂದ ವಿಶೇಷ ಮನ್ನಣೆ ಪಡೆದು, ಇದೇ ತಿಂಗಳ 6 ರಂದು ಬೆಂಗಳೂರಿಗೆ ಆಗಮಿಸಲಿದ್ದಾರೆ. ಈ ಶುಭ ಸಂದರ್ಭದಲ್ಲಿ ಬಸವ ಧರ್ಮ ಪೀಠ, ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ ಮತ್ತು ಗಣಾಚಾರ ದಳಗಳ ಪತಿಯಿಂದ ಅವರಿಗೆ ಶುಭ ಕೋರುವೆವು.

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335/3322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಬಸವ ಬೀಡಿನಿಂದ ಅಮೆರಿಕಾ ನಾಡಿಗೆ

ಪ್ರವಾಸ ಕಥನ - ಭಾಗ 4

- ಮಾತಾಜಿ, ಆಸ್ಟಿನ್, ಯು.ಎಸ್.ಎ

ಸ್ಯಾನ ರಮೋನ್ ಎಂಬ ಪ್ರದೇಶದಲ್ಲಿರುವ ಶ್ರೀಮತಿ ಲಕ್ಷ್ಮಿ ಮತ್ತು ಹಿರೇಮಠ ಅವರ ಮನೆಗೆ ಹೋದೆವು. ಶ್ರೀ ಹಿರೇಮಠರು ಮೂಲತಃ ಕರ್ನಾಟಕದವರೇ ಆದರೂ ಅವರ ತಂದೆ ಮಹಾರಾಷ್ಟ್ರ ಸರ್ಕಾರದ ನೌಕರದಾರರಾದ್ದರಿಂದ ಹೆಚ್ಚು ಸಮಯವನ್ನು ಪೂನಾದಲ್ಲೇ ಕಳೆದಿದ್ದಾರೆ. ಶ್ರೀಮತಿ ಲಕ್ಷ್ಮೀ ಅವರ ಹಿರಿಯರು ಸೊಲ್ಲಾಪುರದವರು. ತಾಯಿತಂದೆ ಬೆಳಗಾಂವಿಯಲ್ಲೇ ನೆಲೆಸಿದವರು. ದಂಪತಿಗಳು ಅಲ್ಪಸ್ವಲ್ಪ ಕನ್ನಡದಲ್ಲಿ ಮಾತನಾಡಬಲ್ಲವರಾದರೂ ಪೂರ್ತಿಯಾಗಿ ಕನ್ನಡವನ್ನು ಅರ್ಥ ಮಾಡಿಕೊಳ್ಳಬಲ್ಲರು. ಶ್ರೀಮತಿ ಲಕ್ಷ್ಮಿಯವರು ಲಕ್ಷ್ಮಿ ಡಿಲೈಟ್ಸ್ ಎಂಬ ಹೆಸರಿನ ಒಂದು ಸಂಸ್ಥೆ ಮೂಲಕ ಕೆಲವೊಂದು ತಿನಿಸುಗಳನ್ನು ತಯಾರು ಮಾಡುತ್ತಿದ್ದು, ಅವು ಅಮೆರಿಕನ್ನರಿಗೆ ಬಹಳ ಪ್ರಿಯವಾಗಿರುವುದು ಒಂದು ಗಮನಾರ್ಹ ಸಾಧನೆಯಾದರೆ ಇಂಗ್ಲೀಷ್‌ನಲ್ಲಿ ವೆಜಿಟೇರಿಯನ್ ತಿನಿಸುಗಳ ಬಗ್ಗೆ ದೊಡ್ಡ ಪುಸ್ತಕ ಬರೆದಿದ್ದು ಅಮೆರಿಕಾದ ಒಂದು ಸಂಸ್ಥೆ ಅದನ್ನು ಪ್ರಕಟಿಸಿದೆ. ಇಂಥ ಕೆಲವು ಜನರು ಧಾರ್ಮಿಕ ಪ್ರವೃತ್ತಿ ಆಚಾರ-ವಿಚಾರಗಳನ್ನು ಉಳಿಸಿಕೊಂಡಿರುವುದಲ್ಲದೆ ಸಸ್ಯಾಹಾರ ಪದ್ಧತಿಯನ್ನು ಕಾಯ್ದುಕೊಂಡಿದ್ದಾರೆ. ಮತ್ತೆ ಕೆಲವು ಲಿಂಗಾಯತರು ಯದ್ವಾತದ್ವ ದಾರಿ ಹಿಡಿದಿದ್ದು, ಧರ್ಮವನ್ನೂ ಬಿಟ್ಟಿರುವುದಲ್ಲದೆ, ಮಾಂಸಾಹಾರವನ್ನು ಸಹ ಅಭ್ಯಾಸ ಮಾಡಿಕೊಂಡಿದ್ದಾರೆ. ಅಮೆರಿಕಾದಲ್ಲಿ ಇದ್ದ ಮೇಲೆ ಅಮೆರಿಕಾದವರಂತೆ ಇರಬೇಕು ಎಂದು ವಾದಿಸುತ್ತಾರೆ.

ಓರ್ವರು (ಅವರು ಬ್ರಾಹ್ಮಣರಂತೆ) ಹೇಳುತ್ತಿದ್ದರಂತೆ, ''ನಮ್ಮ ಮಕ್ಕಳು ಮಾಂಸಾಹಾರ ಮಾಡಲು ಇಷ್ಟಪಡದೆ ಅಳುತ್ತಾರೆ. ನಾನು ಒತ್ತಾಯದಿಂದ ತಿನ್ನಿಸುತ್ತೇನೆ. ಹೊರಗಿನ ಸಮಾಜದೊಡನೆ ಹೊಂದಿಕೊಳ್ಳಬೇಕಲ್ಲವೆ?'' ಇದು ಎಂಥಾ ಮೂರ್ಖತನ! ಸ್ವಭಾವತಃ ನೈಸರ್ಗಿಕವಾಗಿ ಮಾಂಸಾಹಾರ ಮಾಡುತ್ತಿದ್ದ ಅಮೆರಿಕನ್ನರು ಈಗ ಸಸ್ಯಾಹಾರ ಪದ್ಧತಿಗೆ ಮಾರುಹೋಗುತ್ತಿದ್ದಾರೆ. ಭಾರತೀಯ ಸಸ್ಯಾಹಾರಿ ಹೋಟೆಲ್ ತಿನಿಸುಗಳಿಗೆ ಅಪಾರ ಬೇಡಿಕೆ. ವೈದ್ಯಕೀಯ ಅಧ್ಯಯನದ ದೃಷ್ಟಿಯಿಂದಲೂ ಸಸ್ಯಾಹಾರ ಉತ್ತಮ ಎಂದು ವೈದ್ಯಕೀಯ ಅಧ್ಯಯನ ಸಂಸ್ಥೆಯೊಂದು ಪ್ರಕಟಿಸಿರುವ ''ಕೊಲೆಸ್ಟರಾಲ್'' ಎಂಬ ಪುಸ್ತಕದಲ್ಲಿ ಬರೆಯಲಾಗಿದೆ. ಹೀಗಿದ್ದಾಗ ಸಸ್ಯಾಹಾರಿಗಳು ಅತಾರ್ಕಿಕ ವಾದವನ್ನು ಮಂಡಿಸಿ ಮಾಂಸಾಹಾರವನ್ನು ರೂಢಿಸಿಕೊಳ್ಳುವುದು ಹಾಸ್ಯಾಸ್ಪದ.

ಗುಡ್ಡದ ಮೇಲ್ಭಾಗದಲ್ಲಿರುವ ಲಕ್ಷ್ಮಿ ಹಿರೇಮಠ ಅವರ ಮನೆ ಸುಂದರ ಪರಿಸರದಲ್ಲಿತ್ತು. ಅಲ್ಲಿಂದ ಶ್ರೀಮತಿ ಡಾ||ಭಾರತಿ ಮತ್ತು ಶ್ರೀ ಚಂದ್ರು ಶಿರಶ್ಯಾಡ ಅವರ ಮನೆಗೆ ಹೋದೆವು. ಇವರು ವಿಶೇಷ ಆಸಕ್ತಿ ಇರುವ ದಂಪತಿಗಳು. ಮನೆಯಲ್ಲಿಟ್ಟ ಕಾರ್ಯಕ್ರಮಕ್ಕೆ ಬಹಳ ಜನರನ್ನು ಆಹ್ವಾನಿಸಿದ್ದರು. ಪೂಜೆ, ಪ್ರವಚನ, ಪ್ರಸಾದದ ನಂತರ ಪ್ರಶ್ನೋತ್ತರ ಕಾರ್ಯಕ್ರಮ. ಅತ್ಯುತ್ತಮ ಚರ್ಚೆ ನಡೆಯಿತು. ಆ ಗುಂಪಿನಲ್ಲಿದ್ದ ವೃದ್ಧರೊಬ್ಬರು-ಮಕ್ಕಳನ್ನು ನೋಡಲು ಈ ದೇಶಕ್ಕೆ ಬಂದವರು, ''ಇಚ್ಛಾ ಮರಣ ಕುರಿತು, ಅದೂ ಆತ್ಮಹತ್ಯೆಯೇ'' ಎಂದು ಲೌಕಿಕ ಸಾಹಿತಿಗಳು ಬರೆಯುವಂತೆ ಮಾತನಾಡಿದಾಗ,

ತರುಣ ವಯಸ್ಸಿನ ಇಂಜಿನಿಯರ್ಸ್, ವೈದ್ಯರು ಅದನ್ನು ಪ್ರತಿಭಟಿಸಿ ಇಚ್ಛಾಮರಣ ಯೋಗದ ಒಂದು ಸಿದ್ಧಿ ಎಂದು ವಾದಿಸಿದರು. ಆಗ ನನಗೆ ಸಂತೋಷವಾಯಿತು. ಏಕೆಂದರೆ ಇಂಡಿಯಾ (ಬಾಗಲಕೋಟೆ)ದಿಂದ ಬಂದ ಆ ವೃದ್ಧರಿಗಿಂತ ಇಲ್ಲಿದ್ದ ಕೆಲವು ತರುಣರು ಹೆಚ್ಚಿನ ಅಧ್ಯಯನ ಮಾಡಿದ್ದರು.

ಕೆಲವು ಜನರು ಧರ್ಮರಾಹಿತ್ಯ (No religion) ಸ್ಥಿತಿಗೆ ಬರುವರಾದರೂ, ಅನೇಕರು ಅಮೆರಿಕನ್ನರು ಕೇಳುವ ಪ್ರಶ್ನೆ, ಎತ್ತುವ ಸಂದೇಹಗಳಿಗೆ ಉತ್ತರ ನೀಡಲು ಹೆಚ್ಚು ಅಧ್ಯಯನ ಮಾಡುವರು. ಎಷ್ಟೋ ಕಡೆ ನಾನು ತಮಾಷೆ ಮಾಡುತ್ತೇನೆ, " ನೀವು ಅಲ್ಲಿದ್ದಾಗ ಓದುವುದಿಲ್ಲ ತಿಳಿದುಕೊಳ್ಳುವುದಿಲ್ಲ. ಇಲ್ಲಿಗೆ ಬಂದ ಮೇಲೆ ಸ್ವಧರ್ಮದ ಬಗ್ಗೆ ಅಧ್ಯಯನ ಮಾಡುವಿರಿ. ಮಕ್ಕಳು ಆಗಿ ಅವರು ಶಾಲೆಗೆ ಹೋಗುವಾಗ ಅವರು ಕೇಳುವ ಸಂದೇಹಗಳಿಗೆ ಉತ್ತರಿಸಲು ಓದ ತೊಡಗುವಿರಿ. ಇನ್ನೂ ಕೆಲವರು ಅದನ್ನೂ ಮಾಡುವುದಿಲ್ಲ , ಹೀಗಾಗಬಾರದು; ಮೊದಲಿನಿಂದಲೇ ಅಧ್ಯಯನ ಮಾಡುತ್ತಿರಬೇಕು". ರಾತ್ರಿ ಒಂದೂವರೆಯವರೆಗೆ ಪ್ರಶ್ನೋತ್ತರ ನಡೆದು ಆಸಕ್ತಿಯಿಂದ ವಿಷಯಗಳನ್ನು ತಿಳಿದುಕೊಂಡರು.

ಚಂದ್ರಶೇಖರ್ ಅವರು ಹೊಸದಾಗಿ ಮನೆ ಖರೀದಿಸಿದ್ದರು. ಮನೆ 50 ವರ್ಷ ಹಿಂದಿನದಾದರೂ, ಹಿಂದಿನ ಯಜಮಾನ ಅದನ್ನು ವಿಶೇಷವಾಗಿ ಕಟ್ಟಿಸಿದ್ದ ಆಕರ್ಷಣೆಯಿಂದ ಈ ದಂಪತಿಗಳು ಈ ಮನೆಯನ್ನು ಆಯ್ಕೆ ಮಾಡಿದ್ದರು. ಹಿತ್ತಲಿನಲ್ಲಿ ಕುಳಿತು ಅಧ್ಯಯನ, ಆರಾಮ ಮಾಡಲು ಕಟ್ಟಿಗೆಯ ಮಾಳಿಗೆ. ನೀರು ಮೇಲಿಂದ ಧುಮುಕುವ ಪುಟ್ಟ ಜಲಧಾರೆ. ಚಿಕ್ಕ ಕೊಳದಲ್ಲಿ ಬಣ್ಣಬಣ್ಣದ ಸುಂದರ ಮೀನು. ಬಗೆಬಗೆಯ ಹೂಗಿಡಗಳು ಕಾಂಪೌಂಡನ್ನು ಮೀರಿ ಬೆಳೆದಿದ್ದವು. ಒಂದು ಚಿಕ್ಕ ಆಶ್ರಮದ ತರಹ ಆಹ್ಲಾದಕರ ವಾತಾವರಣವನ್ನು ಸೃಷ್ಟಿಸಿತ್ತು. ದಂಪತಿಗಳ ಅಭಿರುಚಿ ಶ್ಲಾಘಿಸಿದೆ. "ಎಲ್ಲ ಹಿಂದಿನ ಯಜಮಾನನ ಪರಿಶ್ರಮ" ಎಂದರು ಚಂದ್ರು. ಯುವ ದಂಪತಿಗಳಾದರೂ ಧರ್ಮದ ಬಗ್ಗೆ ತಿಳಿದುಕೊಳ್ಳಬೇಕು, ಆಚರಣೆಗೆ ತರಬೇಕು ಎಂಬ ಅವರ ಉತ್ಸಾಹ ನನಗೆ ಬಹಳ ಸಂತೋಷ ತಂದಿತು.

ಮನೆಗೆ ತುಸುದೂರದಲ್ಲಿ ಎಲಿಜಬೆತ್ ಲೇಕ್ ಎಂಬ ಸುಂದರ ಸರೋವರವಿತ್ತು. ಡಾ||ಭಾರತಿ ಕರೆದೊಯ್ದರು. ಗುಡ್ಡದ ಹಿನ್ನೆಲೆಯಲ್ಲಿ ಶಾಂತವಾಗಿ ನಿಂತ ಸರೋವರವು ಪ್ರಕೃತಿ ಮಾತೆಗೆ ಕನ್ನಡಿಯಾಗಿ ನಿಂತಿದ್ದು, ಶುಭ್ರ ನೀಲಾಗಸದಲ್ಲಿ ತೇಲುವ ಬಿಳಿಯ ಮೋಡಗಳು, ಗುಡ್ಡಗಳು ಎಲ್ಲ ನಿಂತ ನೀರಿನಲ್ಲಿ ಪ್ರತಿಬಿಂಬಿತವಾಗಿದ್ದವು. ಬಿಳಿಯ ನೀರು ಹಕ್ಕಿಗಳು, ಬಾತುಕೋಳಿಗಳು ತೇಲಾಡುತ್ತ ಸರೋವರದ ಸೌಂದರ್ಯವನ್ನು ಹೆಚ್ಚಿಸಿದ್ದವು. ಅಲ್ಲಲ್ಲೇ ಅರಳಿದ ಕಮಲದ ಹೂವುಗಳು ಸರೋವರದ ತೆರೆಗಳೆಂಬ ನಿರಿಗೆಗಳ ಮಧ್ಯೆ ಬೂಟಾ ಹೂವುಗಳಂತೆ ಕಾಣುತ್ತಿದ್ದವು. ಸಂಜೆಯ ಸೂರ್ಯನ ಹೊಂಬಿಸಿಲು ಇಡೀ ನಿಸರ್ಗಕ್ಕೆ ಬಂಗಾರದ ಲೇಪನ ಮಾಡಿದ್ದರೆ ತಂಗಾಳಿ ಸರೋವರದ ಮೇಲೆ ಬೀಸಿ ಬಂದು ಮುದ ನೀಡುತ್ತಿತ್ತು. ಮಕ್ಕಳೊಡನೆ, ನಾಯಿಗಳೊಡನೆ ಬಂದು ನಡೆಯುವವರು ಕೆಲವರು, ಜಾಗ್ಗಿಂಗ್ ಮಾಡುವವರು ಮತ್ತೆ ಕೆಲವರು, ಓಡುವವರು ಮತ್ತು ಕಲ್ಲಿನ ಬೆಂಚುಗಳ ಮೇಲೆ ಕುಳಿತು ಹರಟುವವರು ಮತ್ತೆ ಕೆಲವರು. ನಾವೂ ಒಂದು ಸುತ್ತು ನಡೆದಾಡಿ ಮನೆಯತ್ತ ಹೊರಟೆವು.

ಅದೇ ರೀತಿ ವಸಂತಾ ಮತ್ತು ಮಹೇಶ್ ದಂಪತಿಗಳು ಸಹ ಅಪಾರ ಭಕ್ತಿವಂತರು. ಲಿಂ|| ರ್‍ಯಾಂಗ್ಲರ್ ಡಿ.ಸಿ. ಪಾವಟೆಯವರ ನಂತರ ಕೆಲವು ತಿಂಗಳ ಕಾಲ ಉಪಕುಲಪತಿಗಳಾಗಿದ್ದ ಡಾ|| ಸಿದ್ಧಪ್ಪನವರ ಮಗ ಮಹೇಶ್. ಅವರ ತಾಯಿಯವರೂ ಇಲ್ಲೇ ಇದ್ದು ಬಹಳ ಜ್ಞಾನಿಗಳು ಮತ್ತು ಸಾತ್ವಿಕರು. ವಸಂತಾ ಅವರು ಒಳ್ಳೆಯ ಸಂಸ್ಕಾರವಿರುವ ಮನೆಯಿಂದ ಬಂದವರಿದ್ದು ಇಲ್ಲಿ ವಚನ ಸಾಹಿತ್ಯ ಮತ್ತು ಕನ್ನಡದ ತರಬೇತಿಯನ್ನು ಮಕ್ಕಳಿಗೆ ಕೊಡುತ್ತಿದ್ದಾರೆ. ಅಕ್ಕುಲಯ್ಯ ದೀಕ್ಷಿತರು ಬರೆದ ಇಷ್ಟಲಿಂಗ ವಿಜ್ಞಾನ ಎಂಬ ಪುಸ್ತಕದ ಪ್ರತಿ ತೆಲುಗು ಮೂಲದಿಂದ ಲಿಂ|| ಎಂ.ಜಿ. ನಂಜುಂಡಾರಾಧ್ಯರಿಂದ ಕನ್ನಡಕ್ಕೆ ಭಾಷಾಂತರಗೊಂಡಿದ್ದು ಅದರ ಪ್ರತಿಯು ಅಲ್ಲೆಲ್ಲೂ ಸಿಗದೆ ವಸಂತಾ ಅವರ ಬಳಿ ಸಿಕ್ಕಿತು. ಅದರ ಜೆರಾಕ್ಸ್ ಪ್ರತಿಯನ್ನು ಕೊಟ್ಟರು. ಅವರ ಮನೆಯಲ್ಲಿ ವಾಸ್ತವ್ಯ ಮಾಡಿದ್ದೆವು.

ವಸಂತಾ ಮತ್ತು ಮಹೇಶ್ ದಂಪತಿಗಳು ವಿ.ಎಸ್.ಎನ್.ಎ.ಯಲ್ಲಿ ಸಕ್ರಿಯ ಕಾರ್ಯಕರ್ತರಲ್ಲದೆ ಅನೇಕ ಸಂಘ ಸಂಸ್ಥೆಗಳ ಜೊತೆ ಸಂಪರ್ಕ ಇರಿಸಿಕೊಂಡವರು. ಮಾತನಾಡುತ್ತ ಒಮ್ಮೆ ಸ್ಯಾನ್ ಲಿಯಾಂಡ್ರೋದ ಬದರಿಕಾಶ್ರಮದಲ್ಲಿ ಬಸವ ಜಯಂತಿ ಮಾಡಿದ ವಿಷಯ ತಿಳಿಸಿದರು. ಆಗ ನನಗೆ ಒಂದು ವಿಷಯ ತಟ್ಟನೆ ನೆನಪು ಬಂದಿತು. ಒಂದು ವರ್ಷದ ಹಿಂದೆ ತುರುವೇಕೆರೆಯಲ್ಲಿ ಪ್ರವಚನವಾದಾಗ ದಿನ ನಿತ್ಯ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ಕೇಳಲು ಅಮೆರಿಕನ್ ಸಂಜಾತೆ ಸ್ವಾಮಿ ಮಂಗಳಾನಂದಜಿ ಎಂಬ ಮಹಿಳೆ ಬರುತ್ತಿದ್ದರು. ಮುಕ್ತಾಯಕ್ಕೆಂದು ನಾನು ಹೋದಾಗ ಸಹ ಬಂದಿದ್ದರು. ಮುಂಬರುವ ವರ್ಷದಲ್ಲಿ ಅಮೆರಿಕಾಕ್ಕೆ ಹೋಗಲಿದ್ದೇನೆ ಎಂದಾಗ ತಮ್ಮ ಆಶ್ರಮದ ವಿವರ ತಿಳಿಸಿ ನನಗೆ ಸಂದರ್ಶಿಸಲು ತಿಳಿಸಿದ್ದರು. ಅವರ ಗುರುಗಳಾದ ಪೂಜ್ಯ ಶ್ರೀ ಓಂಕಾರಾನಂದ ಸ್ವಾಮಿಗಳ ಪರಿಚಯ ಪುಸ್ತಕ ಕೊಟ್ಟಿದ್ದರು. ಅದೇ ಸ್ವಾಮೀಜಿಯವರೇ ಎಂಬುದನ್ನು ಮಹೇಶ್ ಖಚಿತ ಪಡಿಸಿದರಲ್ಲದೆ ಆಶ್ರಮದ ಸಂದರ್ಶನಕ್ಕೂ ಕರೆದೊಯ್ದರು. ಪೂಜ್ಯ ಸ್ವಾಮಿಗಳು ಇದ್ದು, ಸಂತೋಷದಿಂದ ಬರಮಾಡಿಕೊಂಡರು. ನಾವು ಬಂದಿದ್ದು ಗೊತ್ತಾಗಿದ್ದರೆ ಕಾರ್ಯಕ್ರಮವನ್ನು ಏರ್ಪಡಿಸಬಹುದಿತ್ತು , ಪ್ರತಿ ಶನಿವಾರ ಮತ್ತು ಭಾನುವಾರ ತುಂಬಾ ಜನ ಬರುತ್ತಾರೆ, ಎಂದು ಪೇಚಾಡಿದರು. ನನಗೂ ಅದು ನೆನಪಿಗೆ ಬಂದಿರಲಿಲ್ಲ. ಪ್ರತಿಯೊಂದು ಸ್ಥಳವೂ ದೂರದೂರ. ಹೀಗಾಗಿ ಸ್ಯಾನ್ ಲಿಯಾಂಡ್ರೋ ಎಲ್ಲಿದೆ ಎಂಬ ಕಲ್ಪನೆ ನನಗೂ ಇರಲಿಲ್ಲ. ಸಹಜವಾಗಿ ಮಾತನಾಡುವಾಗ ಮಹೇಶ್ ಪ್ರಸ್ತಾಪ ಮಾಡಿದ್ದರಿಂದ ಬರಲು ಸಾಧ್ಯವಾಯಿತು. ಮತ್ತೊಮ್ಮೆ ಬಂದಾಗ ಮೊದಲೇ ತಿಳಿಸುತ್ತೇನೆ ಎಂದು ಹೇಳಿದೆ.

ಕೆಲವು ಆಸಕ್ತರದ್ದು ಒಂದು ಮೀಟಿಂಗ್ ಕರೆದು, ಇಲ್ಲಿ ಏನಾದರೂ ಧಾರ್ಮಿಕ ಕೂಟ (religious congregation)ಗಳನ್ನು ನಡೆಸಿರಿ. ಕ್ರೈಸ್ತರು, ಮುಸ್ಲೀಮರು ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆ ನಡೆಸುವರು. ನಿಮಗೆ ವಾರಕ್ಕೊಮ್ಮೆ ನಡೆಸಲು ಆಗದಿದ್ದರಷ್ಟೆ ತಿಂಗಳಿಗೆ ಒಮ್ಮೆಯಾದರೂ ನಡೆಸಿರಿ. ಕ್ರೈಸ್ತರು, ಮುಸ್ಲೀಮರು, ಸಿಖ್ಖರಿಗೆ ತಮ್ಮವೇ ಆದ ಧರ್ಮಮಂದಿರಗಳಾದ ಚರ್ಚ್, ಮಸೀದಿ ಮತ್ತು ಗುರುದ್ವಾರ ಇವೆ. ನಿಮಗೆ ಇಲ್ಲ; ಕಡೆಯ ಪಕ್ಷ ಒಬ್ಬೊಬ್ಬರ ಮನೆಯಲ್ಲಿ ಒಂದು ತಿಂಗಳಿನಂತೆ ಮಾಡಿದರೂ ಹನ್ನೆರಡು ಮನೆಗಳಲ್ಲಿ ಸೇರಬಹುದು ಎಂದು ಹೇಳಿದೆ.

"ಜನರಲ್ಲಿ ಆ ಬಗೆಯ ಲವಲವಿಕೆಯೇ ಇಲ್ಲ" ಎಂದು ಶ್ರೀಮತಿ ವಸಂತ ವಿಷಾದ

ಸೂಚಿಸಿದರು. ''ವಿ.ಎಸ್.ಎಸ್.ಎ.ದವರು ವರ್ಷದಲ್ಲಿ ಒಮ್ಮೆ ಅದ್ದೂರಿ ಸಮ್ಮೇಳನ ಮಾಡುವರು ಮತ್ತು ಸ್ಥಳೀಯವಾಗಿ 4 ಕಾರ್ಯಕ್ರಮ ಮಾಡುವರು. ಆದರೆ ಅವು ಸಾಮಾಜಿಕ ಕೂಟ (social congregatios)ಗಳಾಗಿವೆಯೇ ಹೊರತು ಧಾರ್ಮಿಕ ತರಬೇತಿ ನೀಡುತ್ತಿಲ್ಲ. ಪೂಜೆ, ಪ್ರಾರ್ಥನೆ, ಧ್ಯಾನ ಮುಂತಾದ ಚಟುವಟಿಕೆ ಇರದು. ಹೀಗಾಗಿ ಅಧ್ಯಾತ್ಮಿಕ ಮನೋಭಾವದವರಿಗೆ ಸಮಾಧಾನವಾಗುತ್ತಿಲ್ಲ'' ಎಂದು ಯೋಗಾನಂದ ಪರಮಹಂಸರ ಸಂಘಟನೆ, ಚಿನ್ಮಯ ಮಿಷನ್‌ಗಳಲ್ಲಿ ಸಕ್ರಿಯವಾಗಿ ಪಾಲುಗಾರರಾಗುತ್ತಿರುವ ಕೆಲವು ಅಧ್ಯಾತ್ಮ ಜೀವಿಗಳ ಅಳಲು.

ಮಹೇಶ್ ಅವರ ಮನೆಯ ವಾಸ್ತವ್ಯ ಮುಗಿಸಿ ಪುನಃ ಶೀಲಾ ಶಂಕರ್ ಅವರ ಮನೆಗೆ ಬಂದೆ. ಏಕೆಂದರೆ ಮರುದಿನವೇ ಇಲಿನಾಯ್ ರಾಜ್ಯದಲ್ಲಿರುವ ಚಿಕಾಗೋಗೆ ಪ್ರಯಾಣ ನಿರ್ಧಾರಿತವಾಗಿತ್ತು.

ಚಿಕಾಗೋ ಅತ್ಯಂತ ದೊಡ್ಡ ಪಟ್ಟಣ. ಇಲ್ಲಿ ಅಂತರರಾಷ್ಟ್ರೀಯ ಬೃಹತ್ ವಿಮಾನ ನಿಲ್ದಾಣವಿದೆ. ಭಾರತದಿಂದ ಬರುವಾಗ ಚಿಕಾಗೋ ಮಾರ್ಗವಾಗಿಯೇ ಬಂದೆನಾದರೂ ಒಳಮಾರ್ಗದಲ್ಲೇ ಸಂಚರಿಸಿ ಅಮೆರಿಕಾ ಏರ್‌ಲೈನ್ಸ್ ಮೂಲಕ ಆಸ್ಟಿನ್‌ಗೆ ಬಂದಿದ್ದೆ. ಒಳಗೇ ಸಂಚರಿಸುವ ಟ್ರೇನ್ ಇರುತ್ತವೆ. ಅಂತರರಾಷ್ಟ್ರೀಯ ವಿಮಾನದಲ್ಲಿ ಬಂದಾಗ ಕಸ್ಟಮ್ಸ್ ಕ್ಲಿಯರೆನ್ಸ್ ಮಾಡಿಸಿಕೊಂಡ ಮೇಲೆ ಪುನಃ ಬ್ಯಾಗೇಜ್‌ಗಳನ್ನು ಅವರೇ ತೆಗೆದುಕೊಂಡು ನಮ್ಮ ಅಂತಿಮ ನಿಲ್ದಾಣಕ್ಕೆ ತಲುಪಿಸುವರು. ಎರಡು ತಾಸಿನ ಅಂತರ ಮಾತ್ರ ಇದ್ದುದರಿಂದ ನಿಲ್ದಾಣದಿಂದ ಹೊರಗೆ ಬಂದಿರಲಿಲ್ಲ. ಸೆಪ್ಟಂಬರ್ 4ರಂದು ಸ್ಯಾನ್ ಹೊಸೆ (San Jose)ದಿಂದ ಅಮೆರಿಕಾ ವೆಸ್ಟ್ ಏರ್‌ಲೈನ್ಸ್ ವಿಮಾನದಿಂದ ಹೊರಟೆ. ಶರಣೆ. ಶೀಲಾ ಮತ್ತು ಶರಣ. ಶಂಕರ್ ವಿಮಾನ ನಿಲ್ದಾಣಕ್ಕೆ ಕಳಿಸಲು ಬಂದಿದ್ದರು. ಚಿಕ್ಕವರಾದ ನಾಲ್ಕು ಮಕ್ಕಳನ್ನು ನಿಭಾಯಿಸುತ್ತಲೇ ಅನನ್ಯ ಭಕ್ತಿಯಿಂದ ಶೀಲಾ ಸೇವೆ ಮಾಡಿದಳು.

ಸ್ಯಾನ್‌ಹೊಸೆಯಿಂದ ಹೊರಟ ವಿಮಾನ ಲಾಸ್ ವೇಗಾಸಿ ಮಾರ್ಗವಾಗಿ ಚಿಕಾಗೋಕ್ಕೆ ಹೋಗಬೇಕಿತ್ತು. ಅಲ್ಲಿ ಹವಾಮಾನವು ಅನುಕೂಲಕರವಾಗಿ ಇರದೆ ಅತ್ಯಂತ ತಂಪಾಗಿದ್ದರಿಂದಲೂ ವಿಪರೀತ ಗಾಳಿ ಬೀಸುತ್ತಿದ್ದರಿಂದಲೂ ತಡವಾಗಿ ವಿಮಾನ ಹೊರಟು ತಡವಾಗಿ ತಲುಪಿತು. ರಾತ್ರಿ ಒಂಭತ್ತಕ್ಕೆ ಚಿಕಾಗೋದ ಓ ಹರೇ ವಿಮಾನ ನಿಲ್ದಾಣ ತಲುಪಿ, ಬ್ಯಾಗೇಜ್ ಕ್ಲೈಮ್ ಬಳಿ ಹೋಗುವಷ್ಟರಲ್ಲಿ ಶರಣ. ಗಿರೀಶ್ ನಿಂಬೇಕಾಯಿ ಸ್ವಾಗತಿಸಲು ಬಂದಿದ್ದರು. ಇವರು ಚಿತ್ರದುರ್ಗದವರು. 1987 ರಲ್ಲಿ ನಮ್ಮ ಪ್ರವಚನವಾದಾಗ ಇವರ ತಂದೆ ಲಿಂ॥ ವಿರುಪಾಕ್ಷಪ್ಪನವರು ತಪ್ಪದೆ ಬರುತ್ತಿದ್ದರು ಮತ್ತು ಸಂಸ್ಥೆಗೆ ಕಾಣಿಕೆಯನ್ನು ಕೊಟ್ಟಿದ್ದರು. ಚಿತ್ರದುರ್ಗ ರಾಷ್ಟ್ರೀಯ ಬಸವ ದಳ ಟ್ರಸ್ಟ್‌ನವರು ಬಸವ ಮಂಟಪ ಕಟ್ಟುವಾಗ ಕಾಣಿಕೆ ಕೊಟ್ಟಿದ್ದರು. ಇವರ ಬೀಗರಾದ ಜಂತ್ಲಿ ವೀರಬಸಪ್ಪನವರಂತೂ ಕಡೆಯ ಕ್ಷಣದವರೆಗೆ ಬಸವ ತತ್ತ್ವ ಪ್ರಚಾರದಲ್ಲಿ ಸಕ್ರಿಯವಾಗಿದ್ದರು. 1987ರಲ್ಲಿ ಇನ್ನು ಪಿ.ಯು.ಸಿ ಓದುತ್ತಿದ್ದ ಗಿರೀಶ್ ಈಗ ಇಂಜನಿಯರ್ ಆಗಿ ಇದ್ದಾರೆ. ಅವರ ಪತ್ನಿ ಡಾ॥ ರೇಖಾ ಡೆಂಟಲ್ ವೈದ್ಯರಾಗಿದ್ದಾರೆ. ಅವರ ತಾಯಿತಂದೆ ಹುಬ್ಬಳ್ಳಿಯಲ್ಲಿ, ದಾವಣಗೆರೆಯಲ್ಲಿ ಪ್ರವಚನ ಕೇಳಿದ್ದು ಹಳೆಯ ನೆನಪುಗಳನ್ನು ಚಿತ್ತಕ್ಕೆ ತಂದುಕೊಂಡರು. ಉಭಯತರೂ ತಮ್ಮ ಒತ್ತಡದ

ಕಾರ್ಯಭಾರದ ನಡುವೆಯೂ ಭಕ್ತಿಪೂರ್ಣವಾಗಿ ಸೇವೆ ಮಾಡಿದರು.

ಅತ್ಯಂತ ಸುಂದರ ನಗರಗಳಲ್ಲಿ ಚಿಕಾಗೋ ಕೂಡ ಒಂದು. ಗಗನ ಚುಂಬಿ ಕಟ್ಟಡಗಳು ನಗರದ ಪ್ರಮುಖ ಆಕರ್ಷಣೆ. ಲೇಕ್ ಮಿಚಿಗನ್ ದಂಡೆಯ ಮೇಲಿರುವ ಈ ನಗರ ನ್ಯೂಯಾರ್ಕ್ ನಂತರದ ಅತಿ ದೊಡ್ಡ ನಗರ. ಗಿರೀಶ್ ನಿಂಬೇಕಾಯಿ ಅವರು ಮಿಚಿಗನ್ ಸರೋವರ ತೋರಿಸಲು ಕರೆದೊಯ್ದರು. ಆಸ್ಟಿನ್, ಸ್ಯಾನ್ ಹೊಸೆಗಿಂತ ತಂಪು ಹವೆ. ಸರೋವರದ ಮೇಲೆ ಬೀಸಿ ಬರುವ ತಂಗಾಳಿ ಬೇರೆ. ರಾತ್ರಿಯಾಗಿದ್ದರಿಂದ ಇಡೀ ನಗರ ಥಳಥಳಿಸುತ್ತಿತ್ತು. ನಗರದ ಕೇಂದ್ರ ಪ್ರದೇಶದಲ್ಲಿರುವ ಗಗನ ಚುಂಬಿ ಕಟ್ಟಡಗಳಲ್ಲಿ ರಾತ್ರಿ ಇಡೀ ದೀಪ ಹಚ್ಚಿರಬೇಕಂತೆ ಪೂರಾ ಮೇಲೆ ಗೋಪುರಗಳನ್ನು ಬಗೆಬಗೆಯಾಗಿ ಅಲಂಕರಿಸುತ್ತಾರೆ. ಸರೋವರದ ದಂಡೆಯ ಮೇಲೆ ತಿರುಗುವ ತೊಟ್ಟಿಲು ಚಕ್ರ. ದೀಪಾಲಂಕಾರಗೊಂಡ ಅಂಗಡಿಗಳು ಗ್ರಾಹಕರನ್ನು ಆಕರ್ಷಿಸಲು ಅಂಗಡಿಗಳ ಮುಂದೆ ಲೈವ್ ಬ್ಯಾಂಡ್ ವಾದ್ಯಗೋಷ್ಠಿ. ಹುಣ್ಣಿಮೆ ಹತ್ತಿರದಲ್ಲಿ ಇದ್ದುದರಿಂದ ಶುಭ್ರ ನೀಲಾಗಸದಲ್ಲಿ ಚಂದ್ರನು ಹೊಳೆಯುತ್ತಿದ್ದ. ಸ್ಪೀಡ್ ಬೋಟ್‌ದ ಟಿಕೆಟ್‌ಕೊಂಡು ಗಿರೀಶರು ಕರೆದೊಯ್ದರು. ಸಮುದ್ರದಂತೆ ವಿಸ್ತಾರವಾಗಿ ಹರಡಿನಿಂತ ಮಿಚಿಗನ್ ಸರೋವರ. ನಿರೂಪಕ ಹೇಳುತ್ತಿದ್ದ ''ಜಗತ್ತಿನಲ್ಲೇ ಇದು ಎರಡನೆಯ ಶುದ್ಧವಾದ ಸಿಹಿ ನೀರು'' ಎಂದು. ಮತ್ತು ನೀರು ಮಲಿನಗೊಳ್ಳದಂತೆ ಸರ್ಕಾರವು ವಿಪರೀತ ಎಚ್ಚರಿಕೆ ವಹಿಸಿದೆ. ಮೊದಲನೆಯ ಶುದ್ಧನೀರು ಯಾವುದು ಎಂದು ಆತ ಹೇಳಲಿಲ್ಲ. ಮಾನಸ ಸರೋವರ ಇರಬಹುದು ಎಂದು ನಾನು ತರ್ಕಿಸಿದೆ. ಏಕೆಂದರೆ ಅಲ್ಲಿ ಮಲಿನ ಮಾಡಲು ಮನುಷ್ಯರ ವಸತಿಯೇ ಇಲ್ಲವಲ್ಲ!

ಸುಮಾರು ಹತ್ತೊಂಭತ್ತು ಮೈಲಿ ಸರೋವರದಲ್ಲಿ ಸುತ್ತಾಡಿಸಿ ಸ್ಪೀಡ್ ಬೋಟ್ ಪ್ರವಾಸಿಕರನ್ನು ಕರೆತಂದು ಬಿಟ್ಟಿತು. ಸರೋವರದಲ್ಲಿ ಸಾಗುತ್ತ ಸ್ಪೀಡ್ ಬೋಟಲ್ಲಿ ಕುಳಿತು ಬೆಳುದಿಂಗಳ ಚಂದ್ರನನ್ನು, ಮಾನವ ರೂಪಿತ ವಿದ್ಯುತ್ ದೀಪಗಳಿಂದ ಅಲಂಕೃತವಾದ ಗಗನ ಚುಂಬಿ ಕಟ್ಟಡಗಳನ್ನು ನೋಡುವುದು ಒಂದು ಅಪೂರ್ವ ಅನುಭವ. ಬೋಟ್ ವೇಗವಾಗಿ ಸಾಗುವಾಗ ನೀರಿನ ಅಲೆಗಳು ಮೇಲೆದ್ದು ತುಂತುರು ಹನಿಗಳು ಚಿಮ್ಮುವಾಗ ಸಹರ್ಷದಿಂದ ಚಂದ್ರನು ಕುಣಿದಾಡುವಂತೆ ಎನಿಸುತ್ತಿತ್ತು. ಗಡಗಡ ನಡುಗಿಸುವ ಚಳಿಯಲ್ಲೇ ಸರೋವರವನ್ನು ಸುತ್ತಿ ಬಂದಾಗ ರಾತ್ರಿ 10 ಗಂಟೆ. ಮರುದಿವಸ ಶರಣೆ. ಓಂಕಾರಿ ಮತ್ತು ಶರಣ. ಸಿದ್ಧರಾಮ ಹಿರೇಮಠ ಅವರ ಮನೆಗೆ ರೇಖಾ ಮತ್ತು ಗಿರೀಶ್ ಕರೆದೊಯ್ದರು. ಶರಣೆ. ಓಂಕಾರಿ, ಶರಣ. ಮಾಸೂರು ಉಮಾಪತಿಯವರ ಸಹೋದರಿ. 1976ರಲ್ಲಿ ನಾನು ಇಂಗ್ಲೆಂಡ್ ಸಂದರ್ಶಿಸಿದಾಗ ಅಣ್ಣ ಮತ್ತು ತಾಯಿಯೊಡನೆ ಅಲ್ಲಿದ್ದು ನಂತರ ಶ್ರೀ ಸಿದ್ಧರಾಮ ಹಿರೇಮಠರನ್ನು ವಿವಾಹವಾಗಿ ಇಲ್ಲಿ ನೆಲೆಸಿದ್ದಾರೆ. ಮರುದಿನ ಅವರು ಚಿಕಾಗೋದ ಸಂದರ್ಶನೀಯ ಸ್ಥಳಗಳಲ್ಲಿ ಒಂದಾದ ಬಹಾಯಿ ಟೆಂಪಲ್ ನೋಡಲು ಕರೆದೊಯ್ದರು. ಅವರ ಮನೆಯಿಂದ ಸುಮಾರು ಒಂದೂಕಾಲು ತಾಸು ಕಾರಿನಲ್ಲಿ ಸಾಗಿದ ಮೇಲೆ ಅದು ಸಿಕ್ಕಿತು.

ಸುಂದರವಾದ ತೋಟದ ಮಧ್ಯೆ ಸ್ತೂಪದಾಕೃತಿಯಲ್ಲಿ ಕಟ್ಟಲಾಗಿದೆ. ದೆಹಲಿಯ ಲೋಟಸ್ ಟೆಂಪಲ್ (ಕಮಲದಾಕೃತಿಯ ದೇವಾಲಯ)ಗೆ ಇರುವಷ್ಟು ವಿಸ್ತಾರವಾದ ಪ್ರದೇಶ ಇಲ್ಲಿಲ್ಲ. ಅಲ್ಲಿಯ ಮಂದಿರ ಅಗಲವಾಗಿದೆ. ಇಲ್ಲಿಯದು ಎತ್ತರವಾಗಿದೆ. ಓರ್ವ ಶ್ರೀಮಂತ ಮಹಿಳೆ, ಬಹಾಯಿ ಪಥಿಕಳು

ಇದರ ಮುಖ್ಯ ದಾನಿ. ಬಹಾವುಲ್ಲಾ ಆಗಿ ಹೋಗಿ ಬಹಳ ವರ್ಷಗಳೇನಾಗಿಲ್ಲ ಮತ್ತು ಅವರ ಸಂದೇಶವೂ ಹೊಸದೇನಲ್ಲ. ಇಸ್ಲಾಂ ಮೂಲದವರಾದರೂ ಅವರು ಸರ್ವಧರ್ಮ ಸಮಾನತೆ, ಸಹಿಷ್ಣುತೆ ಹೇಳಿ ಮತಾಂಧತೆಯನ್ನು ಖಂಡಿಸಿದರು. ಇದಕ್ಕಾಗಿ ಅವರು ಇಸ್ಲಾಂ ಮತಾಂಧ ಕಾನೂನಿನಿಂದ ಹೆಚ್ಚಿನ ಕಾಲವನ್ನು ಜೈಲಿನಲ್ಲೇ ಕಳೆದರು. ಇದು ಒಂದು ಪಂಥ (cult) ಮಾತ್ರ. ಆದರೆ ಅವರ ಅನುಯಾಯಿಗಳು ಎಂಥಾ ಶ್ರದ್ಧೆ ಹೊಂದಿದ್ದಾರೆಂದರೆ ತಮ್ಮ ತನುಮನಧನಗಳನ್ನೆಲ್ಲ ಧಾರೆ ಎರೆದು ಜಗತ್ತಿನಾದ್ಯಂತ ದೆಹಲಿ (ಇಂಡಿಯಾ), ಸಿಡ್ನಿ (ಆಸ್ಟ್ರೇಲಿಯಾ) ಸೇರಿದಂತೆ ಏಳೆಂಟು ಕಡೆಗಳಲ್ಲಿ ಬೃಹತ್ ದೇವಾಲಯಗಳನ್ನು ಕಟ್ಟಿದ್ದಾರೆ. ಇದರಲ್ಲಿ ಒಳಗಡೆ ಆರು ದಳಗಳಂತೆ ಆರು ತೊಲೆ (Beam) ಗಳಿದ್ದು ವಿವಿಧ ಧರ್ಮಗಳ ಹೆಸರು ಬರೆಯಲಾಗಿದೆ. ಆರು ಕಂಭಗಳ ಮೇಲೆ ಆಯಾ ಧರ್ಮಗಳ ಲಾಂಛನ ಇವೆ. ಯಾವುದೇ ಮೂರ್ತಿ ಏನೂ ಇರುವುದಿಲ್ಲ. ಅಲ್ಲಲ್ಲೇ ಬಹಾಯಿವುಲ್ಲ ಅವರ ಸಂದೇಶಗಳನ್ನು ಬರೆದಿರುತ್ತಾರೆ. ನೆಲ ಮಾಳಿಗೆಯಲ್ಲಿ ಒಂದು ಪ್ರದರ್ಶನ ಶಾಲೆ ಇದ್ದು ಬಹಾಯಿವುಲ್ಲ ಅವರ ಜೀವನ, ಸಂದೇಶ, ವಿವಿಧ ಸ್ಥಳಗಳಲ್ಲಿರುವ ಬಹಾಯಿ ಮಂದಿರಗಳ ವಿವರಗಳಿವೆ, ಒಂದು ಫಿಲ್ಮ್ ಶೋ ಸಹ ಇದೆ. ಅದನ್ನು ಹಾಕುತ್ತಲೇ ಇರುತ್ತಾರೆ. ಚಿಕಾಗೋದಲ್ಲಿರುವ ಬಹಾಯಿ ಟೆಂಪಲ್ ಕಟ್ಟಿದ ವಿವರಗಳನ್ನು ಅದರಲ್ಲಿ ನೀಡುತ್ತಾರೆ.

ಜಗತ್ತಿನ ಎಲ್ಲ ಧರ್ಮಗಳವರು ಎಂತೆಂತಹ ಸ್ಮಾರಕಗಳನ್ನು ರಚಿಸಿದ್ದಾರೆ. ಬಹಾಯಿ ಪಂಥವಂತೂ ತೀರಾ ಇತ್ತೀಚಿನದು. ಸ್ವಲ್ಪ ಕಾಲ ನಮ್ಮ ದೇಶದಲ್ಲೂ ಕೇಳಿ ಬಂದಿತು. ಆದರೆ ನಂತರ ಅದರ ಸುದ್ದಿ ಇಲ್ಲ. ದೆಹಲಿಯಲ್ಲಿ ಬೃಹತ್ ಲೋಟಸ್ ಟೆಂಪಲ್ ಇದೆ ಅಷ್ಟೆ. ಆದರೆ ಅನುಯಾಯಿಗಳು ಬೃಹತ್ ಸ್ಮಾರಕ ರಚಿಸಿ ಸಂದರ್ಶಕರು ತಮ್ಮಲ್ಲಿಗೆ ಬರುವಂತೆ ಮಾಡುವುದು ಗಮನಾರ್ಹ. ಚಿಕಾಗೋದಲ್ಲಿ ಪ್ರವೇಶ ಶುಲ್ಕವಿಲ್ಲ. ವಿಪರೀತ ಸಿಬ್ಬಂದಿ; ತೋಟವಿದೆ. ಹೇಗೆ ಖರ್ಚು ನಿಭಾಯಿಸುತ್ತಾರೆ ಎಂಬುದೇ ಆಶ್ಚರ್ಯಕರ ಸಂಗತಿ. ಬಹಾಯಿಗಳಲ್ಲದವರಿಂದ ಅವರು ಡೊನೇಷನ್ ಪಡೆಯುವುದಿಲ್ಲ ಎಂದು ಯಾರೋ ತಿಳಿಸಿದರು. ದೆಹಲಿ, ಚಿಕಾಗೋ, ಸಿಡ್ನಿಯ ಮಾತು ಅತ್ತಲಿರಲಿ ಬಸವಾದಿ ಪ್ರಮಥರಿಗೆ ತಮ್ಮ ಸ್ಥಳಗಳಲ್ಲೇ ಸ್ಮಾರಕಗಳಿಲ್ಲ ಎಂಬುದನ್ನು ಸ್ಮರಿಸಿಕೊಂಡಾಗ ನಮ್ಮ ಸಮಾಜದ ನಿರಭಿಮಾನ, ಆಂತರಿಕ ಕಲಹ, ದಾರಿದ್ರ್ಯ ಬಟ್ಟಬಯಲಾಗುತ್ತದೆ.

ಮರಳಿ ಸಿದ್ದರಾಮ ಹಿರೇಮಠರ ಮನೆಗೆ ಬಂದು ಬೇಗನೆ ಪ್ರಸಾದ ಮುಗಿಸಿ ಹಿಂದೂ ಟೆಂಪಲ್‌ದಲ್ಲಿ ಏರ್ಪಡಿಸಲಾದ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳಿದೆವು. ಹಿರಿಯರಾದ ಶರಣ. ಜಯಸ್ವಾಮಿಯವರು, ಅಧ್ಯಕ್ಷತೆ ವಹಿಸಿದ್ದರು. ವಿ.ಎಸ್.ಎನ್.ಎ. ಅಧ್ಯಕ್ಷ ಶರಣ. ವಿರುಪಣ್ಣನವರು ಸ್ವಾಗತಿಸಿದರು. ಶರಣ. ಗಿರೀಶ್ ನಿಂಬೇಕಾಯಿ ಪರಿಚಯ ಮಾಡಿಕೊಟ್ಟರು. ಸಾಕಷ್ಟು ಕುಟುಂಬಗಳವರು ಪ್ರಾರ್ಥನೆ, ಭಜನೆ ಮತ್ತು ಪ್ರವಚನದಲ್ಲಿ ಭಾಗಿಗಳಾಗಿದ್ದರು. ಕನ್ನಡ ಕೂಟದ ಅಧ್ಯಕ್ಷೆ ಶ್ರೀಮತಿ. ವಾಸಂತಿ ಗೌಡ ಅವರು ವಿಶೇಷ ಆಹ್ವಾನಿತರಾಗಿ ಬಂದಿದ್ದರು. ಅನೇಕ ಮಕ್ಕಳು ವಚನಗಳನ್ನು ಹಾಡಿದರು. ಪ್ರವಚನದ ನಂತರ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು.

ಹಾಸನದ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರಾಗಿದ್ದ ಲಿಂ|| ಶರಣ. ರಾಜಶೇಖರಯ್ಯನವರ ಹಿರಿಯ ಮಗಳು ಶರಣೆ. ಭುವನ ಮತ್ತು ಅವರ ಪತಿ ಶರಣ. ಶೀಲಾಚಂದ್ರ

ಕಾರ್ಯಕ್ರಮದಲ್ಲಿ ಭಾಗಿಗಳಾಗಿ ನಂತರ ತಮ್ಮ ಮನೆಗೆ ಕರೆದೊಯ್ದರು. ಅವರ ಮನೆಗೆ ಸಮೀಪದಲ್ಲಿದ್ದ ವಿಶ್ವವಿದ್ಯಾಲಯ ಕ್ಯಾಂಪಸ್‌ಗೆ ವಾಯುವಿಹಾರಕ್ಕೆ ಹೋದೆವು. ಅತ್ಯಂತ ಸುಂದರ ಮತ್ತು ಪ್ರಶಾಂತ ಪರಿಸರದಲ್ಲಿ ಲೇಕ್ ಮಿಚಿಗನ್‌ದ ದಂಡೆಯ ಮೇಲೆ ವಿಶ್ವವಿದ್ಯಾಲಯದ ಆವರಣವಿದೆ. ಡೌನ್ ಟೌನ್ ಎಂಬ ನಗರ ಮಧ್ಯದ ಪ್ರದೇಶವು ಅತ್ಯಂತ ಜನ ಸಾಂದ್ರತೆಯಿಂದ ಗಿಜಿಗುಟ್ಟುತ್ತಿದ್ದರೆ ವಿಶ್ವವಿದ್ಯಾಲಯ ಆವರಣವು ಅತ್ಯಂತ ಪ್ರಶಾಂತವೆನಿಸುತ್ತಿತ್ತು. ಸರೋವರದ ಮೇಲೆ ಬೀಸಿ ಬರುವ ತಂಗಾಳಿಯ ಪರಿಶುದ್ಧತೆಯನ್ನು ಶ್ವಾಸಕೋಶಗಳು ಅನುಭವಿಸಿ ಹರ್ಷಗೊಂಡವು.

ಚಿಕಾಗೋದಲ್ಲಿ ನೋಡಬಹುದಾದ ಸ್ಥಳಗಳು ಬಹಳ ಇದ್ದರೂ ಕೆಲಸದ ಒತ್ತಡದಲ್ಲಿ ನಮ್ಮನ್ನು ನಗರ ಸಂದರ್ಶನಕ್ಕೆ ಕರೆದೊಯ್ಯಲು ಆಗದ್ದಕ್ಕೆ ಭುವನಾ ಮತ್ತು ಶೀಲಚಂದ್ರ ದಂಪತಿಗಳು ಚಟಪಟಿಸುತ್ತಿದ್ದರು. ಅವರು ಉದ್ಯೋಗ ಮಾಡುತ್ತಿರುವ ದಿವಾನ್ ಸ್ಟ್ರೀಟ್ ಎಂಬಲ್ಲಿಗೆ ಒಮ್ಮೆ ಕರೆದೊಯ್ದರು. ಅದನ್ನು ನೋಡಿದರೆ ಪುಟ್ಟ ಭಾರತವನ್ನು ನೋಡಿದಂತೆ ಆಗುತ್ತಿತ್ತು. ಸೀರೆ ಅಂಗಡಿ, ಭಾರತೀಯ ವಿವಿಧ ವೇಷ ಭೂಷಣಗಳ ಅಂಗಡಿ, ಆಭರಣಗಳ ಅಂಗಡಿ, ತರಕಾರಿ ಮಳಿಗೆ, ಕಿರಾಣಿ ಅಂಗಡಿ ಸಮಗ್ರ ಭಾರತದ ಎಲ್ಲ ವಸ್ತುಗಳೂ ಅಲ್ಲಿ ಸಿಗುತ್ತವೆ. ರುದ್ರಾಕ್ಷಿ ಮಾಲೆ, ಇನ್ನಿತರ ಪೂಜಾ ಸಾಮಗ್ರಿ, ಪೂಜಾ ಮಂಟಪ, ಸುಂದರ ಭಾವಚಿತ್ರಗಳು, ಕಲಾಕೃತಿಗಳು, ದೇವತಾ ಮೂರ್ತಿಗಳು ಒಂದಕ್ಕಿಂತ ಒಂದು ಚೆಂದ. ಹಾಗೆಯೇ ಉಡುಪಿ ಭವನ ಬೋರ್ಡ್ ಹೊಂದಿತ್ತು. ಚಿಕಾಗೋದ ಸಮೀಪದ ಊರುಗಳವರು ಬಂದು ಶಾಪಿಂಗ್ ಮಾಡಿ, ಭಾರತೀಯ ಖಾದ್ಯಗಳನ್ನು ಸವಿದು ಹೋಗುವರಂತೆ. ಮಧ್ಯೆ ಇದ್ದ ಬೆಂಚುಗಳ ಮೇಲೆ ಭಾರತೀಯ ಅಜ್ಜ-ಅಜ್ಜಿಯರು ಕುಳಿತು ಸುಖದುಃಖವಿನಿಮಯ ಮಾಡಿಕೊಳ್ಳುತ್ತಿದ್ದರು. ಗುಜರಾತಿ ಜನರು ದೊಡ್ಡ ದೊಡ್ಡ ವ್ಯಾಪಾರಿ ಮಳಿಗೆ ಹೊಂದಿದ್ದಾರೆ. ವ್ಯಾಪಾರ ಕ್ಷೇತ್ರದಲ್ಲಿ ಭಾರತೀಯರಲ್ಲಿ ಅವರದು ಮತ್ತು ಪಂಜಾಬಿ ಜನರದು, ಮುಖ್ಯವಾಗಿ ಸಿಖ್ಖರದು ಮೇಲುಗೈ. ದಕ್ಷಿಣ ಭಾರತದವರು ಹೆಚ್ಚಾಗಿ ದುಡಿಯಲಿಕ್ಕೆ ಅಂದರೆ ಹೆಚ್ಚು ಶಿಕ್ಷಿತರಾಗಿ ನೌಕರಿ ಮಾಡಲಿಕ್ಕೆ ಬಂದಿದ್ದಾರೆ. 30-40 ವರ್ಷಗಳ ಹಿಂದೆ ಬಂದ ವೈದ್ಯರುಗಳು ವಿಪರೀತ ಹಣ ಗಳಿಸಿದ್ದಾರೆ ಮತ್ತು ಬಹುತೇಕ ಜನರು ಧಾರ್ಮಿಕ ಸಂಸ್ಕೃತಿಯನ್ನು ಬಿಟ್ಟು ತಮ್ಮ ಧರ್ಮ-ಸಮಾಜಗಳಿಂದ ದೂರವಿರುತ್ತಾರೆ. ಇದು ಹೆಚ್ಚಾಗಿ ಲಿಂಗಾಯತರಲ್ಲಿ ಕಾಣಬರುವ ನಡತೆ. ಆದರೆ ಪಂಜಾಬಿಗಳು, ಸಿಖ್ಖರು, ಗುಜರಾತಿಗಳು ಮುಂತಾದವರಲ್ಲಿ ಎಷ್ಟೇ ಶ್ರೀಮಂತರಿದ್ದರೂ ಅವರು ತಮ್ಮ ಸಮಾಜಗಳ, ಧಾರ್ಮಿಕ ಪರಂಪರೆಯ ಸಂಪರ್ಕ ಕಡಿದುಕೊಂಡಿಲ್ಲ ಎಂಬುದು ಬಹಳ ಗಮನಾರ್ಹ. ಫ್ರೆಸ್ನೋದಲ್ಲಿ ಶರಣ. ಡಾ|| ನಾಗಭೂಷಣ್ ಸಕ್ರಿಯವಾಗಿರುವ ಹಿಂದೂ ಟೆಂಪಲ್ ಪರಿಸರದಲ್ಲಿ ಅಧ್ಯಕ್ಷ ಡಾ|| ರಾಜೀವ್ ವರ್ಮ ಅವರಿಂದಲೋ ಏನೋ ಬಹಳ ಜನ ವೈದ್ಯರು ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದರು.

ಚಿಕಾಗೋದಲ್ಲಿ ವಿ.ಎಸ್.ಎನ್.ಎ.ಯವರ ಕಾರ್ಯಕ್ರಮದಲ್ಲಿ ಭಾಗಿಯಾಗಿ ಶರಣೆ. ಭುವನ ಅವರ ಮನೆಗೆ ಬಂದು ಪೂಜೆ-ಪ್ರಸಾದ ಮಾಡಿ ಮಲಗಿದೆ. ರಾತ್ರಿ ಒಂದು ಹೊತ್ತಿಗೆ ಬಲಗೈ ಮುಂಗೈಯಲ್ಲಿ ವಿಚಿತ್ರವಾಗಿ ನೋವು ಕಾಣಿಸಿತು; ಆಶ್ಚರ್ಯವೆನಿಸಿತು. ಎಲ್ಲಿಯೂ ಜಾರಿದ ನೆನಪು ಇಲ್ಲ. ಉಳುಕಿರಬೇಕು ಎಂದುಕೊಳ್ಳಲು. ಬೆಳಿಗ್ಗೆ ಎದ್ದು ನೋಡಿದರೆ ಕೈ ಮತ್ತು ಬೆರಳುಗಳು

ಊದಿಕೊಂಡು ಆಡಿಸಲು ಬರದಂತಾಗಿತ್ತು. ಬೆರಳು ಮಡಚಲು ಬರುತ್ತಿಲ್ಲ. ಊಟ ಮಾಡಲು ಸಾಧ್ಯವಾಗುತ್ತಿಲ್ಲ. ಸೀರೆ ಉಡಲು ಸಹ ಕೈ ಬೆರಳಿಗೆ ಸಾಧ್ಯವಾಗುತ್ತಿಲ್ಲ. ಕೈ ಎತ್ತಲು ಬರುತ್ತಿಲ್ಲ. ವಿಪರೀತ ಎಳೆತ. ನನಗೆ ಆತಂಕ ಶುರುವಾಯಿತು. ಬರುವಾಗ ಹೆಲ್ತ್ ಇನ್ಸೂರೆನ್ಸ್ ಮಾಡಿಸಿರಲಿಲ್ಲ. ಇಪ್ಪತ್ತೈದು ಸಾವಿರ ರೂ. ಎಂದುದಕ್ಕೆ, ಮೊದಲೇ ಸಾಲದಲ್ಲಿ ಬಳಲುತ್ತಿರುವ (ಬಸವ ಕಲ್ಯಾಣದಲ್ಲಿ ಜಾಗ ಖರೀದಿಸಲು ಬಹಳಷ್ಟು ಸಾಲವನ್ನು ಭಕ್ತರಿಂದ ಪಡೆಯಲಾಗಿದೆ. ಕೆಲವಷ್ಟು ಬಡ್ಡಿಯ ಮೇಲೂ ಪಡೆದು ತೀರಿಸಲಾಗುತ್ತಿದೆ. ಇದು ನಮ್ಮ ಆತ್ಮೀಯ ಶರಣ ಸಮೂಹಕ್ಕೆ ತಿಳಿದಿರುವ ವಿಷಯ) ಸಂಸ್ಥೆಯ ಮೇಲೆ ಇನ್ನಷ್ಟು ಭಾರ ಹಾಕುವುದು ಬೇಡ ಎಂದು ಇನ್ಸೂರೆನ್ಸ್ ತಗೊಂಡಿರಲಿಲ್ಲ. ಇಲ್ಲಿ ವೈದ್ಯಕೀಯ ಚಿಕಿತ್ಸೆ ಸಿಕ್ಕಾಪಟ್ಟೆ ದುಬಾರಿ. ಭಾರತೀಯರು ಊಹೆ ಮಾಡಲು ಸಾಧ್ಯವಿಲ್ಲ. ಇಲ್ಲಿಯ ಜನರು ನಿರಂತರವಾಗಿ ಹೆಲ್ತ್ ಇನ್ಸೂರೆನ್ಸ್ ಕಟ್ಟುವರು. ಹೀಗಾಗಿ ಅವರಿಗೆ ಅನಾರೋಗ್ಯವಾದಾಗ ವೈದ್ಯರು, ವೈದ್ಯಕೀಯ ಚಿಕಿತ್ಸಾಲಯಗಳು ಇನ್ಸೂರೆನ್ಸ್ ಕಂಪನಿಯಿಂದ ಹಣಪಡೆಯುವರು. ಪ್ರವಾಸಿಕರಿಗೆ ಇನ್ಸೂರೆನ್ಸ್ ಇಲ್ಲದಿದ್ದರೆ ಯಾವ ವೈದ್ಯರೂ ನೋಡುವುದಿಲ್ಲ. ಖಾಸಗಿಯಾಗಿ ತೋರಿಸಿದರೆ ಅವರ ಫೀ ತೀರ ದುಬಾರಿ. ಬಹಳ ಕಷ್ಟದಿಂದ ಸ್ನಾನ-ಪೂಜೆ-ಉಪಾಹಾರ ಮುಗಿಸಿದೆ. ''ಹೃದಯಕ್ಕೆ ಸಂಬಂಧಿಸಿ ಆಘಾತವಾದಾಗ ಭುಜದಿಂದ ಬೆರಳ ತುದಿಯವರೆಗೆ ಚಣಚಣ ಹೊಡೆತ ಇರುತ್ತದೆ, ಉಸಿರಾಟಕ್ಕೆ ತೊಂದರೆಯಾಗುತ್ತದೆ. ಸಿಕ್ಕಾಪಟ್ಟೆ ಬೆವರು ಬರುತ್ತದೆ'' ಎಂದು ಓದಿದ್ದೆ ಹಾಗೂ ಪೂಜ್ಯ ಅಪ್ಪಾಜಿಯವರಿಗೆ ಹೃದಯಾಘಾತವಾದಾಗ ನೋಡಿದ್ದೆ. ಎಡಗೈಯಲ್ಲಿ ಎಳೆತ ಇರಲಿಲ್ಲ; ಬೆವರು ಬರುತ್ತಿರಲಿಲ್ಲ. ಆದ್ದರಿಂದ ಹೃದಯಕ್ಕೆ ಸಂಬಂಧಿಸಿದ್ದಲ್ಲ ಎಂದುಕೊಂಡೆ. 1994ರಲ್ಲಿ ಕೂಡಲ ಸಂಗಮದಿಂದ ಬೆಂಗಳೂರಿಗೆ ಬರುವಾಗ ಕಳ್ಳಂಬೆಳ್ಳ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ತುಮಕೂರಿಗೆ 22 ಕಿಲೋ ಮೀಟರ್ ದೂರದಲ್ಲಿ ಬಹುದೊಡ್ಡ ಕಾರಿನ ಅಪಘಾತವಾದಾಗ ಎಡಗೈ ಮುಂಗೈ ಬಳಿ ಮುರಿತ (fracture) ಆಗಿತ್ತು. ಅದೇ ಲಕ್ಷಣ ಬಲಗೈ ಮುಂಗೈ ಬಳಿ ಈಗ ಕಾಣುತ್ತಿತ್ತು. ಮೂಳೆ ಮುರಿತ ಆಗಿದೆ ಎಂದುಕೊಂಡೆ. ಇನ್ನು ಚಿಕಿತ್ಸೆ ಹೇಗೆ ? ಎಂಬುದೊಂದು ಚಿಂತೆ. ಭಾರವಾದ ರೋಲಿಂಗ್ ಬ್ಯಾಗ ಎಳೆದುಕೊಂಡು ಬರುವಾಗ ಈ ಮುರಿತ ಆಗಿರಬೇಕು. ಇನ್ನು ಮುಂದಿನ ಸಂಚಾರ (tour) ಹೇಗೆ ಸಾಧ್ಯ? ಸಾಮಾನು ಎತ್ತಿಡಲೂ ಸಾಧ್ಯವಿಲ್ಲ. ಪ್ಲ್ಯಾಸ್ಟರ್ ಹಾಕಿದರೆ ಎಳೆದುಕೊಂಡು ಹೋಗಲೂ ಬರದು ಎಂದೆಲ್ಲ ಆಲೋಚಿಸಿ ಭುವನ ಅವರಿಗೆ ವಿವರಿಸಿ ಹೇಳಿ, ''ಪಿಟ್ಸ್‌ಬರ್ಗ್‌ಗೆ ಚನ್ನರಸಪ್ಪ ಅವರಿಗೆ ಫೋನ್ ಮಾಡಿ ಕಾರ್ಯಕ್ರಮಗಳನ್ನು ರದ್ದು ಪಡಿಸಲು ಹೇಳಿರಿ. ಯೋಗೀಶ್ವರಿ ಅವರಿಗೆ ಫೋನ್ ಮಾಡಿ ಮುಂದಿನ ಕಾರ್ಯಕ್ರಮಗಳನ್ನು ರದ್ದು ಪಡಿಸಲು ಹೇಳಿರಿ. ನನ್ನ ಟಿಕೆಟ್ ಚಿಕಾಗೋದಿಂದ ಲಂಡನ್ ಮಾರ್ಗವಾಗಿ ಮುಂಬೈಗೆ ಇದೆ. ಇಲ್ಲಿಂದಲೇ ಹೊರಟು ಬಿಡುತ್ತೇನೆ. ಬ್ರಿಟಿಷ್ ಏರ್‌ವೇಸ್‌ಗೆ ಫೋನ್ ಮಾಡಿ ಸೀಟ್ ಸಿಗುವುದಾ ನೋಡಿರಿ'' ಎಂದು ತಿಳಿಸಿದೆ. ಭುವನಾ ಅವರಿಗೆ ತುಂಬಾ ಕಳವಳವಾಯಿತು. ''ನೀವು ಉದಾತ್ತ ಉದ್ದೇಶದಿಂದ ಬಂದಿದ್ದೀರಿ. ಪೂರ್ಣ ಪ್ರವಾಸ ಮುಗಿಸಿ ಹೋಗಬೇಕೆಂದೇ ನಮ್ಮಾಸೆ. ಇಲ್ಲಿಯ ಡಾಕ್ಟರ್ ಅಧಿಕೃತವಾಗಿ ನೋಡುವುದಿಲ್ಲ. ನನ್ನ ಸ್ನೇಹಿತೆ ಒಬ್ಬರು ಡಾ|| ರೋಹಿಣಿ ಎಂಬುವವರು ಇದ್ದಾರೆ. ಅವರ ಪತಿ ಮತ್ತು ಇವರು ಇಬ್ಬರೂ ವೈದ್ಯರು. ಒಬ್ಬರು ದುಡಿಯುವುದು ಸಾಕು ಎಂದು ಡಾ|| ರೋಹಿಣಿ ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿರುವ

ಕನ್ನಡಿಗರು'' ಎಂದು ಡಾ|| ರೋಹಿಣಿಗೆ ಫೋನ್ ಮಾಡಿದಾಗ ಅವರು ಲಕ್ಷಣಗಳನ್ನು ಕೇಳಿ ''ಇದು ಹೃದಯಕ್ಕೆ ಸಂಬಂಧಿಸಿ ಬಂದಿರುವ ಸೆಳೆತವಲ್ಲ. ಕೈ ಮುರಿದಿರಲಿಕ್ಕಿಲ್ಲ; ಉಳುಕಿದೆ. ಪೆಯಿನ್ ಕಿಲ್ಲರ್ (ನೋವು ನಿವಾರಕ) ಮಾತ್ರೆ ಕೊಡಿರಿ. ಮೃದುವಾಗಿ ಮಸಾಜ್ ಮಾಡಬೇಕು, ಊತ ಇರುವಲ್ಲಿ ಒಂದು ಬಾಮ್ (ಮುಲಾಮು) ಹಚ್ಚಿ ನೀವಿರಿ. ನಾಳೆವರೆಗೂ ನೋಡೋಣ. ಬಾವು ಇಳಿಯದೆ ನೋವು ಕಡಿಮೆಯಾಗದೆ ಇದ್ದರೆ ನಾಳೆ ಎಕ್ಸ್‌ರೇ ತೆಗೆಸಿ ನೋಡಿ, ಪ್ಲ್ಯಾಸ್ಟರ್ ಹಾಕಲು ವ್ಯವಸ್ಥೆ ಮಾಡಿಸುವೆ'' ಎಂದರು. ಭುವನ ಅವರು ನೋವು ನಿವಾರಣೆಗಾಗಿ Advil - Linquigels ಮಾತ್ರೆ ಕೊಟ್ಟು ಟೈಗರ್ ಬಾಮ್ ಹಚ್ಚಿ ಮೃದುವಾಗಿ ನೀವಿದ್ದಲ್ಲದೆ ದಪ್ಪ ಬಟ್ಟೆಯನ್ನು ಬಿಸಿ ನೀರಿನಲ್ಲದ್ದಿ ಕಾವು ಸಹ ಕೊಟ್ಟರು. ಅಂದು ಮೂರು ಬಾರಿ ಗುಳಿಗೆ ತಿಂದು ಚೆನ್ನಾಗಿ ನಿದ್ದೆ ಮಾಡಿದೆ. ರಾತ್ರಿ ಎಲ್ಲ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಎಂದು ಮಂತ್ರ ಜಪ ಮಾಡುತ್ತ ಎಡಗೈಯಿಂದ ಬಲಗೈಯನ್ನು ಸವರುತ್ತಲಿದ್ದೆ. ಬೆಳಿಗ್ಗೆ ಬಾವು ಇಳಿದು ನೋವು ಸ್ವಲ್ಪ ಕಡಿಮೆಯಾಗಿ ಬೆರಳು ಆಡಿಸಲು ಸಾಧ್ಯವಾಯಿತು. ಎಷ್ಟೋ ಧೈರ್ಯ ಬಂದಿತು. ಸದ್ಯ ಮೂಳೆ ಮುರಿದಿಲ್ಲ ಎಂದು ಸಮಾಧಾನವಾಯಿತು.

ಮರುದಿನವೂ ಗುಳಿಗೆ ಕೊಟ್ಟು, ಟೈಗರ್‌ಬಾಮ್ ಹಚ್ಚಿ ನೀವುವುದನ್ನು ಭುವನ ಮುಂದುವರಿಸಿದರು. ಅವರೂ ಆಧ್ಯಾತ್ಮ ಜೀವಿ; ದೇವ ಕೃಪೆಯಲ್ಲಿ ನಂಬಿಕೆ ಇಟ್ಟವರು. ರೇಖಿಯನ್ನು ಅಭ್ಯಾಸ ಮಾಡಿದವರು. ಅವರೂ ಸಹ ಮಂತ್ರಜಪ ಮಾಡುತ್ತ ''ಹಾಕಿಕೊಂಡ ಕಾರ್ಯಕ್ರಮ ಪೂರ್ತಿಯಾಗಲಿ'' ಎಂದು ದೇವರಲ್ಲಿ ಪ್ರಾರ್ಥಿಸುತ್ತಲೇ ಕೈಯನ್ನು ನೀವುತ್ತಿದ್ದರಂತೆ. ಎರಡು ದಿವಸಗಳಲ್ಲಿ ಪೂರ್ತಿ ಆರಾಮವಾಯಿತು. ''ಇಂಥ ಅನಿರೀಕ್ಷಿತ ನೋವಿನಿಂದ ನಿಮಗೆ ಬಹಳ ತೊಂದರೆ ಕೊಡುವಂತಾಯಿತು'' ಎಂದು ಸಂಕೋಚದಿಂದ ಹೇಳಿದೆ. ''ಹಾಗೆನ್ನಬೇಡಿರಿ. ನಮ್ಮ ದೇಶದಲ್ಲಿ ಈ ಸೇವಾಭಾಗ್ಯ ಸಿಗುತ್ತಿರಲಿಲ್ಲ. ಅಲ್ಲಿ ನಿಮ್ಮ ಸೇವೆ ಮಾಡಲು ಅನೇಕರುಂಟು. ಇಲ್ಲಿ ನನಗೆ ಅಂಥ ಅವಕಾಶ ಸಿಕ್ಕಿದೆ. ಅದು ನನ್ನ ಪುಣ್ಯ'' ಎಂದರು. ಇವರ ತಾತನವರಾದ ಲಿಂ|| ಶರಣ. ಬಸವಣ್ಣಪ್ಪ, ಅಜ್ಜಿ ಶರಣೆ. ಲಿಂ|| ನೀಲಾಂಬಿಕೆ ಅವರು ಬೆಳೆಸಿರುವ ಉದಾತ್ತ ಸಂಸ್ಕಾರ ಅವರ ಮಕ್ಕಳಲ್ಲಿ ಬಳ್ಳಿಯಂತೆ ಚಲ್ಲವರಿದು, ಶರಣ ಸಂಸ್ಕೃತಿಯ ಹೂವುಗಳನ್ನಾಗಿ ಮೊಮ್ಮಕ್ಕಳನ್ನು ಬೆಳೆಸಿದೆ. ಆಗ ನನ್ನ ಚಿತ್ತಭಿತ್ತಿಯ ಮೇಲೆ ಶರಣ. ಬಸವಣ್ಣೆಪ್ಪ ಅವರ ಚಿತ್ರ ಮೂಡಿತು. ಮುಪ್ಪಿನಿಂದ ಹಣ್ಣಾದ ಶರೀರ, ಕೋಲೂರಿ ಕೊಂಡು ಬಂದು ತಿಪಟೂರಿನಲ್ಲಿ ಪ್ರವಚನ ಕೇಳುತ್ತಿದ್ದರು. ಅದೇ ಆಗ ಕೂಡಲ ಸಂಗಮದಲ್ಲಿ ನಾವು ಕಾರ್ಯಾರಂಭ ಮಾಡಿದ್ದು, ಶರಣ. ಬಸವರಾಜ ಮುಗಳಿ ಅವರ ಕೈಯಿಂದ ಶರಣರ ಚಿತ್ರ ಬರೆಸುತ್ತಿದ್ದೆವು. ದೊಡ್ಡದೊಂದು 9 ಅಡಿ ಎತ್ತರ 6 ಅಡಿ ಅಗಲದ ಶರಣಗಣ ಮಣಿ ಬಸವಣ್ಣನವರ ಚಿತ್ರ, ಇಷ್ಟಲಿಂಗದಲ್ಲಿ ಬಸವಣ್ಣನವರು ಅವರ ಸುತ್ತ ಶರಣರು, ಬರೆಸುವುದಕ್ಕೆ ಬಸವಣ್ಣೆಪ್ಪನವರು ಧನ ಸಹಾಯ ಮಾಡಿದರು. ಲಿಂಗೈಕ್ಯರಾಗಿದ್ದ ಪತ್ನಿ ಶರಣೆ. ನೀಲಾಂಬಿಕೆಯವರ ಸ್ಮರಣಾರ್ಥ ದೇಣಿಗೆ ನೀಡಿದರು. ಆಗ ಪೂಜ್ಯ ಅಪ್ಪಾಜಿ, ನಾವು ಕಾಣಿಕೆ ಕೊಡಲು ಬಂದ ಬಸವಣ್ಣೆಪ್ಪನವರಿಗೆ ಹೇಳಿದೆವು ''ಎಂಥಾ ಹೆಸರುಗಳು! ನಿಮ್ಮದು ಬಸವಣ್ಣನವರ ಹೆಸರು; ನಿಮ್ಮ ಮನೆಯವರದು ನೀಲಾಂಬಿಕಾ ತಾಯಿಯ ಹೆಸರು, ಇನ್ನು ಇಂಥ ಹೆಸರುಗಳೆಲ್ಲ ಕಣ್ಮರೆಯಾಗಿ ಚಿತ್ರ-ವಿಚಿತ್ರವಾದ ಪಿಂಕಿ-ಡಿಂಕಿ,

ಡಿಂಪಲ್-ಪಿಂಪಲ್ ಮುಂತಾದವೇ ವಿಜೃಂಭಿಸುವುದನ್ನು ಕಾಣಬಹುದು''.

ಭುವನ ಅವರ ಜೊತೆ ಮಾತನಾಡುತ್ತ ಬಸವಣ್ಣಪ್ಪ ಅವರನ್ನು ನೆನಪಿಸಿಕೊಂಡೆವು. ಅವರು ಸಹ ಹೇಗೆ ತಮ್ಮ ತಾತ-ಅಜ್ಜಿ, ತಾಯಿ-ತಂದೆ ಶರಣರು ಮತ್ತು ವಚನ ಸಾಹಿತ್ಯ ಕುರಿತು ತರಬೇತಿ ನೀಡಿದರು ಎಂಬುದನ್ನು ಹೇಳಿದರು. ಅಂತೂ ಕೈನೋವಿನಿಂದ ವೈಯಕ್ತಿಕ ಸೇವೆ ಮಾಡುವ ಎಕ್ಸ್‌ಟ್ರಾ ಕೆಲಸವನ್ನು ಭುವನಾ-ಅವರ ಪೂರ್ಣ ಹೆಸರು ಭುವನೇಶ್ವರಿ, ಅವರಿಗೆ ಹಚ್ಚಿದ್ದಾಯಿತು. ಸಂತೋಷದಿಂದಲೇ ನಿರ್ವಹಿಸಿದರು.

ಸೆಪ್ಟಂಬರ್ 11 ರಂದು ಚಿಕಾಗೋದಿಂದ ಪಿಟ್ಸ್‌ಬರ್ಗ್‌ಗೆ ಯುನೈಟೆಡ್ ಏರ್‌ಲೈನ್ಸ್‌ನಿಂದ ಪ್ರಯಾಣ. ಅಮೆರಿಕನ್ನರ ಮನದಲ್ಲಿ ಸೆಪ್ಟಂಬರ್ ಹನ್ನೊಂದು ಭಯದ ಅಲೆಗಳನ್ನು ಎಬ್ಬಿಸುವ ದಿನ. ನೈನ್ ಲೆವೆನ್ ಎಂದು ಬಡಬಡಿಸುತ್ತಿರುತ್ತಾರೆ. ಆ ಪದ ಕೇಳುತ್ತಲೇ ಬೆಚ್ಚಿ ಬೀಳುತ್ತಾರೆ. ಅಂದು ಅಮೆರಿಕಾದ ಅಹಂ ಅನ್ನು ಮುರಿಯುವಂತೆ ಮುಸ್ಲಿಂ ಭಯೋತ್ಪಾದಕರು ವಿಶ್ವ ವಾಣಿಜ್ಯ ಕೇಂದ್ರ (World Trade Center)ವನ್ನು ವಿಮಾನಗಳನ್ನು ತಾಗಿಸಿ ಕೆಡವಿ ಇಡೀ ಜಗತ್ತನ್ನು ಬೆಚ್ಚಿ ಬೀಳಿಸಿ, ದಿಗ್ಭ್ರಾಂತಗೊಳಿಸಿದ ದಿನ. ತನ್ನ ಬುದ್ಧಿವಂತಿಕೆ ಬಗ್ಗೆ, ಮಿಲಿಟರಿ ಶಕ್ತಿಯ ಬಗ್ಗೆ, ಭದ್ರತೆಯ ಬಗ್ಗೆ ಬಹಳ ಹಮ್ಮಿನಿಂದ ಮೆರೆಯುತ್ತಿದ್ದ ಅಮೆರಿಕಾದ ಕೋಡನ್ನು ಮುಸ್ಲಿಂ ಜೆಹಾದಿಗಳು ಮುರಿದ ದಿವಸ. ನ್ಯೂಯಾರ್ಕ್ ನಗರದಲ್ಲಿ ಹೆಲಿಕಾಪ್ಟರ್‌ದಲ್ಲಿ ಕಾವಲು ನಡೆಸಲಾಗುತ್ತದೆ. ಹಗಲು ಇರುಳು ಹೆಲಿಕಾಪ್ಟರ್ ಸುತ್ತುತ್ತಲಿರುತ್ತವೆ. ಅತ್ಯಂತ ಪ್ರಖರವಾದ ಲೈಟ್ ಬಿಟ್ಟು ಎಲ್ಲವನ್ನೂ ವೀಕ್ಷಿಸುತ್ತಾರೆ. ನ್ಯೂಯಾರ್ಕ್ ನಗರದ ಹೃದಯದಂತಿರುವ ಎಂಪೈರ್ ಸ್ಟೇಟ್ ಬಿಲ್ಡಿಂಗ್, ಟೈಂ ಸ್ಕೇರ್, ನ್ಯೂಯಾರ್ಕ್ ಮಧ್ಯೆ ಹರಿಯುವ ನದಿಯ ಸೇತುವೆಗಳು ಎಲ್ಲದರ ಮೇಲೆ ಹೆಲಿಕಾಪ್ಟರ್ ಕಾವಲು. ಸಮುದ್ರದಲ್ಲಿ ನಾವೆಗಳ ಮೂಲಕ ಕಾವಲು. ಬೃಹತ್ ತೂಗು ಸೇತುವೆಗಳ ಪಕ್ಕ ಟ್ರಾಲಿಯಲ್ಲಿ ಸಂಚರಿಸುತ್ತಾ ಕಾವಲು ಮಾಡಲಾಗುತ್ತದೆ. ಇದನ್ನೆಲ್ಲ ಭೇದಿಸಿ 9/11 ಅವಗಡ ನಡೆಯಿತು.

ಅಮೆರಿಕನ್ನರದು ಒಂದು ವಿಲಕ್ಷಣ ಪ್ರವೃತ್ತಿ. ಉಳಿದೆಲ್ಲರು ಏತಿ ಎಂದರೆ ಇವರು ಪ್ರೇತಿ ಎನ್ನುವರು. ಬ್ರಿಟಿಷ್ ಮೂಲದಿಂದ ಬಂದವರು ಇಲ್ಲಿದ್ದ ಮೂಲ ನಿವಾಸಿ ರೆಡ್ ಇಂಡಿಯನ್ನರನ್ನು ಕೊಂದು, ಉಳಿದವರನ್ನು ಮೂಲೆಗುಂಪು ಮಾಡಿ, ಆಂಗ್ಲ ಸಂಸ್ಕೃತಿಯನ್ನು ಅಮೆರಿಕಾದಲ್ಲಿ ಬಿತ್ತಿ ಬೆಳೆದಿದ್ದಾರೆ. ಆದರೆ ಬ್ರಿಟಿಷ್ ವಸಾಹತು ಆಳಿಕೆಯಿಂದ ಬೇರೆಯಾಗಿ ಸ್ವತಂತ್ರವಾದ ಮೇಲೆ ತಮ್ಮದೇ ಬೇರೆ ನಿಯಮಗಳನ್ನು ರೂಢಿಸಿಕೊಂಡಿದ್ದಾರೆ. ಉದಾಹರಣೆಗೆ, ಎಲ್ಲರೂ ದಿನಾಂಕ ಮೊದಲು ಬರೆದು ನಂತರ ತಿಂಗಳು, ಆನಂತರ ವರ್ಷ ಬರೆದರೆ ಇವರು ತಿಂಗಳು ಮೊದಲು ಬರೆಯುತ್ತಾರೆ, ನಂತರ ದಿನಾಂಕ ಬರೆಯುತ್ತಾರೆ. ನಮಗೆ ಮೊದಮೊದಲು ಗೊಂದಲವಾಗುತ್ತಿರುತ್ತದೆ. ನಮ್ಮಲ್ಲಿ ನಡೆಯುವಾಗ ಎಡಬದಿಯಲ್ಲಿ ಪುಟ್ಟಪಥ (foot path)ದಲ್ಲಿ ಸಾಗಬೇಕೆಂಬ ನಿಯಮವಿದ್ದರೆ ಇಲ್ಲಿ ಬಲಬದಿಯಲ್ಲಿ ಸಾಗಬೇಕೆಂಬ ನಿಯಮವಿದೆ. ನಮ್ಮಲ್ಲಿ ಮತ್ತು ಇನ್ನಿತರ ಅನೇಕ ದೇಶಗಳಲ್ಲಿ ಬಲಬದಿ ಡ್ರೈವಿಂಗ್ ಇದ್ದರೆ ಇಲ್ಲಿ ಎಡದ ಕೈ ಡ್ರೈವಿಂಗ್. ಸಾಮಾನ್ಯವಾಗಿ ಆತಿಥೇಯರು ನನಗೆ ಡ್ರೈವರ್ ಪಕ್ಕದ ಸೀಟು ಕೊಡುತ್ತಿದ್ದರು. ನಮ್ಮಲ್ಲಿ ಮುಂದಿನ ಸೀಟಲ್ಲಿ ಎಡಗಡೆ ಕುಳಿತು ನನಗೆ ಅಭ್ಯಾಸ, ಹೀಗಾಗಿ ನನಗೆ ಅರಿವಿಲ್ಲದೆ ಅಲ್ಲಿ ಹೋಗಿ ನಿಲ್ಲುತ್ತಿದ್ದೆ.

ಶ್ರೀ ಶೀಲಚಂದ್ರ ಸುದ್ದಿ ತಂದರು, "ಸೆಪ್ಟಂಬರ್ 11. ಆದ್ದರಿಂದ ಬಹಳ ಜನ ಪ್ರಯಾಣಿಕರು ಪ್ರಯಾಣಿಸುವುದಿಲ್ಲವಾದ್ದರಿಂದ ಬಹಳಷ್ಟು ಫ್ಲೈಟ್ ರದ್ದು ಮಾಡಲಾಗಿದೆ". ಸೆಪ್ಟಂಬರ್ 11, 2001 ಅವಗಡವಾದುದು ನಿಜ. ಮುಸ್ಲಿಂ ಭಯೋತ್ಪಾದಕರು ಆ ದಿನವನ್ನು ಪುನಃ ನೆನಪಿಸಲು ಅಂದು ಮತ್ತೇನಾದರೂ ಮಾಡಬಹುದೆಂದು ಅನೇಕರು ಹೆದರಿ ಪ್ರಯಾಣ ರದ್ದು ಮಾಡಿದುದು ಫ್ಲೈಟ್ ಕಡಿಮೆ ಮಾಡಲು ಕಾರಣ. ನಾನು ಪ್ರಯಾಣಿಸುವ ಯುನೈಟೆಡ್ ಏರ್ ಲೈನ್ಸ್‌ನವರು ಫ್ಲೈಟ್ ರದ್ದು ಮಾಡಿರುವುದಿಲ್ಲವಾಗಿಯೂ, ಒಂದು ವೇಳೆ ಮಾಡಿದರೂ ಬೇರೆ ಫ್ಲೈಟ್‌ಗೆ ಹೊಂದಾಣಿಕೆ ಮಾಡುವುದಾಗಿಯೂ ಹೇಳಿದರು. ಭುವನಾ ಮತ್ತು ಶೀಲಚಂದ್ರ ಅವರು ವಿಮಾನ ನಿಲ್ದಾಣಕ್ಕೆ ಬಂದು ನನ್ನನ್ನು ಬಿಟ್ಟರು. ಶೀಲಚಂದ್ರ ಅವರಿಗೆ ಅತ್ಯಂತ ಅವಸರದ ಕೆಲಸವಿದ್ದುದರಿಂದ ತಮ್ಮ ಪತ್ನಿಯನ್ನು ಬಿಟ್ಟು, ನನ್ನನ್ನು ಕಳಿಸಿಬರಲು ತಿಳಿಸಿ ಹೋದರು.

ಪಿಟ್ಸ್‌ಬರ್ಗ್ ವಿಮಾನ ನಿಲ್ದಾಣಕ್ಕೆ ಬಂದೆ. ಒಳಗೇ ಬಹುದೂರ ನಡೆದು, ಒಳಗೇ ಸಂಚರಿಸುವ ಟ್ರೇನಲ್ಲಿ ಬಂದು, ಎಸ್ಕಲೇಟರ್‌ದ ನೆರವಿನಿಂದ ಇಳಿದು, ಬ್ಯಾಗೇಜ್ ಕ್ಲೇಮ್ ಬಳಿಗೆ ಬಂದೆ. ಶರಣ. ಚನ್ನರಸಪ್ಪನವರ ಅಥವಾ ಅವರ ಪತ್ನಿ ಶರಣೆ. ಗೌರಮ್ಮನವರ ಸುಳಿವು ಕಾಣಲಿಲ್ಲ. ತುಂಬಾ ಆಶ್ಚರ್ಯವಾಯಿತು. ಅವರು ಬಹಳ ಸಮಯ ಪ್ರಜ್ಞೆ ಉಳ್ಳವರು. ಬೇರೆಯವರ ನೆರವಿನಿಂದ ಸಾಮಾನು ಇಳಿಸಿ ಒಂದು ಕಡೆ ಜೋಡಿಸಿಟ್ಟೆ. ಸ್ವಲ್ಪ ಹೊತ್ತು ಕುಳಿತೆ. ಆದರೂ ಸುಳಿವಿಲ್ಲ. ಅಲ್ಲಿದ್ದ ಕಾವಲುಗಾರನಿಗೆ ಸಾಮಾನಿನ ಕಡೆಗೆ ನಿಗಾ ಇಡಲು ತಿಳಿಸಿ, ಬಾಗಿಲಿನಿಂದ ಹೊರಗೆ ಹೋದೆ. ಅಲ್ಲಿಯೂ ಎಲ್ಲೂ ಕಾಣಲಿಲ್ಲ. ಏನಾದರೂ ಅನಾನುಕೂಲವಾದರೆ ಕರೆಯಲೆಂದು ಸೆಲ್ ಫೋನ್ ನಂಬರ್ ಕೊಟ್ಟಿದ್ದರು. ಫೋನ್ ಮಾಡುವುದು ಸೂಕ್ತವೆಂದು ಪಬ್ಲಿಕ್ ಫೋನ್ ಹುಡುಕುವಾಗ ಚನ್ನರಸಪ್ಪ-ಗೌರಮ್ಮ ಬಂದು ನಮಸ್ಕರಿಸಿ, ತಡವಾದುದಕ್ಕೆ ಕ್ಷಮೆ ಕೇಳಿದರು. ಕಾರಣವನ್ನೂ ತಿಳಿಸಿದರು. ಬಹಳ ಬೇಗನೆ ಮನೆಯಿಂದ ಹೊರಟುದಾಗಿಯೂ ದಾರಿಯಲ್ಲಿ ಸುರಂಗ (Tunnel) ಒಂದರ ಬಳಿ ಬರುವಾಗ ಒಬ್ಬ ದೊಡ್ಡ ಲಾರಿಯವನು ಬಂದು ಬಲಗಡೆಯಿಂದ ಗುದ್ದಿದುದಾಗಿಯೂ, ಬಲಗಡೆಯ ಕನ್ನಡಿ, ದೀಪಗಳು ಹೋದುದಲ್ಲದೆ ಬಲಗಡೆಯ ಮುಂದಿನ ಬಾಗಿಲು ಸಿಕ್ಕಿ ಹಾಕಿಕೊಂಡು ತೆಗೆಯಲು ಬರದಂತೆ ಆಗಿರುವುದನ್ನು ತೋರಿಸಿದರು. ಇದರಿಂದ ಪೋಲೀಸರು ಬಂದು ರೆಕಾರ್ಡ್ ಮಾಡಿಕೊಳ್ಳಲು ಕಾಯಬೇಕಾಯಿತು ಎಂದು ವಿವರಿಸಿದರು.

"ಪರವಾಗಿಲ್ಲ, ನಾನು ಆರಾಮವಾಗಿ ಕುಳಿತಿದ್ದೆ. ಸದ್ಯ ನಿಮಗೆ ಹೆಚ್ಚಿನ ಅಪಾಯವಾಗಲಿಲ್ಲ, ದೊಡ್ಡಲಾರಿ ಬಡಿದು ಹೆಚ್ಚಿನ ಅಪಾಯವಾಗಿದ್ದರೆ ಎಷ್ಟು ವ್ಯಥೆಯಾಗುತ್ತಿತ್ತು" ಎಂದು ಹೇಳಿದೆ. ಇಲ್ಲಿ ಕೆಲವು ವಿಷಯ ತಿಳಿಸಬೇಕು. ಎಲ್ಲೇ ಅಪಘಾತವಾದರೂ 5 ನಿಮಿಷಗಳೊಳಗೆ ಪೋಲೀಸರು ಬಂದು ಬಿಡುತ್ತಾರೆ. ಹೆಚ್ಚಿನ ಅಪಾಯವಾಗಿದ್ದರೆ ಅಂಬುಲೆನ್ಸ್, ಫೈರ್ ಎಂಜಿನ್ ಕೂಗುತ್ತ ಧಾವಿಸುತ್ತವೆ. ಹೆದ್ದಾರಿಗಳಲ್ಲಿ 3+3 ಆರು ಪಥಗಳಿರುತ್ತವೆ. ಅದರಲ್ಲಿ ಒಂದು ಮತ್ತು ಒಂದು ಸದಾ ಖಾಲಿ ಇರುತ್ತವೆ. ಪೋಲೀಸ್, ಅಂಬುಲೆನ್ಸ್ ಮತ್ತು ಫೈರ್ ಇಂಜಿನ್‌ಗಾಗಿ ಆ ದಾರಿಗಳು, ಅದೆಷ್ಟು ವೇಗವಾಗಿ ಕೆಲಸ ಮಾಡುತ್ತಾರೆಂದರೆ ಗಾಯಾಳುಗಳಿದ್ದರೆ ಸಾಗಿಸಿ ವಾಹನಗಳನ್ನು ಬದಿಗೆ ಸರಿಸಿ ಇನ್ನಿತರರು ಸಂಚರಿಸಲು ದಾರಿ ಸರಳಗೊಳಿಸುತ್ತಾರೆ. ಅಪಘಾತ ಮಾಡಿದವರು ನಮ್ಮಲ್ಲಿಯಂತೆ hit and run ಬಡಿದು

ಓಡಿ ಹೋಗುವ ಸೂತ್ರ ಅನುಸರಿಸದೆ ಗಾಡಿ ನಿಲ್ಲಿಸುತ್ತಾರೆ. ಪೋಲೀಸರು ಚಕಚಕನೆ ನಂಬರು ಬರೆದುಕೊಂಡು ಉಭಯತರನ್ನು ಅವರ ವಾಹನಗಳು ಓಡುವ ಸ್ಥಿತಿಯಲ್ಲಿದ್ದರೆ ಕಳಿಸುತ್ತಾರೆ. ಚನ್ನರಸಪ್ಪನವರು ಬರಲು ಅರ್ಧಗಂಟೆ ತಡವಾಗಿರಬಹುದು ಅಷ್ಟೆ. ನಮ್ಮಲ್ಲಿ ಇದು ಸಾಧ್ಯವೆ? ಹೋಗಿ ಗೋಗರೆದು ಪೋಲೀಸ್ ಮಹಾಶಯರನ್ನು ಕರೆತರಬೇಕು. ಒಂದೊಂದು ಗಾಡಿ ಸ್ಪೇರ್ಪ ಮುಂದೆ ಕೊಳೆಯುತ್ತವೆ.

ಆಮೇಲೆ ಇನ್ಶೂರೆನ್ಸ್‌ನವರನ್ನು ಗೋಗರೆಯಬೇಕು. ಆರ್.ಟಿ.ಓ.ದವರಿಗೆ ಸ್ಪೆಷಲ್ ಕಾರು ಮಾಡಿ ಕರೆತರಬೇಕು. ಸಂಬಳವನ್ನು ಸರ್ಕಾರದವರು ಏತಕ್ಕೆ ಕೊಡುತ್ತಾರೆ ಎಂದು ತಿಳಿದಿರುವರೋ! ಅವರ ಸರ್ಕಾರಿ ವಾಹನ ಇದ್ದರೂ ಬೇರೆ ಟ್ಯಾಕ್ಸಿ ಮಾಡಬೇಕಾಗುವುದು.

ನಮ್ಮನ್ನು ಕರೆತಂದು ಮನೆಗೆ ಬಿಟ್ಟು ಚನ್ನರಸಪ್ಪನವರು ಇನ್ಶೂರೆನ್ಸ್‌ದವರಿಗೆ ಫೋನ್ ಮಾಡಿದರು. ಮರುದಿನ ಬೆಳಿಗ್ಗೆ ಬರುವುದಾಗಿ ಹೇಳಿದರು. ಬಂದವರೇ ಎಲ್ಲ ಪರೀಕ್ಷಿಸಿ, ಬರೆದುಕೊಂಡು ಹೋದರು. ಮತ್ತೊಂದು ಅಚ್ಚರಿಯ ಸಂಗತಿ ಎಂದರೆ ಆ ಕಾರನ್ನು ಸುಸ್ಥಿತಿಗೆ ತಂದು, ಉಪಯೋಗಕ್ಕೆ ಕೊಡುವ ತನಕ ಬೇರೊಂದು ಕಾರನ್ನು ಇವರು ಬಾಡಿಗೆ ತೆಗೆದುಕೊಳ್ಳಬಹುದು. ಅದರ ಬಾಡಿಗೆ ಇನ್ಶೂರೆನ್ಸ್ ಕಂಪೆನಿಯವರದು. ಸಕಾಲದಲ್ಲಿ ಗಾಡಿಯನ್ನು ರೆಡಿ ಮಾಡಿಸಿ ಕೊಟ್ಟು ಬಿಟ್ಟರು.

ನಮಗೆ ಇದೆಲ್ಲ ಕನಸಿನಂತೆ ತೋರುವುದು ಸತ್ಯ. ಏಕೆಂದರೆ ನಮ್ಮ ದೇಶದಲ್ಲಿ ಒಬ್ಬರಿಗೊಬ್ಬರು ಕಿರುಕುಳ ಕೊಡುವುದರಲ್ಲೇ ಬಹಳ ಸಂತೋಷ ಪಡುವರು. ಒಮ್ಮೆ ನಮ್ಮ ಒಂದು ಉತ್ತಮ ಗಾಡಿ ಶರಣ ಮೇಳದ ಸಮಯದಲ್ಲಿ ಡ್ರೈವರನ ಅಚಾತುರ್ಯದಿಂದ ಸಂಗಮ ಕ್ರಾಸಿನಲ್ಲಿ ಅಪಘಾತಕೊಳ್ಳಗಾಯಿತು. ಪತ್ರಿಕಾಕರ್ತರು, ದೂರದರ್ಶನದವರು ಕ್ಯಾಮೆರಾ ಸಹಿತ ಬರುತ್ತಿದ್ದವರು ಹೆಚ್ಚಿನ ಅಪಾಯವಿಲ್ಲದೆ ಪಾರಾದರು. ಬೇರೆ ಕಾರು ಕಳಿಸಿ ಜನರನ್ನು ಕರೆಸಿಕೊಂಡೆವು. ಆದರೆ ಆ ಗಾಡಿಯನ್ನು ಅಲ್ಲಿಂದ ತೆಗೆಸಿ, ರಿಪೋರ್ಟ್ ಬರೆಸಿ, ರಿಪೇರಿಗೆ ಕಳಿಸಬೇಕಾದರೆ ಸಾಕು ಸಾಕಾಯಿತು. ಸಾಮಾನ್ಯವಾಗಿ ಪೋಲೀಸ್ ಅಧಿಕಾರಿಗಳು, ಆರ್.ಟಿ.ಓ.ದವರು ನಮ್ಮ ಕಾರು ಎಂದು ತಿಳಿದು ಬೇಗ ಬೇಗನೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿದ್ದರು. ಹುಬ್ಬಳ್ಳಿಗೆ ಕಂಪೆನಿಗೆ ಕಾರು ಬಿಟ್ಟರೆ ಇನ್ಶೂರೆನ್ಸ್ ಏಜೆಂಟ್ ಕರೆತರಲು ಒಂದು ತಿಂಗಳು ಹಿಡಿದರೆ ರಿಪೇರಿಯಾಗಿ ಹೊರ ಬರಲು ಆರು ತಿಂಗಳಾಯಿತು. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಗಾಡಿ ಒಂದು ಕಡೆ ನಿಂತರೆ ಹೇಗೆ? ಅದರ ಮೇಲೆ ಬಾಡಿಗೆ ಹೊಡೆದು ಉಪಜೀವನ ಮಾಡುವವರಾದರೆ ಅವರ ಬದುಕು ಹೇಗೆ? ಬ್ಯಾಂಕ್ ಅಥವಾ ಖಾಸಗಿಯವರಿಂದ ಬಡ್ಡಿ ಮೇಲೆ ಹಣ ಪಡೆದು ಗಾಡಿ ಖರೀದಿಸಿದ ದುಡಿಮೆಗಾರನಾದರೆ ಅವನ ಪರಿಸ್ಥಿತಿ ಏನಾದೀತು? ನಮ್ಮ ದೇಶದ ನಿಧಾನ ಗತಿ ಜನರನ್ನು ಬದುಕಿಸುವುದಕ್ಕಿಂತ ಹಿಂಡಿ ಹಿಪ್ಪೆ ಮಾಡುವುದರಲ್ಲೇ ಖುಷಿ ಪಡುತ್ತದೆ. ಇನ್ಶೂರೆನ್ಸ್‌ದವರಿಂದ ಕಂಪೆನಿಗಳು ಇಲ್ಲಿ ಹಣ ಪಡೆದರೆ ನಮ್ಮಲ್ಲಿ ನಾವು ಮೊದಲು ರಿಪೇರಿ ಹಣ ಕಟ್ಟಿ ನಂತರ ಪಡೆಯಬೇಕು. ಹಣದ ಸಂಕಷ್ಟ ಬೇರೆ. ಹುಬ್ಬಳ್ಳಿ-ಧಾರವಾಡದ ನಮ್ಮ ಶರಣರೇ ಹಣ ಕಟ್ಟಿ ಬಿಡಿಸಿ ಗಾಡಿಯನ್ನು ಕಳಿಸಿದರು. ದೆಹಲಿಯಲ್ಲಿ ನಾವಿದ್ದಾಗ ಖರೀದಿಸಿದ ಗಾಡಿಯದು, ಹೀಗಾಗಿ ಇನ್ಶೂರೆನ್ಸ್ ಕಂಪೆನಿಯ ಕೇಂದ್ರ ಕಛೇರಿ ಅಲ್ಲಿಯದು. ವ್ಯವಹಾರ ಮಾಡಿ ಸಾಕಾಯಿತು. ದೆಹಲಿಯಲ್ಲಿದ್ದ ನಮ್ಮ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ

ಶ್ರೀಯುಧಿಷ್ಠಿರ ವರ್ಮಾಗೆ ತಿಳಿಸಿದೆವು. ಅವರು ಹೋಗಿ ಕಂಡಾಗ ಮತ್ತೊಂದು ದಾಖಲೆ ಕೇಳಿದರು. ಇಲ್ಲಿಂದ ಇಂಜನಿಯರ್ ರಾಜಣ್ಣನವರನ್ನು ಕಳಿಸಿ ಅವರು ಪಟ್ಟು ಹಿಡಿದು ಕುಳಿತಾಗ ಹಣಕ್ಕೆ ಚೆಕ್ಕು ಕೊಟ್ಟರು, ಅದೂ ಪೂರಾ ಕೊಡದೆ ಇಲ್ಲದ ಸಬೂಬು ಹೇಳಿ ಕಡಿತ ಮಾಡಿ ಚೆಕ್ಕು ಕೊಟ್ಟರು. ನಮ್ಮ ದೇಶದಲ್ಲಿ ಇಂಥಾ ಮಾನಸಿಕ ಕಿರುಕುಳ ಬಹಳ. ಕೆಲಸಗಳು ಸುರಳಿತವಾಗಿ ಸಾಗುವುದೇ ಇಲ್ಲ.

ಪಿಟ್ಸ್‌ಬರ್ಗ್

ಪೆನ್ಸಿಲ್‌ವೇನಿಯಾ ರಾಜ್ಯದ ಪ್ರಮುಖ ನಗರ ಪಿಟ್ಸ್‌ಬರ್ಗ್ . ಸಾಮಾನ್ಯವಾಗಿ ಭಾರತೀಯರ ಕಿವಿಯ ಮೇಲೆ ಆಷ್ಟಿಷ್ಟು ಬೀಳುವ ಪದ ಪಿಟ್ಸ್‌ಬರ್ಗ್. ಏಕೆಂದರೆ, ಇಲ್ಲಿ ಒಂದು ಬೃಹತ್ ವೆಂಕಟೇಶ್ವರ ದೇವಾಲಯವನ್ನು ನಿರ್ಮಿಸಿರುವುದರಿಂದ ಮತ್ತು ಇದೇ ಅಮೆರಿಕಾದಲ್ಲಿ ಆಗಿರುವ ಮೊಟ್ಟ ಮೊದಲ ಹಿಂದು ದೇವಾಲಯ ಎಂದು ಖ್ಯಾತಿ ಪಡೆದಿರುವುದರಿಂದ ಅಮೆರಿಕಾದಲ್ಲಿರುವ ಹೆಚ್ಚಿನ ಭಾರತೀಯರಿಗೆ ಚಿರಪರಿಚಿತವಾಗಿರುವ ನಗರ.

ನನಗಂತೂ ಪಿಟ್ಸ್‌ಬರ್ಗಿನ ನೈಸರ್ಗಿಕ ಸೌಂದರ್ಯ ಮನಸ್ಸನ್ನು ಸಂಭ್ರಾಂತಗೊಳಿಸಿದೆ. ಈವರೆಗೂ ಕೆಲವೇ ರಾಜ್ಯಗಳಲ್ಲಿ ಸಂಚಾರ ಮಾಡಿದ್ದೇನೆ. ಇಲ್ಲಿ ಎಲ್ಲ ಕಡೆಯಲ್ಲೂ ಅರಣ್ಯಗಳನ್ನು ಚೆನ್ನಾಗಿ ಕಾಯ್ದುಕೊಳ್ಳಲಾಗಿದೆ. ಮಳೆ ಕಡಿಮೆ ಇದ್ದಲ್ಲಿ ಸಹ ಪುರುಷ ಪ್ರಯತ್ನದಿಂದ ಅರಣ್ಯಗಳನ್ನು ಬೆಳಿಸಿ ಸಂರಕ್ಷಿಸಲಾಗಿದೆ. ಊರು ಊರುಗಳ ಮಧ್ಯೆ ವೃಕ್ಷವಲಯ (Green belt)ಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಊರುಗಳಲ್ಲಿ ಸಹ ಪ್ರತಿ ಬಡಾವಣೆಗಳಲ್ಲಿ ವಿಸ್ತಾರವಾದ ಹಸಿರು ವಲಯ, ವಿಸ್ತಾರವಾದ ಉದ್ಯಾನವನಗಳನ್ನು ಬೆಳೆಸಲಾಗಿದೆ. ಅಮೆರಿಕಾದವರು ಅದೃಷ್ಟವಂತರು. ವಿಸ್ತಾರವಾದ ಭೂಭಾಗವಿರುವ, ನೈಸರ್ಗಿಕ ಸಂಪತ್ತಿರುವ ದೇಶವನ್ನು ಬಿಳಿಯರು ಅರಸಿಕೊಂಡು ಬಂದು ಬೀಡು ಬಿಟ್ಟರು. ಭೂ ಪ್ರದೇಶ ವಿಸ್ತಾರವಾಗಿದೆ; ಜನಸಂಖ್ಯೆ ಕಡಿಮೆ ಇದೆ. ಮಾನವ ಸಂಪನ್ಮೂಲ ಕಡಿಮೆ ಇದ್ದರೂ ಯಂತ್ರಗಳ ನೆರವಿನಿಂದ ಅರಣ್ಯವರ್ಧನೆ, ಕೃಷಿ ಅಭಿವೃದ್ಧಿ ಮಾಡಿಕೊಂಡಿದ್ದಾರೆ.

ಪಿಟ್ಸ್‌ಬರ್ಗ್ ಸುತ್ತಲಿನ ಪ್ರದೇಶದ ನೈಸರ್ಗಿಕ ಸಂಪತ್ತು ವರ್ಣಿಸಲಸದಳ. ಸ್ವಲ್ಪ ಮಟ್ಟಿಗೆ ಊಟಿ, ಕೂನೂರುಗಳನ್ನು ಹೋಲಿಸಬಹುದು. ಅದೇ ತರಹದ ಗುಡ್ಡ-ಬೆಟ್ಟಗಳು. ಅವುಗಳ ಮಧ್ಯೆ ಗಿಡಗಳ ಮಧ್ಯೆ ಹುದುಗಿಕೊಂಡಿರುವ ಮನೆಗಳ ಸಾಲುಗಳು. ಆದರೆ ಅಲ್ಲಿಗಿಂತಲೂ ಸುಂದರವಾದ ಪ್ರಕೃತಿ. ಚಳಿಗಾಲದಲ್ಲಿ ಎಲ್ಲ ಗಿಡಮರಗಳು ಎಲೆಗಳನ್ನು ಉದುರಿಸಿಕೊಂಡು ಕಡ್ಡಿಯಾಗಿ ನಿಲ್ಲುತ್ತವಂತೆ. ಆಗ ಎಲ್ಲ ಬರಿದಾಗಿ ಕಾಣುವುದಂತೆ. ಹಿಮಾಚ್ಛಾದಿತವಾದಾಗ ಬಿಳಿಯ ವೆಲ್ವೆಟ್ಟನ್ನು ಹೊದ್ದಿಸಿದಂತೆ ಕಾಣುವುದಂತೆ. ಈಗ ಮಾತ್ರ ನವ ಜವ್ವನೆಯಾದ ಶೃಂಗಾರಗೊಂಡ ವಧುವಿನಂತೆ ನಿಸರ್ಗವು ಕಂಗೊಳಿಸುತ್ತಿದೆ. ವಸಂತ ಋತು(spring)ವಿನಲ್ಲಿ ಬಣ್ಣಬಣ್ಣದ ಹೂವುಗಳನ್ನು ಅರಳಿಸಿಕೊಂಡು ಇಡೀ ಗುಡ್ಡ-ಬೆಟ್ಟಗಳ ಮೇಲೆ ಹೂವುಗಳ ರಂಗೋಲಿ ಬಿಡಿಸಲ್ಪಟ್ಟಿರುವುದಂತೆ.

ಪಿಟ್ಸ್‌ಬರ್ಗ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಸಂಖ್ಯಾತ ಗುಡ್ಡ-ಬೆಟ್ಟಗಳು. Rolling land scape ಎಂದು ಕರೆಯುತ್ತಾರೆ. ನೈಸರ್ಗಿಕವಾಗಿ ಬೆಳೆದ ವೃಕ್ಷ ಸಂಪತ್ತು ಒಂದು ಕಡೆಯಾದರೆ ಕೃತಕವಾಗಿ ಬೆಳೆಸಿದ ಹುಲ್ಲಿನ ಹಾಸು ಭೂಮಿಯನ್ನು ಆವರಿಸಿ ಒಂದು ಸುಂದರ ಹಸಿರು ರತ್ನ ಗಂಬಳಿಯನ್ನು ಹಾಸಿದಂತೆ ತೋರುತ್ತದೆ. ಜನರು ಮನೆಯ ಮುಂಭಾಗದಲ್ಲಿ ಹೂವಿನ ಗಿಡ ಬೆಳೆಸುವ

ಅಪೂರ್ವ ಆಸಕ್ತಿ ಹೊಂದಿದ್ದಾರೆ. ವಿವಿಧ ಆಕಾರಗಳಲ್ಲಿ ಬಣ್ಣಬಣ್ಣದ ಹೂವುಗಳನ್ನು ಬೆಳೆಸುವುದರಿಂದ ಹಸಿರು ರತ್ನಗಂಬಳಿಯಲ್ಲಿ ಚಿತ್ತಾರಗಳನ್ನು ಹೆಣೆದಂತೆ ಕಾಣುತ್ತದೆ. ಬಿಸಿಲು ಬಿದ್ದಾಗಲಂತೂ ಆ ಸೌಂದರ್ಯ ವರ್ಣನಾತೀತ.

ಪಿಟ್ಸ್‌ಬರ್ಗ್ ನಗರದ ನಟ್ಟ ನಡುವೆ ಅಲಗೇನಿ ಮತ್ತು ಮೆಲಂಗ ಹಾಲ್ ಎಂಬ ಹೆಸರಿನ ಎರಡು ನದಿಗಳು ಸೇರಿ, ಮುಂದೆ ಅದಕ್ಕೆ ಓಹಿಯೋ (ಒಹೈವೋ) ಎಂಬ ಹೆಸರು ಬರುತ್ತದೆ. ಇವುಗಳ ಮೇಲೆ ಬೃಹತ್ತಾದ ತೂಗು ಸೇತುವೆಗಳಿವೆ. ಮಧ್ಯ ನಗರದಲ್ಲಿ ಅತ್ಯಂತ ಎತ್ತರವಾದ ಕಟ್ಟಡಗಳಿವೆ. ಮರ್ಸಿ ಎಂಬ ಒಂದು ಬೃಹತ್ ಆಸ್ಪತ್ರೆಯ ಕಟ್ಟಡದ ಮೇಲೆ ಹೆಲಿಪ್ಯಾಡ್ ಇದ್ದು, ಎಮರ್ಜೆನ್ಸಿ-ತ್ವರಿತ ಚಿಕಿತ್ಸೆಗೆ ರೋಗಿಗಳನ್ನು, ವೈದ್ಯರನ್ನು ಕರೆತರಲು ಬಳಸಲಾಗುವುದಂತೆ.

ಕಾರಿನಲ್ಲಿ ಚನ್ನರಸಪ್ಪನವರ ಮನೆಯ ಬಳಿಗೆ ಬಂದು ಇಳಿದಾಗ, ಭೂಮಿಯ ಮೇಲೊಂದು ಹಸಿರು ಸ್ವರ್ಗವನ್ನು ಕಂಡಂತಾಯಿತು; ಪ್ರತಿ ಮನೆಯ ಮುಂದೂ ಇಳಿಜಾರಾದ ಹುಲ್ಲು ಹಾಸು, ಹೂವಿನ ಗಿಡಗಳ ಸಮೂಹ, ಎದುರಿನಲ್ಲೇ ಎತ್ತರವಾದ ಬೆಟ್ಟಗಳ ಸಾಲು; ಅದರ ಮುಂದೆ ಆಳವಾದ ಹಸಿರು ಕಣಿವೆಗಳು. ರಸ್ತೆ ಹರಿದಾಡುವಲ್ಲಿ ಕಪ್ಪು ಬಣ್ಣದ ಟಾರಿನ ಬಣ್ಣ ಬಿಟ್ಟರೆ ಉಳಿದಲ್ಲೆಲ್ಲ ಹಸಿರೇ ಹಸಿರು. ಜನರು ತಮ್ಮ ತಮ್ಮ ಆಸಕ್ತಿ ಮತ್ತು ಆರ್ಥಿಕ ಅನುಕೂಲತೆಗೆ ಅನುಸಾರವಾಗಿ ಇನ್ನು ಅನೇಕ ಅಲಂಕಾರ ಮಾಡುತ್ತಾರೆ. ಮಕ್ಕಳಿದ್ದವರು ಬಣ್ಣಬಣ್ಣದ ಪ್ಲಾಸ್ಟಿಕ್ ಜಾರು ಬಂಡಿಗಳನ್ನು, ಬಣ್ಣದ ಉಯ್ಯಾಲೆಗಳನ್ನು ಹಾಕಿಕೊಳ್ಳುತ್ತಾರೆ. ಕೆಲವರು ಹಿಂಭಾಗದಲ್ಲಿ ತಿಳಿಗೊಳಗಳನ್ನು ಮಾಡಿಕೊಂಡು ಕಮಲಗಳನ್ನು ಬೆಳೆಸುತ್ತಾರೆ. ಮತ್ತೆ ಕೆಲವರು ಈಜುಕೊಳಗಳನ್ನು ಮಾಡಿಕೊಳ್ಳುತ್ತಾರೆ.

ಶರಣ. ಚನ್ನರಸಪ್ಪನವರ ಮನೆ ಪ್ರಶಾಂತವಾದ ಗುಡ್ಡದ ಮೇಲಿದೆ. ಅವರು ಈ ದೇಶಕ್ಕೆ, ಈ ನಗರಕ್ಕೆ ಬಂದು ಆಗಲೇ 40 ವರ್ಷಗಳ ಮೇಲಾಗಿದೆ. ಮಕ್ಕಳೆಲ್ಲ ಉದ್ಯೋಗ ಮಾಡುತ್ತ ತಮ್ಮತಮ್ಮ ಮನೆಗಳಲ್ಲಿದ್ದಾರೆ. ಚನ್ನರಸಪ್ಪ-ಗೌರಮ್ಮನವರು ಸಾಮಾಜಿಕ, ಧಾರ್ಮಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ಪ್ರಶಾಂತವಾದ ವಾನಪ್ರಸ್ಥಾಶ್ರಮದಲ್ಲಿದ್ದಾರೆ.

ಅವರ ಮನೆಯಲ್ಲಿ ಶನಿವಾರ ದಿ. 13ರಂದು ವಿಶೇಷವಾದ ಪೂಜೆ-ಪ್ರವಚನಗಳನ್ನು ಏರ್ಪಡಿಸಿದ್ದರು. ಬಹಳ ಜನರು ಸೇರಿದ್ದು ಕಾರ್ಯಕ್ರಮವು ಚೆನ್ನಾಗಿ ನೆರವೇರಿತು. ಇಲ್ಲಿಯ ವೆಂಕಟೇಶ್ವರ ದೇವಾಲಯದ ಪ್ರಾರಂಭದ ಹಂತದಿಂದಲೂ ಚನ್ನರಸಪ್ಪನವರು ಸೇವಾ ಕಾರ್ಯದಲ್ಲಿ ತೊಡಗಿದ್ದು ಅವರದು ಗಣನೀಯ ಸ್ಥಾನ. ದೇವಾಲಯ ಸಭಾಂಗಣದಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದರು. ಚನ್ನರಸಪ್ಪನವರ ಮನೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕರು ಮತ್ತು ವಿಶೇಷ ಉಪನ್ಯಾಸಕ್ಕಾಗಿಯೇ ಬಂದ ಶ್ರೋತೃಗಳೂ ಸೇರಿ ಗಣನೀಯ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ವೆಂಕಟೇಶ್ವರ ದೇವಾಲಯದ ಶಿಕ್ಷಣ ಸಮಿತಿ ಚೇರ್ಮನ್ ಶ್ರೀಮತಿ ರೇಣುಕಾ ಪಳನಿಸ್ವಾಮಿ ಮತ್ತು ಶ್ರೀಮತಿ ಗೌರಮ್ಮ ಚನ್ನರಸಪ್ಪ ಧರ್ಮಪಿತ ಬಸವಣ್ಣನವರ ಪೂಜೆ ನೆರವೇರಿಸಿದರು. ಶ್ರೀಮತಿ ರೇಣುಕಾ ಸ್ವಾಗತಿಸಿದರು. ಚನ್ನರಸಪ್ಪನವರು ಸಭೆಗೆ ನಮ್ಮ ಪರಿಚಯವನ್ನು ಮಾಡಿಕೊಟ್ಟರು. ಅಂದಿನ ವಿಷಯ 'ವಿಜ್ಞಾನ ಮತ್ತು ಧರ್ಮ' ಭಾಷಣವು ಬಹಳ ಚೆನ್ನಾಗಿ ಆಯಿತೆಂದು ಎಲ್ಲರೂ ಅಭಿಪ್ರಾಯಪಟ್ಟರು. ಶ್ರೀಮತಿ ರೇಣುಕಾ ಧನ್ಯವಾದ ಸಮರ್ಪಿಸಿದರಲ್ಲದೆ ದೇವಸ್ಥಾನ ಸಮಿತಿ

ಪತಿಯಿಂದ ಫಲ-ಪುಷ್ಪ-ಕಾಣಿಕೆ ಸಮರ್ಪಿಸಿದರು. ನಂತರ ಸುಮಾರು ಒಂದು ಗಂಟೆ ಕಾಲ ಪ್ರಶ್ನೋತ್ತರ ನಡೆಯಿತು. ಸಭಿಕರು ಕೇಳಿದ ಸಂದೇಹಗಳಿಗೆ ಉತ್ತರ ನೀಡಿದೆ. ಶ್ರೀ ನಾಗರಾಜ್ ಎಂಬುವ ಓರ್ವರು, "ವಿಜ್ಞಾನ ಮತ್ತು ಧರ್ಮ ಪರಸ್ಪರ ಪೂರಕ ಎಂದು ಹೇಳಿದ್ದಲ್ಲದೆ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ ಎಂದು ಜಗತ್ತಿನ ಮಹತ್ವ ಕುರಿತು ಹೇಳಿದಿರಿ. ಕೆಲವರು ಈ ಜಗತ್ತೇ ಮಿಥ್ಯ ಎನ್ನುವರಲ್ಲ. ಇದಕ್ಕೇನು ಹೇಳುತ್ತೀರಿ?" ಎಂದು ಪ್ರಶ್ನಿಸಿದರು.

"ಜಗತ್ತು ಮಿಥ್ಯ ಬ್ರಹ್ಮವೊಂದೇ ಸತ್ಯ" ಎಂದು ಹೇಳಿದವರು ಶಂಕರಾಚಾರ್ಯರು ಮಾತ್ರ. ಜಗತ್ತಿನ ಇನ್ನಿತರ ಎಲ್ಲ ಧರ್ಮ, ಮತ, ಪಂಥಗಳೂ ಜಗತ್ತಿನ ಅಸ್ತಿತ್ವ ಮನ್ನಿಸಿವೆ. ಕಡೆಗೆ ಶಂಕರಾಚಾರ್ಯರೂ ಸಹ ಒಪ್ಪಿಕೊಂಡು ಜಗತ್ತನ್ನು ವ್ಯಾವಹಾರಿಕ ಸತ್ಯ ಎಂದಿದ್ದಾರೆ. ಆದ್ದರಿಂದ ಇದನ್ನು ಬಸವಣ್ಣನವರು, ಇನ್ನಿತರ ಶರಣರು "ದೇವನ ಲೀಲಾರಂಗ, ಮನುಷ್ಯನನ್ನು ಪರಿಪಕ್ವಗೊಳಿಸುವ ಕಾರ್ಯಾಗಾರ ಎಂದಿದ್ದಾರೆ" ಎಂದು ತಿಳಿಸಿದೆ.

ಮತ್ತೊಬ್ಬರು, "ಹಿಂದುಗಳಲ್ಲಿ ಅನೇಕ ದೇವತೆಗಳಿವೆ. ಒಬ್ಬೊಬ್ಬ ಗುರುಗಳು ಒಂದೊಂದು ಮಂತ್ರ ಶ್ರೇಷ್ಠ ಎನ್ನುತ್ತಾರೆ. ಒಬ್ಬರು ಹನುಮಾನ್ ಎನ್ನುತ್ತಾರೆ. ಮತ್ತೊಬ್ಬರು ರಾಮ ಮಂತ್ರ, ಇನ್ನೊಬ್ಬರು ಶಿವ ಮಂತ್ರ, ಮಗದೊಬ್ಬರು ಕೃಷ್ಣಾಯ ನಮಃ, ಎನ್ನುವರು. ನಮಗೆಲ್ಲ ಗೊಂದಲವೋ ಗೊಂದಲ" ಎಂದು ಕೇಳಿದರು.

"ಇದು ಹಿಂದೂ ಸಮಾಜದ ದೋಷವೂ ಅಹುದು, ಗುಣವೂ ಅಹುದು. ಅನೇಕ ದೇವತೆಗಳನ್ನು ನಂಬಿದರೂ ಪರಸ್ಪರ ಸಾಮರಸ್ಯದಿಂದ ಬಾಳುವುದು ಹಿಂದುಗಳ ವಿಶೇಷವಾದರೆ ಒಬ್ಬ ದೇವನನ್ನು ನಂಬದೆ ಬಹುದೇವತೋಪಾಸಕರಾಗಿ ಗೊಂದಲಕ್ಕೆ ಒಳಗಾಗುವುದು ಹಿಂದುಗಳ ದೋಷ. ಅದಕ್ಕೇನೂ ಪರಿಹಾರವಿಲ್ಲ. ನಿಮಗಿರುವ ಮಾರ್ಗವೆಂದರೆ ಯಾರಾದರೂ ಓರ್ವ ಗುರುವಿನಿಂದ ಮಂತ್ರೋಪದೇಶ ಪಡೆದು ಮುಂದುವರಿಯಬೇಕು".

"ಗುರುವು ಹೇಗೆ ಲಭ್ಯ?" ಇನ್ನೊಬ್ಬರ ಪ್ರಶ್ನೆ. ಇಲ್ಲಿಗೆ ಎಷ್ಟೋ ಜನ ಗುರುಗಳು, ಮಹಾತ್ಮರು ಬರುತ್ತಲೇ ಇರುತ್ತಾರೆ. ಅಂಥವರಿಂದ ಮಂತ್ರೋಪದೇಶ ಪಡೆಯಬೇಕು. "ಹಾಗೆ ಬಂದವರು ಒಂದೆರಡು ವಾರ ಇರುತ್ತಾರೆ. ಆಮೇಲೆ ಹೋಗಿಬಿಡುತ್ತಾರೆ. ನಂತರ ಆಗಾಗ ಅವರು ಸಿಕ್ಕರು. ನಮಗೆ ಸಂದೇಹ ಬಂದರೆ ಪರಿಹರಿಸಲು ಅವರು ಇರುವುದಿಲ್ಲ. ಏನು ಮಾಡಬೇಕು?" ಇನ್ನೊಬ್ಬರ ಪ್ರಶ್ನೆ.

"ಅದಕ್ಕೇ ದೀಕ್ಷಾ ಗುರು, ಜ್ಞಾನ ಗುರು ಎಂದು ಎರಡು ಬಗೆ. ಮಂತ್ರೋಪದೇಶ ಕೊಟ್ಟವನು ದೀಕ್ಷಾ ಗುರು ಎನಿಸಿಕೊಳ್ಳುತ್ತಾನೆ. ಅವನು ಪುನಃ ಸಿಗದಿದ್ದರೂ ಬೇರೆಯವರು ಜ್ಞಾನಗುರುವಾಗಿ ಸಂದೇಹ ಪರಿಹಾರ ಮಾಡಬಹುದು, ಮಾರ್ಗದರ್ಶನ ಮಾಡಬಹುದು".

ಪ್ರಶ್ನೋತ್ತರದ ನಂತರ ಎಲ್ಲರೂ ಚದುರಿದರು. ಆಗ ಅವಸರದಿಂದ ಓರ್ವ ತರುಣಿ ಬಂದಳು. ಆಕೆ ವೈದ್ಯಳು. "ನಾನು ಲಿಂಗಾಯತಳು. ಆದರೆ ನನಗೆ ಏನೂ ಗೊತ್ತಿಲ್ಲ. ಲಿಂಗಾಯತ ತಾಯಿತಂದೆಗಳಿಂದ ಹುಟ್ಟಿದ್ದರೂ ನನ್ನ ಧರ್ಮ ನನಗೆ ಗೊತ್ತಿಲ್ಲ. ನಾನು ಇಲ್ಲೇ ಹುಟ್ಟಿ ಬೆಳೆದವಳು. ನನ್ನ ಕ್ರಿಶ್ಚಿಯನ್ ಸ್ನೇಹಿತರು ದೇವರು ಒಬ್ಬ ಎನ್ನುತ್ತಾರೆ. ಹಿಂದುಗಳು ನೂರಾರು ದೇವರನ್ನು

ಪೂಜಿಸುತ್ತಾರೆ. ದೇವಸ್ಥಾನಕ್ಕೆ ಬರುವವರಲ್ಲಿ ಹೆಚ್ಚಿನವರು ಬ್ರಾಹ್ಮಣರು. ಇನ್ನಾವ ದೇವಾಲಯವೂ ಇಲ್ಲದಿರುವುದರಿಂದ ಇಲ್ಲಿಗೇ ನಾವೆಲ್ಲ ಬರುವುದು. ನನ್ನ ಬ್ರಾಹ್ಮಣ ಸ್ನೇಹಿತೆಯರು ಶಿವನಿಗಿಂತ ವಿಷ್ಣು ಶ್ರೇಷ್ಠ ಎನ್ನುವರು. ಶಿವನು ಏಕೆ ಶ್ರೇಷ್ಠವಲ್ಲ ?'' ಎಂದಳು.

ಆಕೆಯ ಪ್ರಶ್ನೆಗಳನ್ನು ಕೇಳಿದರೆ ಆಕೆಯ ಮನದಲ್ಲಿ ಎಂಥಾ ವಿಲಕ್ಷಣ ಗೊಂದಲವಿದೆ ಎಂಬುದು ಅರ್ಥವಾಗುವುದಲ್ಲವೆ? ಇದು ಹಿಂದುಗಳು ಮತ್ತು ಹಿಂದುಗಳ ಒಡನಾಟದಲ್ಲೇ ಇರುವ ಲಿಂಗಾಯತರೆಲ್ಲರೂ ಹೊಂದಿರುವ ಗೊಂದಲಮಯ ಪ್ರಶ್ನೆಗಳು. ಲಿಂಗಾಯತ ಧರ್ಮೀಯರಿಗೆ ಇಂಥ ಸಂದೇಹಗಳು ಏಳಲು ಅವಕಾಶವೇ ಇಲ್ಲ. ಏಕೆಂದರೆ ನಾವು ನಂಬುವುದು ಯಾವ ರೂಪವೂ ಇರದ ನಿರಾಕಾರ (ಲಿಂಗ ದೇವನನ್ನು). ಒಬ್ಬ ಐತಿಹಾಸಿಕ ಮಹಾಪುರುಷನನ್ನಾಗಿ ಶಿವನನ್ನು ಅರಿತುಕೊಂಡರೆ ಅವನದು ರಾಮ, ಕೃಷ್ಣರಿಗಿಂತಲೂ ಮಿಗಿಲಾದ ವ್ಯಕ್ತಿತ್ವ.

ಸಂಕ್ಷಿಪ್ತವಾಗಿ ಆಕೆಗೆ ಹೇಳಿದಾಗ, ''ಅಹುದಾ ? ನಮ್ಮ ಧರ್ಮ ಹೀಗಿದೆಯಾ? '' ಎಂದು ಬೆರಗಾದಳು. ''ನಮ್ಮಲ್ಲಿ ಜಾತಕ ನಂಬುವುದಿಲ್ಲ; ಮುಹೂರ್ತ ನೋಡುವುದಿಲ್ಲ. ಕಾಲದಲ್ಲಿ ಕೆಟ್ಟದ್ದು ಒಳ್ಳೆಯದು ಎಂದಿಲ್ಲ''ಎಂದಾಗ ''ಅಯ್ಯೋ ನಮ್ಮ ಡ್ಯಾಡಿ, ಮಮ್ಮಿಗೆ ಇದೇನೂ ಗೊತ್ತೇ ಇಲ್ಲ'' ಎಂದಳು. ವಚನ ಸಾಹಿತ್ಯದ ಸಂಪರ್ಕ ಅಷ್ಟಿಷ್ಟು ಇರುವ ಕರ್ನಾಟಕದ ಲಿಂಗಾಯತರೇ ಅಜ್ಞಾನಿಗಳಾಗಿ ವೀರಶೈವರೆಂದು ಕರೆದುಕೊಳ್ಳುತ್ತ ವೈದಿಕಾಚರಣೆ ಮಾಡುವಾಗ ಎಷ್ಟೋ ವರ್ಷಗಳ ಹಿಂದೆ ದೇಶಬಿಟ್ಟು ಬಂದು ತಮ್ಮ ಧರ್ಮದ ಸಂಪರ್ಕವೇ ಇರದ ಇಲ್ಲಿಯ ಲಿಂಗಾಯತರನ್ನು ದೂಷಿಸಲು ಬರುವುದೇ?

ಲಿಂಡಾ ಎಂಬ ಓರ್ವ ಅಮೆರಿಕನ್ ಮಹಿಳೆ ಬಂದು, ''ನಿಮ್ಮ ಉಪನ್ಯಾಸ ಚೆನ್ನಾಗಿತ್ತು. ಪುನಃ ಎಲ್ಲಿದೆ? ಏನಾದರೂ ಸೆಂಟರ್ ಮಾಡಿದ್ದೀರಾ? ಮಾಡುತ್ತೀರಾ?'' ಎಂದು ವಿಚಾರಿಸಿದಳು. ಸಂಪರ್ಕಿಸಲು ಯೋಗೀಶ್ವರಿ ಅವರ ಅಸ್ಟಿನ್ ವಿಳಾಸ ಕೊಟ್ಟೆ. ಮರುದಿವಸ ಶ್ರೀಮತಿ ಜಯಶೀಲ ವಾಮದೇವ ಮೂರ್ತಿಯವರು ತಮ್ಮ ಮನೆಗೆ ನನ್ನನ್ನು ಆಹ್ವಾನಿಸಿದರು.

ಪಿಟ್ಸ್‌ಬರ್ಗ್ ನಗರ ಮಧ್ಯದಿಂದ ಸುಮಾರು ನಲವತ್ತು ಮೈಲಿಗಿಂತ ಜಾಸ್ತಿ ದೂರದಲ್ಲಿರುವ ವೆಸ್ಟ್‌ಗೇಟ್ ಡ್ರೈವ್ ಪ್ರದೇಶದಲ್ಲಿ ಇವರ ಮನೆ. ದಾರಿಯುದ್ದಕ್ಕೂ ಇರುವ ಬೆಟ್ಟಗುಡ್ಡಗಳ ಹಸಿರು ವನಸಿರಿಯನ್ನು ಸವಿಯುತ್ತ ಮನೆಗೆ ಬಂದೆವು. ಮನೆಯ ಮುಂದೆ ನಿಂತರೆ ಕಣಿವೆಯಂತಹ ಪ್ರದೇಶ. ಅಲ್ಲಲ್ಲಿ ವೃಕ್ಷ ಸಂಪತ್ತು ಮಧ್ಯೆ ಮಧ್ಯೆ ಕಾಣುವ ಮನೆಗಳ ಮೇಲು ಭಾಗ. ಅಂದು ಬೆಳಗಿನಿಂದಲೂ ಮೋಡ ಕವಿದು ಸಾಕಷ್ಟು ಮಳೆ ಸುರಿಯುತ್ತಿತ್ತು. ಇತ್ತ ಕಡೆಗೆ ಬರುತ್ತ ಹೋದಂತೆ ಮೋಡ ಚದುರಿ ಬಿಸಿಲು ಬೀಳತೊಡಗಿದಂತೆ ಅಪೂರ್ವ ಜಗತ್ತು ತೆರೆದುಕೊಂಡಿತು. ಮೇಲೆ ಶುಭ್ರ ನೀಲಾಗಸದಲ್ಲಿ ಬಿಳಿಯ ಹಂಸೆಗಳು ಹಾರುವಂತೆ ಕಾಣುವ ಶುಭ್ರ ಬಿಳಿಯ ಮೋಡಗಳು. ಆಗಾಗ ಬೀಳುತ್ತ ಕಣಿವೆಗೆ, ಹಸಿರು ಹುಲ್ಲಿಗೆ ಜೀವ ತುಂಬುವ ಸೂರ್ಯನ ಕಿರಣಗಳು. ಸೆಖೆಯೂ ಇಲ್ಲದ ಚಳಿಯೂ ಇಲ್ಲದ ಆಹ್ಲಾದಕರ ವಾತಾವರಣ. ಎಲ್ಲಿ ನೋಡಿದರೂ ಬಂಗಾರದ ಬೆಳಕು. ಇಲ್ಲಿಯ ಮನೆಗಳು, ಅವುಗಳ ಸುತ್ತಲೂ ಇರುವ ಹಸಿರು ಹುಲ್ಲಿನ ಹಾಸು ಸುತ್ತ ಕಾಣುವ ವೃಕ್ಷ ಸಂಪತ್ತು ನೋಡಿದಾಗ ಮನೆಗಳು ಒಂದೊಂದು ಆಶ್ರಮದ ತರಹ ಕಾಣುತ್ತವೆ. ಒಮ್ಮೊಮ್ಮೆ ಅನ್ನಿಸುತ್ತದೆ ಅಮೆರಿಕಾದ ಈ ವಾತಾವರಣ ಕೆಲವರಿಗೆ ಅಧ್ಯಾತ್ಮ ಸಾಧನೆಗೆ ಪೂರಕ-ಅಂತರ್ಮುಖಿಗಳಾದರೆ, ಅತ್ಯಂತ ಆಳವಾದ ಪ್ರಪಾತ

ಬಹಿರ್ಮುಖಿ ವಿಷಯಾಸಕ್ತರಿಗೆ.

ಜಯಶೀಲ ಅವರು ಚಿತ್ರದುರ್ಗದ ಸಾರಂಗಮಠದ ಶರಣ. ರಾಜಶೇಖರಯ್ಯನವರ ಮಗಳು; ಅವರ ತಾಯಿ ಲಿಂ|| ಸರ್ವಮಂಗಳಮ್ಮ ಅವರು ನಮ್ಮ ಮನೆಗೆ ಬಹಳ ಪರಿಚಿತರು. ಮಾಧ್ಯಮಿಕ ಶಾಲೆಯಲ್ಲಿ ನಾವಿಬ್ಬರೂ ಜೊತೆಗೇ ಓದಿದವರು. ಡಾ|| ವಾಮದೇವ ಮೂರ್ತಿಯವರು ಮೊಳಕಾಲ್ಮುರುವಿನ ಹಿರೇಮಠದವರು. ಉಭಯತರಿಗೂ ಗುರು-ಜಂಗಮರ ಬಗ್ಗೆ ಗೌರವ. ಕಾರಿನಲ್ಲಿ ಕರೆತರುತ್ತ ಬಾಲ್ಯದ ನೆನಪುಗಳನ್ನು ಜಯಶೀಲ ಮೆಲುಕು ಹಾಕುತ್ತಿದ್ದರು.

ಈ ದೇಶವು ವಿಸ್ತಾರವಾದ ಭೂ ಪ್ರದೇಶ ಹೊಂದಿರುವುದರಿಂದ ಮಾತ್ರವಲ್ಲ ವೈಯಕ್ತಿಕ ಆರೋಗ್ಯ ಮತ್ತು ನೈಸರ್ಗಿಕ ಸಂಪತ್ತಿನ ರಕ್ಷಣೆಯ ದೃಷ್ಟಿಯಿಂದ ವಿಶಾಲವಾದ ಪಾರ್ಕ್‌ಗಳನ್ನು ಕಾಯ್ದುಕೊಳ್ಳುತ್ತಾರೆ. ಅಂಥ ಒಂದು ಪಾರ್ಕ್‌ಗೆ ಜಯಶೀಲ ಕರೆದೊಯ್ದರು. ಆರೋಗ್ಯ ಪ್ರಜ್ಞೆಯುಳ್ಳ ಬಹಳ ಜನರು ವಾಯುಸೇವನೆಗೆ ಬರುತ್ತಾರೆ; ಓಡುತ್ತಾರೆ, ಜಾಗ್ಗಿಂಗ್ ಮಾಡುತ್ತಾರೆ. ಗಾಲ್ಫ್, ಬೇಸ್ ಬಾಲ್ ಆಡಲು ಅವಕಾಶವಿರುತ್ತದೆ. ಅಷ್ಟಷ್ಟು ದೂರಗಳಲ್ಲಿ ಮಂಟಪ ಮಾಡಿ, ಮೇಜು-ಕುರ್ಚಿ ಇಟ್ಟು ಆ ಮಂಟಪಗಳಿಗೆ ಹೆಸರಿಟ್ಟಿರುತ್ತಾರೆ. ಎರಡೂ ಕಡೆ ಬೆಟ್ಟಗಳ ಸಾಲು, ಒಂದು ಸರೋವರವಿದ್ದು ನೀರು ಕನ್ನಡಿಯಂತೆ ಶುಭ್ರವಾಗಿ ತಿಳಿಯಾಗಿ ಇದ್ದು, ನನಗೆ ಊಟಿಯ ಸರೋವರವನ್ನು ನೆನಪಿಸಿತು. ಅದಕ್ಕಿಂತ ಮಿಗಿಲಾಗಿ ''ಕಾದಂಬರಿ'' ಎಂಬ ಕನ್ನಡ ಕಾವ್ಯ (ನಾಗವರ್ಮ ವಿರಚಿತ)ದ ಮಾನಸ ಸರೋವರದ ವರ್ಣನೆಯ ನೆನಪಿನ ಸುರುಳಿಯನ್ನು ಬಿಚ್ಚಿತು. ಬಹುಶಃ ಪಿ.ಯು.ಸಿ.ಗೆ ನಮಗೆ ಅದರ ಒಂದು ಭಾಗ ಪಠ್ಯವಾಗಿತ್ತು ಎನಿಸುತ್ತದೆ. ನನ್ನ ಮನದಲ್ಲಿ ಆಳವಾಗಿ ಅಚ್ಚೊತ್ತಿದ್ದು ಆ ಮಾನಸ ಸರೋವರದ ವರ್ಣನೆ. ಪ್ರಕೃತಿಯು ತನ್ನ ಸೌಂದರ್ಯ ವೀಕ್ಷಣೆಗೆ ಹಿಡಿದುಕೊಂಡ ಕೈಗನ್ನಡಿ ಆ ಮಾನಸ ಸರೋವರ ಎಂಬಂತೆ ಇಲ್ಲಿ ಸಹ ಸರೋವರದ ಸ್ತಬ್ಧ ದರ್ಪಣದಲ್ಲಿ ಬೆಟ್ಟಗಳು, ಅದರ ಮೇಲಿನ ಆಕಾಶ ಪ್ರತಿಬಿಂಬಿತವಾಗಿದ್ದವು. ಬಗೆಬಗೆಯ ಕಮಲದ ಹೂಗಳು ಅರಳಿ ಸರೋವರದ ಶೋಭೆಯನ್ನು ಹೆಚ್ಚಿಸಿದ್ದವು. ಅಲ್ಲಿ ಒಂದು ಬೋಟ್ ಹೌಸ್ ಸಹ ಇತ್ತು. ಈಗ ಸೀಸನ್ ಅಲ್ಲ ಎಂದು ನೀರಿನಲ್ಲಿ ದೋಣಿ ಇಳಿಯಲು ಪರವಾನಗಿ ಇಲ್ಲದ್ದರಿಂದ ಬೋಟ್ ಹೌಸ್ ಮುಚ್ಚಲಾಗಿತ್ತು. ಕೃತಕ ಕೊಳಗಳಲ್ಲಿ ಅನೇಕ ಜಲಪಕ್ಷಿಗಳು ಸದ್ದು ಮಾಡುತ್ತ ತೇಲುತ್ತಿದ್ದವು. ಅವು ನೀರಿನಿಂದ ಹೊರಗೆ ಬಂದು ಗುಂಪುಗುಂಪಾಗಿ ಸಂಚರಿಸುತ್ತಿದ್ದವು. ಕೆಲವು ಜನರು ಬ್ರೆಡ್ಡಿನ ಚೂರು ಎಸೆಯುತ್ತಲಿದ್ದರು. ಅವನ್ನು ಆಯ್ದುಕೊಳ್ಳಲು ಸ್ಪರ್ಧಿಸುತ್ತಿದ್ದವು.

ಅಲ್ಲಿ ಶುಭ್ರ ಬಿಳಿಯ ಹಂಸೆಗಳು ಸಹ ಇರುವುದಾಗಿ ಬರೆದಿದ್ದರು. ನಮ್ಮ ಕಣ್ಣಿಗೆ ಅವು ಕಾಣಲಿಲ್ಲ.

ದಿ. 17 ರಂದು ಪಿಟ್ಸ್‌ಬರ್ಗ್ ಡೌನ್‌ಟೌನ್ (ನಗರದ ಮಧ್ಯಭಾಗ) ನೋಡಲು ಮೌಂಟ್ ವಾಷಿಂಗ್‌ಟನ್ ವ್ಯೂ ಪಾಯಿಂಟ್‌ಗೆ ಡಾ||ವಾಮದೇವ ಮೂರ್ತಿಯವರು ಮತ್ತು ಜಯಶೀಲಾ ಕರೆದೊಯ್ದರು. ರಾತ್ರಿ ವಿದ್ಯುತ್ ದೀಪಗಳು ಬೆಳಗುವಾಗ ಆ ದೃಶ್ಯ ನೋಡಬೇಕಂತೆ. ಹಗಲಿನಲ್ಲಿ ಬೃಹತ್ ಕಟ್ಟಡಗಳು ಕಾಣಬರುತ್ತವೆ. ಆದರೆ ರಾತ್ರಿಯ ವೇಳೆಯ ಸೊಬಗೇ ಬೇರೆ. ಡೌನ್ ಟೌನ್ ಕಟ್ಟಡಗಳಲ್ಲಿ ಇಡೀ ರಾತ್ರಿ ವಿದ್ಯುತ್ ದೀಪಗಳನ್ನು ಉರಿಸಲೇ ಬೇಕಂತೆ. ಎತ್ತರವಾದ

ಕಟ್ಟಡಗಳ ಕಿಟಕಿಗಳಿಂದ ಬೆಳಕು ಕಾಣುತ್ತದೆ. ತುದಿಯ ಗೋಪುರಗಳು ಪೂರ್ಣವಾಗಿ ಬೆಳಗುತ್ತವೆ. ಎರಡು ನದಿಗಳಾದ ಅಲಿಗೇನಿ ಮತ್ತು ಮೆಲಂಗಹಾಲ್ (ಬಹುಶಃ ಈ ಹೆಸರುಗಳು ಮೂಲ ನಿವಾಸಿಗಳಾದ ರೆಡ್ ಇಂಡಿಯನ್ ಭಾಷೆಯವು ಇರಬಹುದು). ಅವುಗಳ ಮೇಲೆ ಕಟ್ಟಿರುವ ಸೇತುವೆಗಳಿಗೆ ಕಮಾನಿನ ಆಕಾರದಲ್ಲಿ ವಿದ್ಯುತ್ ದೀಪಗಳ ಸಾಲು ಜೋಡಿಸಲ್ಪಟ್ಟಿವೆ. ಹರಿಯುವ ನದಿಗಳ ಅಲೆಗಳು ವಿದ್ಯುತ್ ದೀಪದ ಬೆಳಕಿನಲ್ಲಿ ಹೊಳೆಯುತ್ತ ರೋಮಾಂಚನಗೊಳಿಸುತ್ತವೆ. ಪ್ರಸಿದ್ಧವಾದ ಹಿಲ್ಟನ್ ಹೋಟೆಲ್ ಮುಂದೆ ಅತಿ ಸುಂದರವಾದ ವಿದ್ಯುದಲಂಕೃತವಾದ ಸಂಗೀತ ಕಾರಂಜಿ ಇರುವುದಂತೆ. ಆಗಲೇ ಸಮಯ ಬಹಳವಾಗಿದ್ದರಿಂದ ಅದನ್ನು ನಿಲ್ಲಿಸಲಾಗಿತ್ತು. ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ಒಂದು ದೋಣಿಯು ನದಿಯಲ್ಲಿ ಸಂಚರಿಸುತ್ತ ಬಂದು ನಿಂತಿತು. ಜನರನ್ನು ಜಲವಿಹಾರಕ್ಕೆ ಕರೆದೊಯ್ದಿದ್ದ ದೋಣಿ ಅದು. ಕೆಲವು ಕ್ಷಣಗಳ ಕಾಲ ನಿಂತು ನಗರದ ಸೌಂದರ್ಯ ವೀಕ್ಷಿಸಿ ಚಳಿಗಾಳಿ ಬೀಸುತ್ತಿದ್ದುದರಿಂದ ಹೆಚ್ಚು ಹೊತ್ತು ನಿಲ್ಲಲಾಗದೆ ಮನೆಗೆ ಮರಳಿದೆವು.

(ಮುಂದುವರಿಯುವುದು) -----

ವಚನ ಕಿರಣ

ಭಕ್ತಿಯಿರುವಲ್ಲಿ ಭಯವಿರದು
ಭಯವಿರುವಲ್ಲಿ ಭಕ್ತಿಯಿರದು
ಭಯ ಭಕ್ತಿಯಿರುವಲ್ಲಿ ಮುಕ್ತಿಯಿರದು
ನಿತ್ಯ ನಿರಂಜನನ ಸೇರುವ ಯುಕ್ತಿಯಿರದು.

★

ಗುರಿಯನ್ನು ಊಹಿಸಿರಿ,
ದಾರಿಯನ್ನು ಪರಿಶೀಲಿಸಿರಿ,
ಸಾಧನಗಳನ್ನು ಸಮೀಕರಿಸಿರಿ,
ಪ್ರಾರಂಭವನ್ನು ನಿರ್ಧರಿಸಿರಿ
ನಿತ್ಯ ನಿರಂಜನನತ್ತ ಪಯಣವನ್ನು ಆರಂಭಿಸಿರಿ.

★

ಸತ್ತು ಹೋದರೆ ಯಾರೂ ಸ್ಮರಿಸುವುದಿಲ್ಲ
ದುಡಿಯದಿದ್ದರೆ ಯಾರೂ ಕೊಡುವುದಿಲ್ಲ
ನರಳುತ್ತಿದ್ದರೆ ಯಾರೂ ನೋಡುವುದಿಲ್ಲ
ನಿತ್ಯ ನಿರಂಜನನಲಿ ಇದ ತಿಳಿದು ನಡೆದರೆ
ಬದುಕೆಲ್ಲ ಬೆಲ್ಲ.

★

ಹೊರಗೆ ನೋಡಿದರೆ ಆಪತ್ತು
ಒಳಗೆ ನೋಡಿದರೆ ವಿದ್ವತ್ತು
ತಿಳಿದಿರಲಿ ಇದರ ಮಹತ್ತು
ನಿತ್ಯ ನಿರಂಜನನೆ ಆಗುವೆ ಯಾವತ್ತು.

★

ಒಬ್ಬನು ಏರಿದರೆ ಮೇಲು ಮೇಲಕ್ಕೆ
ಕಾಲಿಡಿದು ಜಗ್ಗುವನು ಮತ್ತೊಬ್ಬನು
ಜಗ್ಗಿದರೆ ಜಗ್ಗಲಿ ಜರಿಯಬೇಡ,
ನಿತ್ಯ ನಿರಂಜನನ ನೆನೆದು ಮೇಲಕ್ಕೆ ಏರುವುದ
ಮರೆಯಬೇಡ

★

ನಾನು ಆತ್ಮನೆಂಬರು ಆವೇಶದಲಿ
ಆಚಾರವ ಮರೆಯುವರು ಅರಮನೆಯಲಿ
ವಿವೇಕದಿಂದ ಬಾಳಿದರೆ ಗುರುಮನೆಯಲಿ
ಸಿಗುವುದು ಸ್ಥಾನವು ನಿತ್ಯ ನಿರಂಜನನಲಿ

★

ಇಷ್ಟ ಪಟ್ಟರೆ ಇಷ್ಟಲಿಂಗ
ಪ್ರಾಣವಿಟ್ಟರೆ ಪ್ರಾಣಲಿಂಗ
ಇಷ್ಟ ಪ್ರಾಣ ಬಿಟ್ಟರೆ ನಿತ್ಯ ನಿರಂಜನನಾಣೆ
ಆಗುವೆ ನೀನು ಮಂಗ.

★

ಕೇಳಬೇಕು, ಕೇಳಿ ಕರಗಬೇಕು
ಹಾಡಬೇಕು, ಹಾಡಿ ಹರಸಬೇಕು
ಬಿತ್ತಬೇಕು, ಬಿತ್ತಿ ಬೆಳೆಯಬೇಕು
ಬೆಳೆದುದ್ದನ್ನು ನಿತ್ಯ ನಿರಂಜನನಿಗೆ ಅರ್ಪಿಸಬೇಕು.

– ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ

ಶರಣ ವ್ರತ ಸ್ವೀಕಾರ

ಸಿಖ್ ಧರ್ಮದ ಖಾಲ್ಸಾ, ಇಸ್ಲಾಂ ಧರ್ಮದ ಹಜ್‌ದಿಂದ ಪ್ರೇರಿತರಾಗಿ, ಪಂಢರಾಪುರದ ವಾರಕರಿಯ ದಿಂಡಿ ಉತ್ಸವ, ಶಬರಿ ಮಲೈದ ಅಯ್ಯಪ್ಪಸ್ವಾಮಿ ಭಕ್ತಿಪಂಥದ ಆಚರಣೆಗಳಿಂದ ಸ್ಫೂರ್ತಿ ಪಡೆದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಧರ್ಮಕ್ಷೇತ್ರವೆಂದು ಗುರುತಿಸಿಕೊಂಡು 1988ರಲ್ಲಿ ಮೊಟ್ಟ ಮೊದಲ ಶರಣ ಮೇಳವನ್ನು ನಡೆಸಲಾಯಿತು. ಇದು ವಿಶ್ವಗುರು ಬಸವಣ್ಣನವರೇ ಆದಿಯಾಗಿ ಶರಣ ಪುಂಗವರೆಲ್ಲರ ಅಪೇಕ್ಷೆ ಮತ್ತು ಸಂಕಲ್ಪ ಎಂಬುದು ನಮಗೆಲ್ಲ ಮನದಟ್ಟಾಗಿದೆ. ಧರ್ಮಪಿತ ಬಸವಣ್ಣನವರು ಅವರ ಕಾಲದಲ್ಲಿಯೇ ಆಗಾಗ ಗಣಪರ್ವಗಳನ್ನು ನಡೆಸಿ ಶರಣರನ್ನು ಒಂದೆಡೆಯಲ್ಲಿ ಸಮಾವೇಶಗೊಳಿಸುತ್ತಿದ್ದರು. ಇದಕ್ಕೆ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಭಕ್ತರು ಬರುತ್ತಿದ್ದರು ಎಂಬುದನ್ನು ಹರಿಹರ ಮಹಾಕವಿ, ಸಿಂಗಿರಾಜ ಮುಂತಾದವರು ಬಣ್ಣಿಸಿದ್ದಾರೆ.

ಮಡಿವಾಳ ಮಾಚಿದೇವರು ಕಾಲಜ್ಞಾನ ವಚನದಲ್ಲಿ ಹೀಗೆ ಹೇಳುತ್ತಾರೆ.

೧. ದಕ್ಷಿಣದ ಕೃಷ್ಣೆಗೆ ಕರೆವರೈಯ್ಯ ಜನ ನೆರೆವರಯ್ಯ

೨. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ, ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

೩. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು.

ಪರಿಧಾವಿ ಸಂವತ್ಸರವು ಕ್ರಿ.ಶ. 2032ಕ್ಕೆ ಬರುವುದು. ಈಗ ನಾವು ಎಷ್ಟೇ ಕಳಕಳಿಯಿಂದ ನಿಷ್ಕಲ್ಮಶ ಮನಸ್ಸಿನಿಂದ ಕರೆದರೂ ಲಿಂಗಾಯತರು ಎಲ್ಲರೂ ಒಟ್ಟಾಗಿ ಸೇರದೆ, ಶರಣ ಮೇಳಕ್ಕೆ ಬರದೆ ಗುಂಪುಗುಂಪಾಗಿ ಇರುವರು. ಆದರೆ ಆದಿ ಶರಣರ ಸಂಕಲ್ಪ, ನಮ್ಮ ಆಶಯ ಖಂಡಿತ ವ್ಯರ್ಥವಾಗದು. ಈ ಎಲ್ಲ ಭೇದಗಳು ಅಳಿದು ಕ್ರಿ.ಶ. 2032ರ ಸುಮಾರಿಗೆ (ನಾವು ಅಷ್ಟು ಕಾಲ ಬದುಕಿರದೆ ಇದ್ದರೂ) ಎಲ್ಲ ಬಸವ ಭಕ್ತರು, ಲಿಂಗಾಯತರು ಶರಣ ಮೇಳಕ್ಕೆ, ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಬರಲು ಆರಂಭಿಸುವರು. ಇದು ಮಾಚಿದೇವರ ವಾಣಿ.

ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಜನವರಿ 11ರಿಂದ 15 ರವರೆಗೆ ಶರಣ ಮೇಳವು 1988 ರಿಂದಲೂ ನಡೆಯುತ್ತ ಬರುತ್ತಿದ್ದು 2004 ಇಸವಿಗೆ 17ನೆಯ ಶರಣ ಮೇಳ ಒದಗಿ ಬಂದಿದೆ. ಕೇವಲ ಯಾಂತ್ರಿಕವಾಗಿ ಬಂದು ಹೋಗುವ ಪರಿಪಾಠಕ್ಕಿಂತಲೂ **'ಶರಣ ವ್ರತ'**ವನ್ನು ಸ್ವೀಕಾರ ಮಾಡಿ ಬರುವ ಪರಿಪಾಠವು ಅತ್ಯುತ್ತಮ. ಈಗಾಗಲೇ 4-5 ವರ್ಷಗಳಿಂದ ಕೆಲವರು ಶರಣ ವ್ರತಧಾರಿಗಳಾಗಿ ಬರುತ್ತಲಿದ್ದಾರೆ. ಈಗ ನಾವು ಇದಕ್ಕೆ ನಿರ್ದಿಷ್ಟ ರೂಪ ಕೊಡಬೇಕಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು ವ್ರತ ಸ್ವೀಕಾರ ಮಾಡುವುದಕ್ಕೆ ಒತ್ತು ಕೊಡಬೇಕು. ಇದಕ್ಕಾಗಿ ಕೆಲವು ನಿಯಮಾವಳಿ ಸೂಚಿಸಲಾಗಿದೆ.

ಜನವರಿ 14ರಂದು ಬೆಳಿಗ್ಗೆ ಗಣಲಿಂಗ ದರ್ಶನ ಪಡೆಯುವುದು, 11ರಿಂದ 2ರವರೆಗೆ ನಡೆಯುವ ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು, ಸಂಜೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪಾಲ್ಗೊಳ್ಳುವ ಕ್ರಿಯೆಯಿಂದ ಆ ವರ್ಷದ ವ್ರತ ಪೂರ್ತಿಯಾಗುತ್ತದೆ. ಈ ದಿನಾಂಕಕ್ಕೆ ಪೂರ್ವಭಾವಿಯಾಗಿ 10,20,30,40 ದಿವಸಗಳ ವ್ರತವನ್ನು ಶರಣ ಬಂಧುಗಳು ಕೈಗೊಳ್ಳಬೇಕು.

೧. ಗುರು ಸಾರಾಯ ಸಂಪದ್ ವ್ರತ : 40 ದಿವಸಗಳ ವ್ರತ ; ಡಿಸೆಂಬರ್ 6ರಂದು ಪ್ರಾರಂಭ
೨. ಲಿಂಗ ಸಾರಾಯ ಸಂಪದ್ ವ್ರತ : 30 ದಿವಸಗಳ ವ್ರತ ; ಡಿಸೆಂಬರ್ 16ರಂದು ಪ್ರಾರಂಭ
೩. ಜಂಗಮ ಸಾರಾಯ ಸಂಪದ್ ವ್ರತ : 20 ದಿವಸಗಳ ವ್ರತ ; ಡಿಸೆಂಬರ್ 26ರಂದು ಪ್ರಾರಂಭ.
೪. ಪ್ರಸಾದ ಸಾರಾಯ ಸಂಪದ್ ವ್ರತ : 10 ದಿವಸಗಳ ವ್ರತ ; ಜನವರಿ 5ರಂದು ಪ್ರಾರಂಭ.

ಈ ನಾಲ್ಕು ಅವಧಿಯ ವ್ರತಗಳಲ್ಲಿ ಯಾವುದನ್ನೇ ಆಯ್ದುಕೊಂಡರೂ ಶರಣ-ಶರಣೆಯರು, ಮಕ್ಕಳು-ಮುದುಕರು ಯಾರೇ ಇರಲಿ ಮುಂದೆ ತಿಳಿಸುವ ನೇಮಗಳನ್ನು ನಡೆಸಬೇಕು.

೧. ಬಿಳಿಯ ವಸ್ತ್ರಗಳನ್ನು ಧರಿಸಬೇಕು. ವ್ರತದ ಅವಧಿಯಲ್ಲಿ ಶರಣರಿರಲಿ, ಶರಣೆಯರೇ ಇರಲಿ ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು, ಕಾಲಲ್ಲಿ ಚಪ್ಪಲಿ ಧರಿಸುವುದನ್ನು ತೊರೆಯಬೇಕಾಗಿಲ್ಲ. ಚಪ್ಪಲಿ ತೊಡುವುದರಿಂದ ಕಾಲಿಗೆ ರಕ್ಷೆ ಇರುತ್ತದೆ. ಚಪ್ಪಲಿ ಮೈಲಿಗೆ ಎಂಬ ತಪ್ಪು ತಿಳುವಳಿಕೆಯಿಂದ ಯಾರೋ ಬೇರೆ ವ್ರತಗಳವರನ್ನು ನೋಡಿ ಚಪ್ಪಲಿ ತೊಡುವುದನ್ನು ಬಿಡಬೇಕಾಗಿಲ್ಲ.

೨. ಪೂಜೆ-ಪಠಣ ಮಾಡುವಾಗ ಬಿಳಿಯ ವಸ್ತ್ರದ ಮೇಲೆ ಕಾವಿಯ ಸ್ಕಾರ್ಫನ್ನು ಕಡ್ಡಾಯವಾಗಿ ಧರಿಸಬೇಕು.

೩. ಶರಣರು ತಲೆಯ ಮೇಲೆ ಷಟ್ಕೋನದ ಟೋಪಿ ಧರಿಸಿರಬೇಕು.

೪. ಬೆಳಗ್ಗೆ-ಸಂಜೆ ಎರಡೂ ಹೊತ್ತು ಸ್ನಾನ ಮಾಡಬೇಕು. ಲಿಂಗಾಯತರು, ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಮಾಡಬೇಕು. ಲಿಂಗಾಯತೇತರ ಬಸವ ಭಕ್ತರು ಗುರು ಬಸವಾರ್ಚನೆ ಮಾಡಬೇಕು.

೫. ಎರಡೂ ಹೊತ್ತು ವಚನ ಪಠಣ ಮಾಡಬೇಕು. ಬೆಳಗ್ಗೆ 108 ವಚನ ಸಂಜೆ 108 ವಚನ ಪಠಿಸಬೇಕು. ಓದಲು ಬರದ ಅವಿದ್ಯಾವಂತರು 'ಓಂ ಶ್ರೀ ಗುರು ಬಸವಲಿಂಗಾಯ ನಮಃ' ಮಂತ್ರವನ್ನು ೧೦೮ರಂತೆ ಎರಡೂ ಹೊತ್ತು ಪಠಿಸಬಹುದು.

೬. ಸಂಜೆಯ ವೇಳೆಯಲ್ಲಿ ಶರಣ ವ್ರತಿಗಳೆಲ್ಲರು ಒಂದು ಸ್ಥಳದಲ್ಲಿ ಸಾಮೂಹಿಕವಾಗಿ ಸೇರಿ ನೆನಹು-ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ವಚನ ಪಠಣ ಮಾಡಿ, ವಚನ ಲೇಖನವನ್ನು ಮಾಡಬೇಕು. ಪ್ರಾರ್ಥನೆ-ವಚನ ಪಠಣದ ನಂತರ, ಮೌನವಾಗಿ ವಚನ ಲೇಖನವನ್ನು ಕೈಗೊಳ್ಳಬೇಕು. ಬರೆಯಲು ಬರದವರು ಕನಿಷ್ಠ "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಬರೆಯಲು ಕಲಿತು, ಅದೇ ಮಂತ್ರವನ್ನು ಬರೆಯಬೇಕು. ವಚನ ಲೇಖನ ಗ್ರಂಥವನ್ನು ಬರುವಾಗ ತಮ್ಮ ಜೊತೆಗೆ ತಂದು, ಪುನಃ ಮನೆಗೆ ಹೋಗುವಾಗ ಒಯ್ದು, ಮನೆಯಲ್ಲೂ ಬರಹ ಮುಂದುವರಿಸಬಹುದು.

೭. ವ್ರತ ಕಾಲದಲ್ಲಿ ಕಾಯಕವನ್ನು ಬಿಡಬೇಕಾಗಿಲ್ಲ. ಇನ್ನೂ ನಿಷ್ಠೆಯಿಂದ ಮಾಡಬೇಕು.

೮. ಲಿಂಗಾಯತರು ಭಸ್ಮ, ರುದ್ರಾಕ್ಷಿ, ಇಷ್ಟಲಿಂಗಗಳನ್ನು ಸದಾ ಧರಿಸಿರಬೇಕು, ಲಿಂಗಾಯತೇತರ ವ್ರತಧಾರಿಗಳು ಭಸ್ಮ-ರುದ್ರಾಕ್ಷಿಗಳನ್ನು ತಪ್ಪದೇ ಧರಿಸಿರಬೇಕು.

೯. ಸ್ತ್ರೀಯರು ಮುಟ್ಟು-ಮೈಲಿಗೆ ಮುಂತಾದ ಭ್ರಾಂತಿಗೆ ಒಳಗಾಗಬಾರದು.

೧೦. ವ್ರತದ ಅವಧಿಯಲ್ಲಿ ಧೂಮ್ರಪಾನ, ತಂಬಾಕು ಸೇವನೆ, ಮಾಂಸಾಹಾರ, ದಾಂಪತ್ಯ ಸುಖ ಪೂರ್ಣವಾಗಿ ವರ್ಜಿಸಬೇಕು. ಮದ್ಯಪಾನ ವ್ಯಸನಿಗಳು ಮತ್ತು ಮಾಂಸಾಹಾರಿಗಳು ವ್ರತದ ಅವಧಿಯ ನಂತರವೂ ಇವನ್ನು ಬಿಟ್ಟು ಶುದ್ಧಿಯನ್ನು ಕಾಯ್ದುಕೊಂಡರೆ ಉತ್ತಮ.

೧೧. ವ್ರತದ ಅವಧಿಯಲ್ಲಿ ಲಿಂಗಾಯತರು ಪ್ರತಿ ದಿವಸವೂ ಎರಡೂ ಹೊತ್ತು ಇಷ್ಟಲಿಂಗ ಪೂಜೆ ಮಾಡಿ, ನಂತರ ಗುರು ಬಸವಣ್ಣನವರ 108 ಸ್ತುತಿಗಳನ್ನು ಹೇಳಿ ಪೂಜಿಸಿ, ತದ ನಂತರ ವಚನ ಪಠಣ ಮತ್ತು ವಚನ ಲೇಖನ ವಿಧಿಯನ್ನು ಪೂರ್ಣಗೊಳಿಸಬೇಕು. ವ್ರತದ ಅವಧಿಯಲ್ಲಿ ಎಷ್ಟು ಸೋಮವಾರ ಬರುತ್ತವೋ ಅಷ್ಟು ಸೋಮವಾರ ಅಥವಾ ಕಾಯಕ ಜೀವಿಗಳು ಸೋಮವಾರ ರಜೆ

ಇಲ್ಲದಿರುವುದರಿಂದ ಭಾನುವಾರದಂದು ಬಸವೇಶ್ವರ ಪೂಜಾವ್ರತವನ್ನು ಪೂರ್ಣ ರೂಪದಲ್ಲಿ ಮಾಡಬೇಕು. ಲಿಂಗಾಯತೇತರರು ಇಷ್ಟಲಿಂಗ ದೀಕ್ಷೆ ಪಡೆದಿರದಿದ್ದರೆ, ಆಗ ದಿನನಿತ್ಯ ಗುರುಬಸವಾರ್ಚನೆ ಮಾಡಿ 108 ಬಸವ ಮಂತ್ರ ಪಠಣ ಮಾಡಬೇಕು. ವಾರಕ್ಕೊಮ್ಮೆ ಪೂರ್ತಿ ಪೂಜಾವ್ರತ ಮಾಡಬೇಕು. ವಚನ ಪಠಣ ಮತ್ತು ವಚನ ಲೇಖನಗಳನ್ನು ಕಡ್ಡಾಯವಾಗಿ ಮಾಡಬೇಕು.

೧೨. ರಾಷ್ಟ್ರೀಯ ಬಸವ ದಳಗಳು ಇದ್ದಲ್ಲಿ ಹೆಚ್ಚು ಹೆಚ್ಚು ಜನರನ್ನು ಅವರ ಸಮಯಾವಕಾಶಕ್ಕೆ ತಕ್ಕಂತೆ 10, 20, 30, 40 ದಿವಸಗಳ ಶರಣ ವ್ರತಿಗಳಾಗಲು ಪ್ರೇರೇಪಿಸಬೇಕು. ಕೂಡಲ ಸಂಗಮಕ್ಕೆ ಶರಣ ಮೇಳಕ್ಕೆ ಕರೆ ತರಬೇಕು. ಅಲ್ಲಿ ಅವರವರ ರಾಷ್ಟ್ರೀಯ ಬಸವ ದಳಗಳಿಂದ ಶರಣ ವ್ರತಧಾರಿಗಳ ಪಟ್ಟಿಯನ್ನು ಸಲ್ಲಿಸಬೇಕು. ಅತಿ ಹೆಚ್ಚಿನ ಶರಣ ವ್ರತಿಗಳನ್ನು ಕರೆತಂದ ರಾಷ್ಟ್ರೀಯ ಬಸವ ದಳಗಳಿಗೆ ಕ್ರಮವಾಗಿ ೩ ಬಹುಮಾನಗಳನ್ನು ಕೊಡಲಾಗುವುದು. ರಾಷ್ಟ್ರೀಯ ಬಸವ ದಳ ಇಲ್ಲದಿರುವಲ್ಲಿ ವೈಯಕ್ತಿಕವಾಗಿಯೇ ಶರಣ ಬಂಧುಗಳು ವ್ರತವನ್ನು ಧಾರಣೆ ಮಾಡಬಹುದು.

ಅದೇ ರೀತಿ, ಶರಣ ವ್ರತ ಸ್ವೀಕಾರ ಮಾಡದೆಯೂ ಕೇವಲ ವಚನ ಲೇಖನ ಮಾತ್ರ ಮಾಡುವವರನ್ನು ಪ್ರೇರೇಪಿಸಿ, ವಚನಗಳನ್ನು, ಬರೆಸಿ, ತಂದು ಸಮರ್ಪಿಸುವ ರಾಷ್ಟ್ರೀಯ ಬಸವ ದಳ ಅಥವಾ ಇನ್ನಿತರ ಧಾರ್ಮಿಕ ಸಂಸ್ಥೆಗಳಿಗೂ ಬಹುಮಾನ ಉಂಟು.

೧೩. ರಾಷ್ಟ್ರೀಯ ಬಸವ ದಳಗಳಲ್ಲಿ ಕ್ರಿಯಾ ಮೂರ್ತಿಗಳಿದ್ದರೆ ಅವರಿಂದ ಶರಣ ವ್ರತ ದೀಕ್ಷೆ ಪಡೆಯಬಹುದು. ಸಾಮಾನ್ಯವಾಗಿ ಮೊದಲೇ ಶರಣ ಬಂಧುಗಳು ಇಷ್ಟಲಿಂಗ, ರುದ್ರಾಕ್ಷಿ ಮಾಲೆ ಮುಂತಾಗಿ ಧರಿಸಿರುತ್ತಾರೆ. ಆಕಸ್ಮಾತ್ ರುದ್ರಾಕ್ಷಿ ಮಾಲೆಯನ್ನು ಮೊದಲೇ ಧರಿಸಿರದಿದ್ದರೆ ಶರಣ ವ್ರತದ ಕಾಲದಲ್ಲಿ ತಪ್ಪದೆ ಧರಿಸಬೇಕು. ರುದ್ರಾಕ್ಷಿ ಮಾಲೆ ಸಿಕ್ಕದೆ ಇದ್ದರೆ, ಅಥವಾ ಅದು ಬಹಳ ತುಟ್ಟಿ ಇರುವ ಕಾರಣ ಕಡೆಗೆ ಭದ್ರಾಕ್ಷಿ ಕಾಳಿನ ಸರವನ್ನಾದರೂ ಧರಿಸಬೇಕು.

ನಿಜವಾಗಿಯೂ ಹೇಳುವುದಾದರೆ ಬಸವ ಧರ್ಮದ ಪ್ರಕಾರ ಅವಧಿಯ ವ್ರತಗಳು ಇರದೆ, ಜೀವನವೇ ಒಂದು ವ್ರತವಾಗಬೇಕು. ಹತ್ತು ದಿನವೋ ಒಂದು ತಿಂಗಳೋ ವ್ರತ ಮಾಡಿ (ಅಯ್ಯಪ್ಪ ಸ್ವಾಮಿ ವ್ರತದಂತೆ) ಕಟ್ಟುನಿಟ್ಟಾದ ಆಚರಣೆ ನಡೆಸಿ, ಪುನಃ ಮೊದಲಿನಂತೆ ಇರುವುದು ನಿಜಕ್ಕೂ ಅರ್ಥರಹಿತ. ಶರಣನ ನಿತ್ಯ ನೇಮಗಳು ಸಹಜವಾಗಿದ್ದು ವರ್ಷ ಪೂರ್ತಿ, ಜೀವಮಾನಪೂರ್ತಿ ಒಂದೇ ರೀತಿ ಇರಬೇಕು. ಆದರೆ ಲಿಂಗಾಯತರು ಧರ್ಮಾಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಮುಖರಾಗುತ್ತ ಇಷ್ಟಲಿಂಗಧಾರಣೆ, ವಚನ ಸಾಹಿತ್ಯ ಅಧ್ಯಯನ ಮುಂತಾದುವನ್ನು ತೊರೆಯುತ್ತಲಿರುವುದರಿಂದಲೂ ಮತ್ತು ಅನ್ಯ ದೈವಗಳ ಪೂಜೆ-ವ್ರತಗಳತ್ತ ಒಂದು ಫ್ಯಾಶನ್ ಎಂಬಂತೆ ಆಕರ್ಷಿತರಾಗುತ್ತಿರುವುದರಿಂದಲೂ ಅವರಲ್ಲಿ ವಿಶೇಷ ಆಸಕ್ತಿ ಮೂಡಿಸಲೋಸುಗ ವಿಶಿಷ್ಟ ಅವಧಿಯ ವ್ರತಗಳನ್ನು ನಿರ್ದೇಶಿಸಲಾಗುತ್ತಿದೆ. ಈ ನಿಮಿತ್ತವಾಗಿಯಾದರೂ ಅವರು ಮತ್ತು ಇನ್ನಿತರರು ವಚನ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರೆ ಮುಂದೆ ಧರ್ಮಪ್ರಜ್ಞೆಯು ಸ್ಥಾಯಿಯಾಗುತ್ತಾ ಹೋಗುವುದು.

ಶರಣ ಮೇಳದಲ್ಲಿ ಶರಣ ವ್ರತಿಗಳಿಗೆ ವಿಶೇಷ ಸಂದರ್ಶನಾವಕಾಶ

ವಿಶೇಷವಾದ ದರ್ಶನಾವಕಾಶವನ್ನು ಏರ್ಪಡಿಸಿ, ಶರಣ ವ್ರತಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರನ್ನು ಸಂದರ್ಶಿಸಿ, ಶರಣ ವ್ರತಧಾರಣೆಗಾಗಿ ವಿಶೇಷ ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪ್ರತಿ ವರ್ಷದ ಜನವರಿಯ ೧೫ನೆಯ ದಿನಾಂಕದಂದು ಈ ಗುರುದರ್ಶನ ಕಾರ್ಯಕ್ರಮವಿರುತ್ತಿದ್ದು ಶರಣ ವ್ರತಿಗಳು ಪೀಠಾಧ್ಯಕ್ಷರಿಂದ ಆಶೀರ್ವಾದ ಮತ್ತು ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ.

ಆಧಾರ ಗ್ರಂಥಗಳು

ಶರಣ ವ್ರತ ಧಾರಣೆಯ ಕಾಲದಲ್ಲಿ ವಚನ ಸಾಹಿತ್ಯ ಪಠಣಕ್ಕೆ ಮತ್ತು ವಚನ ಲೇಖನ ಕಾರ್ಯಕ್ಕೆ ಬಳಸಬಹುದಾದ ಗ್ರಂಥಗಳೆಂದರೆ :

೧. ಬಸವ ವಚನ ದೀಪ್ತಿ. ಸಂಪಾದಕರು : ಬಸವಾತ್ಮಜೆ

೨. ವಚನ ಸಾಹಿತ್ಯ ಸಂಗ್ರಹ. ಸಂಪಾದಕರು : ಎಸ್. ಎಸ್. ಭೂಸನೂರಮಠ

೩. ಕರ್ನಾಟಕ ಸರ್ಕಾರ ಪ್ರಕಟಿಸಿರುವ ವಚನ ಸಂಪುಟಗಳು.

೪. ಅಥವಾ ಲಭ್ಯವಿರುವ ಆದಿ ಶರಣರ ವಚನ ಕೃತಿಗಳು.

ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಬರೆದಿರುವ ವಚನಗಳು, ನಂತರದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು ಬರೆದಿರುವ ವಚನಗಳನ್ನು ಪಠಣ ಮಾಡಲು ಮತ್ತು ಬರೆಯಲು ಸೀಮಿತಗೊಳಿಸಬೇಕಾಗಿದೆ.

ವಚನ ಮಂಟಪ ರಚನೆ

ವಚನ ಮಂಟಪ ಬಳ್ಳಿ ಸುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸಮತವ ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥ ನೇ.ಅ. 75 ॥ *ಜನಪದ ಗೀತೆಗಳು*

ಸಾಮಾನ್ಯವಾಗಿ ಪೂಜಾ ಕೋಣೆಗಳು ಚಿಕ್ಕವಿರುತ್ತವೆ. ಆದ್ದರಿಂದ ನಡುಮನೆ ಅಥವಾ ಪಡಸಾಲೆಯಲ್ಲಿ ಒಂದು ಮಂಟಪ ರಚಿಸಿ, ಅದನ್ನು ಅಲಂಕರಿಸಿ ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರವಿಟ್ಟು, ಅದರ ಮುಂದೆ ಪಠಣ ಮಾಡುವ ವಚನ ಗ್ರಂಥ ಮತ್ತು ವಚನ ಲೇಖನ ಗ್ರಂಥವನ್ನು ಇಡಬೇಕು. ಎಲ್ಲ ವಿಧಿಗಳನ್ನೂ ಪೂಜೆ-ಪಠಣ-ಲೇಖನ ವಚನ ಮಂಟಪದ ಮುಂದೆಯೇ ಮಾಡಬಹುದು ; ಅಲ್ಲಿ ಏಕಾಂತ ಇರುವುದಿಲ್ಲ ಎಂಬುವ ಶಂಕೆ ಇದ್ದರೆ ಇಷ್ಟಲಿಂಗಾರ್ಚನೆ-ಶಿವಯೋಗ ಸಾಧನೆಯನ್ನು ಪೂಜಾಗೃಹದಲ್ಲಿ ಮಾಡಿ ಬಸವ ಗುರುಪೂಜೆ, ವಚನ ಪಠಣ, ವಚನ ಲೇಖನ ಮುಂತಾದುವನ್ನು ವಚನ ಮಂಟಪದ ಮುಂದೆಯೇ ಮಾಡಬೇಕು. ಈ ಪವಿತ್ರ ವಿಧಿ ಪೂರೈಸಿದ ಮೇಲೆ ಶರಣ ವ್ರತಿಯು ಮನೆಯ ಎಲ್ಲರಿಗೆ ಕರುಣೋದಕ-ಕರುಣಪ್ರಸಾದ ವಿತರಿಸಬೇಕು. ಈ ವ್ರತದ ಅವಧಿಯಲ್ಲಿ ಇನ್ನಿತರರನ್ನು ಜಾತಿಮತಭೇದವಿಲ್ಲದೆ ಆಹ್ವಾನಿಸಿ ಅವರೂ ವಚನ ಪಠಣದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಒಮ್ಮೆ, ಇನ್ನಿತರ ಶರಣ ವ್ರತಿಗಳನ್ನು ಆಹ್ವಾನಿಸಿ, ಸಾಮೂಹಿಕ ಪ್ರಾರ್ಥನೆ-ವಚನ ಪಠಣ ಮಾಡಿ, ಪ್ರಸಾದ ದಾಸೋಹ ಮಾಡಬೇಕು. ವ್ರತದ ಅವಧಿಯಲ್ಲಿ ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ಇನ್ನಿತರರನ್ನು ಆಹ್ವಾನಿಸಿ ಪ್ರಸಾದ ದಾಸೋಹ ಮಾಡಿಸಬಹುದು. ವಚನ ಮಂಟಪದ ಬಳಿ ಒಂದು ಕಾಣಿಕೆ ಪೆಟ್ಟಿಗೆ (ಹುಂಡಿ) ಇಟ್ಟಿದ್ದು ಬಂದ ಜನರಿಗೆ ಧನ ಸಹಾಯ ಮಾಡಲು ಪ್ರೇರಣೆ ನೀಡಿ ಸಂಗ್ರಹವಾದ ಹಣವನ್ನು ಶರಣ ಮೇಳದ ದಾಸೋಹಕ್ಕಾಗಿ ತಂದು ಒಪ್ಪಿಸಬಹುದು. ಶರಣ ಮೇಳದಿಂದ ವಾಪಸ್ಸಾದ ಮೇಲೆ ವಚನ ಮಂಟಪವನ್ನು ಬಿಚ್ಚಬೇಕು.

ಮಾಘ ಪೌರ್ಣಿಮೆ ಸಂದರ್ಶನ

ಶರಣ ವ್ರತ ಕೈಗೊಂಡು ಸಹ ತೀರಾ ಅನಿವಾರ್ಯವಾದ ಕಾರಣಕ್ಕೆ ಜನವರಿ ೧೪ರಂದು ಶರಣ ಮೇಳದಲ್ಲಿ ಭಾಗಿಗಳಾಗಲು ಆಗದೆ ಇದ್ದರೆ ಮಾಘ ಪೌರ್ಣಿಮೆಯಂದು (ಚನ್ನ ಹುಣ್ಣಿಮೆ) ಕೂಡಲ ಸಂಗಮಕ್ಕೆ ಬಂದು ಗಣಲಿಂಗ ದರ್ಶನ ಪಡೆದು ವ್ರತವನ್ನು ಪೂರ್ಣಗೊಳಿಸಬಹುದು.

ಕಾಯಕ - ದಾಸೋಹ - ಪ್ರಸಾದ

ಶರಣರು ಬೋಧಿಸಲ್ಪಟ್ಟ ಪಂಚಾಚಾರಗಳಲ್ಲಿ ಒಂದಾದ ಸದಾಚಾರ ಅಥವಾ ಅರ್ಪಣಾ ತತ್ತ್ವದ ಮೂರು ಅಂಗಗಳು ಕಾಯಕ - ದಾಸೋಹ - ಪ್ರಸಾದ. ಇವು ಮೂರನ್ನೂ ಶರಣ ವ್ರತಿಗಳು ಶುದ್ಧವಾಗಿ ಪಾಲಿಸುತ್ತ ತಮ್ಮ ಆರ್ಥಿಕ ಸ್ಥಿತಿಯು ಅನುಮೋದಿಸುವಷ್ಟು ಧನ ದಾಸೋಹವನ್ನು ಮಾಡಬಹುದು. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳಕ್ಕೆ ತಮ್ಮ ಸ್ವಂತ ಕಾಣಿಕೆಯನ್ನು ಮಾತ್ರವಲ್ಲದೆ, ಶರಣ ಮೇಳದ ಮಹತ್ವ ತಿಳಿಸಿ ಇನ್ನಿತರರಿಂದಲೂ ಕಾಣಿಕೆ ಸಂಗ್ರಹಿಸಿ ಕೊಡುವ ಪವಿತ್ರ ಕಾರ್ಯವನ್ನು ಶರಣ ವ್ರತಿಗಳು ಕೈಗೊಳ್ಳಬೇಕೆಂದು ನಿರೀಕ್ಷಿಸುವೆವು. ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು 2003 ಇಸವಿಯ ಶರಣ ಮೇಳದಲ್ಲಿ ಭಾಗಿಗಳಾಗಬೇಕೆಂದು ಆಶಿಸುತ್ತೇವೆ.

-ಬಸವಾತ್ಮಜೆ

ವಚನ ಲೇಖನ ವ್ರತ

ವಚನ ಸಾಹಿತ್ಯವು ಕೇವಲ ಸಾಹಿತ್ಯ ಮಾತ್ರವಲ್ಲ, ಒಂದು ಧರ್ಮ ಶಾಸ್ತ್ರ. ಮಾನವ ಕುಲಕ್ಕೆ ಬೇಕಾದ ಅಮೂಲ್ಯ ವಿಚಾರಗಳನ್ನು ಪ್ರತಿಪಾದಿಸುವುದಲ್ಲದೆ ಲಿಂಗಾಯತ ಧರ್ಮಾನುಯಾಯಿಗಳಿಗೆ ಧಾರ್ಮಿಕ ಕೈಪಿಡಿ, ಇಂಥ ವಚನ ಸಾಹಿತ್ಯದ ಅಧ್ಯಯನ, ಲೇಖನ, ಪಠಣ, ಚಿಂತನ, ಪ್ರಸರಣ ಮತ್ತು ಅನುಷ್ಠಾನ ಅಳವಡಿಸಿಕೊಳ್ಳುವುದು ಉತ್ತಮ ಅಭ್ಯಾಸ.

ಧಾರ್ಮಿಕ ವಿಧಿಗಳನ್ನು ಕೇವಲ ಯಾಂತ್ರಿಕವಾಗಿ ಮಾಡಿದರೆ ಸಾಲದು ಅಥವಾ ಭಾಕ್ತಿಕ ಉತ್ಕಟತೆಯಿಂದ ಮಾಡಿದರೆ ಸಾಲದು, ಧಾರ್ಮಿಕ ವಿಧಿಯ ಜೊತೆಗೆ ಸುಜ್ಞಾನ ಸಂಪಾದನೆಯೂ ಆಗಬೇಕು. ಈ ಹಿನ್ನೆಲೆಯಲ್ಲಿ ವಚನಗಳ ಬರಹವನ್ನು ಮಾಡಲು ಪ್ರಸ್ತುತ ಸೂಚನೆ ನೀಡಲಾಗುತ್ತಿದೆ.

ಫುಲ್‌ಸ್ಕೇಪ್ ಸೈಜಿನ ಲೆಡ್ಜರ್ ಪುಸ್ತಕ ತೆಗೆದುಕೊಳ್ಳಬೇಕು. ಅದು ಅಡ್ಡಗೆರೆ ಉಳ್ಳದ್ದಾದರೂ ಇರಬಹುದು, ಪೂರ್ಣ ಬಿಳಿಯದೂ ಇರಬಹುದು. ಅಥವಾ ವಚನಗಳ ಸಂಖ್ಯೆ ನಿಗದಿತವಾಗಿ ಇಲ್ಲದಿರುವುದರಿಂದ ಬಿಡಿಬಿಡಿ ಹಾಳೆಗಳನ್ನೂ ತೆಗೆದುಕೊಳ್ಳಬಹುದು. ಮೊದಲ ಪುಟದಲ್ಲಿ ಮೇಲೆ ಓಂ ಶ್ರೀ ಗುರುಬಸವಲಿಂಗಾಯ ನಮಃ ಬರೆದು, ಅದರ ಕೆಳಗೆ 866666 ಬರೆಯಬೇಕು. ಅದರ ಕೆಳಗೆ ಷಟ್ಕೋನ ಸಹಿತ 'ಬಸವ-ಲಿಂಗ' ಮುದ್ರೆಯನ್ನು ಬರೆಯಬೇಕು. ಅದರ ಕೆಳಗೆ ಬರೆಯುವವರ ಹೆಸರು, ಪೂರ್ಣ ವಿಳಾಸ, ಬರೆಯಲು ಆರಂಭಿಸಿದ ದಿನಾಂಕ ಇವನ್ನು ಬರೆಯಬೇಕು. ಶರಣ ಮೇಳಕ್ಕೆ ಹೊರಡುವ ದಿನಾಂಕದವರೆಗೂ ವಚನಗಳನ್ನು ಬರೆಯಬಹುದು. ಬಿಡಿಬಿಡಿ ಹಾಳೆಗಳಲ್ಲಿ ಬರೆದವರು, ಎಲ್ಲಾ ಸೇರಿಸಿ, ಒಟ್ಟಾಗಿ ಬೈಂಡ್ ಮಾಡಿಸಿ ತರಬಹುದು. ಇಲ್ಲವೇ ಎಲ್ಲಾ ಹಾಳೆಗಳನ್ನು ಸೇರಿಸಿ, ದಾರದಲ್ಲಿ ಹೊಲೆಯಬಹುದು.

ವಚನಗಳನ್ನು ಪ್ರತಿನಿತ್ಯ ಎಷ್ಟು ಸಾಧ್ಯವೋ ಅಷ್ಟನ್ನು ಅಂದವಾಗಿ, ಸ್ಪಷ್ಟವಾಗಿ (ಅಥವಾ ತಮಗೆ ಬರುವಂತೆ) ಬರೆದು ಇಡಬೇಕು. ಬರೆಯುವಾಗ ಸಂಖ್ಯೆಗೆ ಗಮನ ಕೊಡದೆ ಅರ್ಥವನ್ನು ಮನನ ಮಾಡುತ್ತ ಬರೆಯಬೇಕು.

ಹೀಗೆ ಬರೆದ ಒಟ್ಟು ವಚನಗಳು ಎಷ್ಟು ಎಂಬುದನ್ನು ಬರೆದು ಮುಗಿಸಿದ ದಿವಸ ಮೇಲಿನ ಹಾಳೆಯಲ್ಲಿ ಬರೆದು ಇಡಬೇಕು. ಇಂಥ ಬರಹವನ್ನು ಶರಣ ಮೇಳಕ್ಕೆ ಬರುವಾಗ ತಂದು ಗಣಲಿಂಗ ಮಂಟಪದ ಪಕ್ಕದಲ್ಲಿರುವ ವಚನ ಮಂಟಪದಲ್ಲಿ ಒಪ್ಪಿಸಿ, ಒಂದು ಪ್ರಮಾಣ ಪತ್ರ (certificate) ಪಡೆಯಬೇಕು. ಪ್ರತಿ ಶರಣ ಮೇಳಕ್ಕೆ ಹೀಗೆ ಒಂದು ವಚನ ಬರಹವನ್ನು ತಂದುಕೊಡಬೇಕು. ಶರಣ ಮೇಳ ಮುಗಿಸಿ ಹೋದ ಮೇಲೆ ಮುಂದಿನ ವರ್ಷದ ಬರಹ ಆರಂಭಿಸಬೇಕು. ಈಗ ಈ ಕಲ್ಯಾಣ ಕಿರಣ ಸಂಚಿಕೆ

ತಲ್ಪಿದ ಮೇಲೆ ವಚನ ಲೇಖನ ವ್ರತವನ್ನು ಆರಂಭಿಸಬಹುದು.

ವಿಶೇಷ ಸೂಚನೆ :

೧. ಸಮಯವು ಸಿಕ್ಕಾಗಲೆಲ್ಲ ಬರೆಯುತ್ತ ಹೋಗಬಹುದು.

೨. ವಚನ ಲೇಖನ ಗ್ರಂಥ ತಂದುಕೊಟ್ಟವರಿಗೆಲ್ಲ ಪ್ರಮಾಣಪತ್ರವನ್ನು ನೀಡಲಾಗುವುದು.

೩. ಕನ್ನಡ, ಹಿಂದಿ, ಮರಾಠಿ, ತಮಿಳು, ತೆಲುಗು, ಇಂಗ್ಲೀಷ್ ಯಾವುದೇ ಭಾಷೆಗಳಲ್ಲಿ ಬರೆಯಬಹುದು.

ಆಧಾರ ಗ್ರಂಥಗಳು :

೧. ೧೨ನೆಯ ಶತಮಾನದ ಆದಿ ಶರಣರ ವಚನಗಳನ್ನು ಬರೆಯಬೇಕು. ನಂತರ ಆಗಿ ಹೋಗಿರುವ ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಶ್ರೀ ಷಣ್ಮುಖ ಶಿವಯೋಗಿಗಳ ವಚನಗಳಿಗೂ ಆದ್ಯತೆಯುಂಟು.

೨. ಬಸವ ವಚನ ದೀಪ್ತಿ, ಕರ್ನಾಟಕ ಸರ್ಕಾರದ 15 ಸಂಪುಟಗಳ ಗ್ರಂಥಗಳು, ಎಲ್|| ಭೂಸನೂರುಮಠರು ಸಂಪಾದಿಸಿದ ''ವಚನ ಸಾಹಿತ್ಯ ಸಂಗ್ರಹ'' ಬಳಸಿಕೊಳ್ಳಬಹುದು.

೩. ಶರಣ ವ್ರತ ಸ್ವೀಕಾರ ಮಾಡಿಯೂ ಬರೆಯಬಹುದು ಅಥವಾ ಹಾಗೆಯೂ ಬರೆಯಬಹುದು.

೪. ವಚನ ಲೇಖನಕ್ಕೆ ವಯಸ್ಸು ಮತ್ತು ಶಿಕ್ಷಣಾರ್ಹತೆಯ ಮಿತಿ ಇಲ್ಲ. ಬರೆಯಲು ಸಮರ್ಥರಿರುವ ಮಕ್ಕಳಿಂದ ಮುದುಕರವರೆಗೆ ಎಲ್ಲ ವಯಸ್ಸಿನವರು ಬರೆಯಬಹುದು.

೫. ಜನವರಿ 11ರಂದು ವಚನ ಮಂಟಪದಲ್ಲಿ ವಚನ ಲೇಖನ ಗ್ರಂಥವನ್ನು ಅರ್ಪಿಸುವಾಗ ಅಲ್ಲಿ ಒಂದು ಅರ್ಜಿ ಪತ್ರವು ಲಭ್ಯವಿರುತ್ತದೆ. 11 ರೂ (ಹನ್ನೊಂದು) ಕೊಟ್ಟು ಅದನ್ನು ಪಡೆದು, ಗ್ರಂಥದೊಡನೆ ಅರ್ಜಿಪತ್ರವನ್ನು ವಿವರಗಳೊಡನೆ ಸಲ್ಲಿಸಬೇಕು. ಮುಟ್ಟಿದ್ದಕ್ಕೆ ಪ್ರಮಾಣ ಪತ್ರ ಕೊಡಲಾಗುವುದು.

೬. ಆಶೀರ್ವಾದಪೂರ್ವಕವಾಗಿ ಆ ವಚನ ಲೇಖನ ಪುಸ್ತಕವನ್ನು ವಾಪಸ್ಸು ಪಡೆಯಬೇಕು ಎನ್ನುವವರಿಗೆ ಬಸವ ಧರ್ಮ ಪೀಠದ ಮುದ್ರೆ ಒತ್ತಿ ವಾಪಸ್ಸು ನೀಡಲಾಗುವುದು.

ವಚನ ಲೇಖನ ವ್ರತವು ಅತ್ಯಂತ ಪವಿತ್ರವಾದುದು. ಇದು ಭಕ್ತಿಪ್ರೇರಕ, ಜ್ಞಾನ ಸಂಪಾದನ ಸಾಧನ ಮಾತ್ರವಲ್ಲ ಸಮಯವನ್ನು ಸಾರ್ಥಕಪಡಿಸಿಕೊಳ್ಳಲು ಉತ್ತಮ ಸಾಧನ. ಬರವಣಿಗೆಯೇ ಮಹಾನ್ ತಪಸ್ಸಾಗುವುದು ಎಂಬುದನ್ನು ಶರಣ ಬಂಧುಗಳು ಲಕ್ಷ್ಯದಲ್ಲಿಡಬೇಕು. ಅರ್ಧವಾರ್ಷಿಕ ಪರೀಕ್ಷೆಗಳು ಮುಗಿದಿದ್ದು, ವಾರ್ಷಿಕ ಪರೀಕ್ಷೆಗಳಿಗೆ ತೀವ್ರ ಅಭ್ಯಾಸವು ಜನವರಿಯ ನಂತರ ಪ್ರಾರಂಭವಾಗುವುದು. ಆದ್ದರಿಂದ ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ವಚನ ಲೇಖನ ಮಾಡಲು ವಿದ್ಯಾರ್ಥಿಗಳು ಸಹ ಹೆಚ್ಚಿನ ಆಸಕ್ತಿ ವಹಿಸಬೇಕು.

ಜನವರಿ 11ರಂದು ಶರಣ ಮೇಳಕ್ಕೆ ಬರುತ್ತಿದ್ದಂತೆಯೇ ವಚನ ಲೇಖನ ಗ್ರಂಥವನ್ನು ಅರ್ಪಿಸಿದರೆ, ಪ್ರಮಾಣಪತ್ರ ನೀಡಲು ಅನುಕೂಲವಾಗುತ್ತದೆ ಎಂಬುದನ್ನು ಶರಣ ಬಂಧುಗಳ ಗಮನಕ್ಕೆ ತಂದು, ಈ ಬಾರಿ ಹೆಚ್ಚಿನ ಜನರು ವಚನ ಲೇಖನ ಗ್ರಂಥಗಳನ್ನು ತರುತ್ತಾರೆಂದು ನಿರೀಕ್ಷಿಸುತ್ತೇವೆ. ಶುಭ ಹಾರೈಕೆಗಳೊಡನೆ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಚನ ಲೇಖನ ವ್ರತಕ್ಕಾಗಿ ವಿಶೇಷ ಪುಸ್ತಕ

ವಚನ ಲೇಖನಕ್ಕಾಗಿ ಫುಲ್‌ಸ್ಕೇಪ್ ಆಕಾರದಲ್ಲಿ ಒಂದು ಪುಸ್ತಕ ಸಿದ್ಧಪಡಿಸಲಾಗಿದ್ದು, 50 ರೂ. ಬೆಲೆಯ ಪುಸ್ತಕವನ್ನು ರಿಯಾಯಿತಿ ದರದಲ್ಲಿ 25 ರೂಗೆ ಒಂದರಂತೆ ಕೊಡಲಾಗುವುದು. ಶರಣ ಮೇಳಕ್ಕೆ ಬಂದಾಗ ಒಯ್ದು ವರ್ಷವಿಡೀ ವಚನ ಲೇಖನ ಮಾಡಬಹುದು.

The Key To A Happy Life

By JAGADGURU MATHE MAHADEVI

Part VII - India weekly-USA on August 10th, 2003

So far we have dealt with the meaning of happiness at various levels.An important question that arises is ; to achieve happiness or the ultimate ' Bliss ' do we have to renounce family, business, profession, and other materialistic pleasures and go to a lonely place ? Lord Basavanna says;

Let me be a little parrot
on the mountain of mankind.
But teach me to chant "God, God"
enclose me in the cage of devotion, O Lord.

The human society itself is an immense forest. There is no security for this parrot(self), so it has to create a cocoon of devotion in this materialistic jungle to surrender to God. Lord Basavanna was married, he was the prime minister at King Bijjala's court, yet he led a spiritual life, setting an example to all seekers of Truth. So, it is possible to live in this materialistic jungle, yet pursue the spiritual path.

According to Lord Basavanna, our day-to-day activities should include worship, work and service and participation in holy congregations.After a restful night's sleep early morning is a precious time for worship and prayer. We wake up with a clear mind and worshipping God in that state brings serenity and calmness to the mind, which helps in carrying on through the day.

The second and major part of the day should be reserved for work and service.Man earns his livelihood through work,so he should discharge his duties sincerely.Lord Basavanna gave a special code of conduct to work, calling it " Kayaka", which can be defined as work done honestly and sincerely. For, he said there is dignity as well as divinity in labor. With work also comes service

what Lord Basavanna called " Dasoha". It means serving the society. By serving the society one can serve God in a real sense. Dasoha or service to society is not imposed on man, but should blossom from within.

After work, evening times should be reserved for holy congregations, at which time, seekers of Truth can do self- study, have discussions on spiritual subjects or listen to learned people. By devoting time for prayer,work, and spiritual development people can enrich their lives. In a country like America, where people are pressed for time, forced to travel long distances daily, they can allot a few minutes for worshipping. People can listen to devotional songs or listen to lectures on spiritualism while driving. Evening times and weekends can be devoted to meditation, Studying, conducting family prayers, organizing mass prayers, participation in religious congregations etc.

Parents have certain responsibilities to fulfill. They have to introduce their children to the religious and moral values and the rich cultural heritage of India. The sublime religious and cultural heritage of India teaches its people to be loyal to the country they live in, though India is Dharma Bhoomi-holy religious land to all who originated in India. Parents should teach their children the lives and messages of great saints of India and also the techniques of worship, yoga, pranayam, prayer and meditation. In this world where superstitions abound, it is the duty of every parent to introduce the concepts of yoga, meditation, philosophical systems, mystical experience of saints, hospitality towards guests and family structure.They should work towards strengthening bonds between family members, including grandparents, respecting elders and caring for the aged and the young. It is sad that the cultural and moral values imbibed by Indians, which contributes towards a peaceful society, is now fading.

Children should also be tought to develop a sense of gratitude towards their parents and other elders. Wherever they are, whatever they do, they cannot deny their Indian origin. Rather than being ashamed of their origin, they need to understand the depth of it and accept it as part of themselves, their parents, and their ancestors.As it is this tradition that has made them,just being born abroad or being able to speak differently doesn't mean that they should forget their roots. They need to feel proud that they come from the land traverseed by yogis and saints.

In Indian religious life great importance is given to Satsang-companionship of pious- minded ones. Lord Basavanna says :

Clay is primary to a potter;
Gold is primary to a jeweler;
Guru is primary to tread in the divine path;
Fellowship of sharanas is primary in realizing Lord Lingadeva

As clay is essential to make a pot or gold to make an ornament, a guru is the person to show you the divine path.Likewise, to learn and experience God, company of spiritual and religious people is most essential.Man is a social animal; he likes to move with his friends and relatives. He should also make time to attend satsangs, attend lectures, meditation classes, involve in study of spiritual books, or chant sacred syllables. As it is not possible to have satsangs daily in America, they can devote a few set minutes every night with their family members and neighbours dedicated to spiritual discussions or prayers.They must participate in holy congregations on a weekly basis because it acts as an overhauling service to this vehicle of human mind.

One needs to include regular worship in daily routin, work and serve with sincerity, eat honestly earned bread, and seek holy congregation. Lord Basavanna teaches this, the trinity of Archana, Arpana and Anubhava, as the key to a happy and balanced life.

ಮಕ್ಕಳ ಮತ

- ಮಾತೆ ಕಸ್ತೂರಿದೇವಿ

ಆನೆಯ ಕಾವವನ, ಆಡ ಕಾವವನ ಅಂತರವನರಿ ಕಂಡಾ!
ಕೋಡಗನ ಪರಿಯಲಿ ಕುಳ್ಳಿರಲು ನೀ ಕಲಿ ಕಂಡಾ
ಮರುಳಿನ ಮನದ ಪರಿಯನರಿ ಕಂಡಾ
ಕಪಿಲಸಿದ್ಧಮಲ್ಲಿನಾಥಯ್ಯ ಕತ್ತಲೆಯೆಂಬುದ ಕಳೆ ಕಂಡಾ
ಮಕ್ಕಳ ಮತವನರಿ ಕಂಡಾ ||154||

- ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು

ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು ಮೇಲಿನ ತಮ್ಮ ವಚನದಲ್ಲಿ ನಮಗೊಂದು ಅತ್ಯುತ್ತಮವಾದ ಪಾಠವೊಂದನ್ನು ಕಲಿಸುತ್ತಿದ್ದಾರೆ; ಆ ಪಾಠ ಯಾವುದಿರಬಹುದು?! ಈ ವಚನದ ಕೊನೆ ಸಾಲಿನಲ್ಲಿ ಮಕ್ಕಳ ಮತವನರಿ ಕಂಡಾ ಎಂದು ಹೇಳುತ್ತಿದ್ದಾರೆ. ಅಂದರೆ ಇಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕವಾದೊಂದು ಮತ ಅಂದರೆ ವಿಚಾರ, ಚಿಂತನೆ, ತತ್ತ್ವಸಿದ್ಧಾಂತ, ಅಭಿಪ್ರಾಯಗಳಿವೆಯೇ? ಎಂದು ಕೇಳಿದರೆ ''ಇವೆ'' ಎನ್ನುತ್ತಾರೆ ಶ್ರೀ ಸಿದ್ಧರಾಮೇಶ್ವರರು. ಇಲ್ಲಿ ಪುಟ್ಟ ಮಕ್ಕಳಿಗಿರುವ ಕಪಟವರಿಯದ ನಿಶ್ಚಲ, ನಿರ್ಮಲ ಮನಸ್ಸಿನಿಂದ ಹೊರಹೊಮ್ಮಿದ ವಚನಗಳನ್ನು (ಮಾತುಗಳನ್ನು) ಅಷ್ಟೇ ಪ್ರಮಾಣದ ನಿಶ್ಚಲ ನಿರ್ಮಲ ಮನಸ್ಸಿನಿಂದ ನಾವು ಕಲಿತು, ಅರಿತು, ಆಚರಿಸಬೇಕೆಂದು ಬೋಧಿಸುತ್ತಿದ್ದಾರೆ. ಪೂರ್ವಾಗ್ರಹ ಪೀಡಿತ ಮನೋಭಾವದ ಹಿರಿಯರಿಗಿಂತಲೂ ಸ್ವಚ್ಛ ಮನಸ್ಸಿನ ಮುದ್ದುಮಕ್ಕಳಿಗೆ ಪಾಠ ಕಲಿಸುವುದು ಬಹು ಸುಲಭ ಎಂದು ಶರಣರು ಭಾವಿಸಿದಂತಿದೆ! ಆದ್ದರಿಂದಲೇ ಇಂಥ ಮಕ್ಕಳ ಮತವನ್ನು ಧರ್ಮಪಿತ ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೀಗೆ ಪುಷ್ಟೀಕರಿಸುತ್ತಾರೆ.

ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಲಿಂಗದೇವಾ -ಬ.ವ.ದೀ 638

ವಚನಗಳನ್ನು ಅರ್ಥೈಸುವಾಗ ನಮಗೆ ಮೊಲೆಯುಂಬ ಭಾವ (ಶಿಶುಭಾವ) ಇದ್ದರೆ ಮಾತ್ರ ಆ ವಚನಗಳು as it is (ಯಥಾಪ್ರಕಾರ) ಅರ್ಥವಾದಾವು! ಅದರ ಬದಲಿಗೆ ಶಿಶುಭಾವ ತಪ್ಪಿ ಬುದ್ಧಿ, ಅಥವ ಪಾಂಡಿತ್ಯ ಬಲದಿಂದ, ಅವಿವೇಕ ಮತ್ತು ಸ್ವಾರ್ಥಿಗಳಾಗಿ ವಚನಗಳನ್ನು ತಪ್ಪಾಗಿ ಅರ್ಥೈಸಿ ಅಳವಡಿಸಿಕೊಂಡಿದ್ದೇ ಆದರೆ ಅಂಥವರಿಗೆ ಲಿಂಗದೇವನು ಮುಂದೆ ತಕ್ಕ ಶಾಸ್ತಿ ಮಾಡುತ್ತಾನೆ! ಶಿಕ್ಷೆ ಕೊಡುತ್ತಾನೆ! ಎನ್ನುತ್ತಾರೆ ಅಪ್ಪನವರು. ಆದ್ದರಿಂದ ನಮಗೆ ಬದುಕಿನಲ್ಲಿ ಪರಿಪೂರ್ಣರಾಗಬೇಕೆಂಬ ಹಂಬಲವಿದ್ದರೆ ಪೂರ್ವಾಗ್ರಹವನ್ನು ತೊರೆದು, ವಚನಗಳಲ್ಲಿ ಹುಸಿಯನ್ನು ನುಸುಳಿಸುವುದನ್ನು ಬಿಟ್ಟು, ಶುದ್ಧಮನಸ್ಸಿನಿಂದ; ಬೌದ್ಧಿಕ ಪ್ರಾಮಾಣಿಕತೆಯಿಂದ ವಚನಾಧ್ಯಯನ ಮಾಡುವುದನ್ನು ಕಲಿಯಬೇಕು. ಹೌದು! ಆದರೆ ಇಂಥ ಅಮೂಲ್ಯವಾದ ಕಲೆಯನ್ನು ನಮಗೆ ಯಾರು ಕಲಿಸುತ್ತಾರೆ?! ಅದನ್ನು ಸರ್ವಜ್ಞ ಕವಿ ಅತ್ಯಂತ ಮಾರ್ಮಿಕವಾಗಿ ಹೀಗೆ ಹೇಳುತ್ತಾನೆ

ಮೊಲೆವಾಲು ಉಂಬುದನು ಹಸುಗೂಸು ಬಲ್ಲುದೆ ?

ಮೊಲೆಗೂಸಿನಂತಿಪ್ಪ ಶಿಷ್ಯಂಗೆ । ಗುರು ಬೋಧೆ
ಮೊಲೆವಾಲು ಕಾಣಾ ಸರ್ವಜ್ಞ ॥

ಎಂದು. ನಿಜ! ಕೂಸು ಜನಿಸಿದಾಗ ಅದಕ್ಕೆ ಹಸಿವಾಗಿದ್ದರೂ ತಾಯಿಹಾಲು ಕುಡಿದು ಹಸಿವನ್ನು ಹಿಂಗಿಸಿಕೊಳ್ಳಬೇಕೆಂದು ಗೊತ್ತಾಗುವುದಿಲ್ಲ. ಸುಮ್ಮನೇ ಅಳುತ್ತಿರುತ್ತದೆ. ಆಗ ತಾಯಿ ಏನು ಮಾಡುತ್ತಾಳೆ ? ಅತ್ಯಂತ ಪ್ರೀತಿ, ಮಮತೆ, ವಾತ್ಸಲ್ಯ, ಎಚ್ಚರಿಕೆಗಳಿಂದ ಕೂಸಿನ ಬಾಯಿಗೆ ಮೊಲೆ ಕೊಟ್ಟು ಹಾಲು ಚೀಪುವುದನ್ನು ಕಲಿಸುತ್ತಾಳೆ. ಮುಂದೆ ಅದು ತಾಯಿಯ ಹಾಲು ಕುಡಿಯುವುದರಲ್ಲಿ ಜಗತ್ತನ್ನೇ ಮರೆತು, ಅದರಲ್ಲೆ ಸುಖ ಕಾಣುತ್ತದೆ. ಆದರೆ ಈಗಿನ ನವ್ಯತಾಯಂದಿರಿಗೆ ಮತ್ತು ಮಕ್ಕಳಿಗೆ ಇಂಥ ಸುಖ ಸಿಗುತ್ತಿಲ್ಲ. ಏಕೆಂದರೆ ಸ್ತನ್ಯಪಾನ ಮಾಡಿಸಿದರೆ ನಶ್ವರವಾದ ದೇಹ ಸೌಂದರ್ಯ ಬೇಗ ಹಾಳಾಗುತ್ತದೆ ಎಂಬ ತಪ್ಪು ಕಲ್ಪನೆ ಮತ್ತು ಭೀತಿಗೆ ಒಳಗಾಗಿ ಎದೆಹಾಲು ಉಣಿಸುವುದನ್ನು ಬಿಟ್ಟು ಬಾಟಲುಹಾಲಿಗೆ ಮೊರೆಹೋಗಿದ್ದಾರೆ. ಇಂಥವರನ್ನು ಕಂಡೆ ಮಕ್ಕಳ ಆರೋಗ್ಯ ಸಂಸ್ಥೆಗಳು ಹೇಳುತ್ತವೆ. ''ತಾಯಿ ಹಾಲಿನಲ್ಲಿ ರೋಗ ನಿರೋಧಕ ಶಕ್ತಿ ಇದೆ. ಇದರಿಂದ ತಾಯಿ ಮಕ್ಕಳು ಹೆಚ್ಚು ಆರೋಗ್ಯದಿಂದಿರಲು ಸಹಾಯಕವಾಗಿದೆ. ಆದ್ದರಿಂದ ಸ್ತನ್ಯ ಪಾನ ಮಾಡಿಸಿರಿ'' ಎಂದು ಒತ್ತಿ ಒತ್ತಿ ಪ್ರಚಾರ ಮಾಡುತ್ತಿವೆ. ಅಬ್ಬಾ! ಕೃತಕ ಬದುಕಿಗೆ ಮರುಳಾಗಿರುವ ಮಾನವರಿಗೆ ಸಹಜವಾಗಿ ಬದುಕುವುದನ್ನು ಹೆಜ್ಜೆ ಹೆಜ್ಜೆಗೂ ಕಲಿಸಬೇಕಾಗಿರುವುದೊಂದು ದೊಡ್ಡ ವಿಪರ್ಯಾಸ!!

ಏನೂ ಅರಿಯದ ಮುಗ್ಧ ಕೂಸು ಹೇಗೆ ತಾಯಿಯ ಮೇಲೆ ನಂಬಿಕೆಯಿರಿಸಿ ಮೊಲೆ ಹಾಲು ಕುಡಿದು ದಷ್ಟಪುಷ್ಟವಾಗಿ ಬಿದಿಗೆ ಚಂದಿರನಂತೆ ಬೆಳೆಯುತ್ತದೋ ಹಾಗೆಯೇ ಮೊಲೆಗೂಸಿನಂತಿರುವ ಮುಮುಕ್ಷುಭಾವದ ಶಿಷ್ಯನು ತಾಯಿಯಂತಿರುವ ಗುರುವಿನ ಮೇಲೆ ನಂಬಿಕೆಯಿರಿಸಿ ಎದೆಹಾಲಿನಷ್ಟೇ ಶಕ್ತಿಶಾಲಿಯಾದ ಗುರುಬೋಧಾಮೃತವನ್ನು ಕುಡಿದು ಬದುಕಬೇಕೆಂದು ಇಲ್ಲಿ ಸರ್ವಜ್ಞ ಎಷ್ಟು ಚೆನ್ನಾಗಿ ಹೇಳಿದ್ದಾನೆ.

ಇನ್ನು ಮುಂದೆ ಈ ವಚನದಲ್ಲಿ ಯಾವ ಪಾಠ ಅಡಗಿದೆ ಎಂಬುದನ್ನು ನೋಡೋಣ. ಆನೆಯನ್ನು ಕಾಯುತ್ತಿರುವ ಮಾವುತನಿಗೂ, ಆಡುಗಳನ್ನು ಕಾಯುತ್ತಿರುವ ಕುರುಬರಿಗೂ ಇರುವ ವ್ಯತ್ಯಾಸವನ್ನು-ಅಂತರವನ್ನು ಕಂಡುಕೊಳ್ಳಿರಿ ಎನ್ನುತ್ತಿದ್ದಾರೆ ಸಿದ್ಧರಾಮೇಶ್ವರರು. ಆನೆ ಬೃಹದಾಕಾರದ ಅತ್ಯಂತ ಶಕ್ತಿಶಾಲಿಯಾದ (ಸಸ್ಯಾಹಾರಿ) ಪ್ರಾಣಿ. ಇಂಥ ಪ್ರಾಣಿಯನ್ನು ಮಣಿಸಿ ತನ್ನ ವಶವರ್ತಿಯಂತೆ ಮಾಡಿಕೊಳ್ಳುವುದು ಅಷ್ಟೇನೂ ಸುಲಭದ ಮಾತಲ್ಲ. ಆದರೂ ಹಿಂಜರಿಯದೆ ತನಗಿಂತಲೂ, ನೂರುಪಟ್ಟು ದೊಡ್ಡದಾದ ಈ ಪ್ರಾಣಿಯನ್ನು ಬುದ್ಧಿಬಲದಿಂದ ಚಿಕ್ಕದು ಮಾಡಿಕೊಂಡು ಮಾನವ ಸಾಕುತ್ತಾನೆ! ಇದು ಅವನಿಗೆ ಹೇಗೆ ಸಾಧ್ಯವಾಯಿತು? ಅದನ್ನು ಧರ್ಮಪಿತರು ಹೇಳುತ್ತಾರೆ:

ಆನೆ ಅಂಕುಶಕ್ಕಂಜುವುದೇ ಅಯ್ಯಾ?
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ! -ಬ.ವ.ದೀ 733

ಇಲ್ಲಿ ಆನೆಯಷ್ಟೇ ಸಿಂಹವೂ ಶಕ್ತಿಶಾಲಿಯಾದ (ಮಾಂಸಾಹಾರಿ) ಪ್ರಾಣಿ. ಅದಕ್ಕೆ ಆನೆ ಸಿಂಹಕ್ಕೆ ಹೆದರುತ್ತದೆ. ಏಕೆಂದರೆ ಆನೆಯ ದುರ್ಬಲತೆ ಎಲ್ಲಿ ಅಡಗಿದೆ ಎಂಬ ಸತ್ಯ ಸಿಂಹಕ್ಕೆ ಗೊತ್ತಿದೆ. ಆದ್ದರಿಂದಲೇ ಸಿಂಹದ ಮರಿ ಎಷ್ಟೇ ಚಿಕ್ಕದಾಗಿದ್ದರೂ ಹೆದರದೆ, ಆನೆಯ ಅತ್ಯಂತ ದುರ್ಬಲವಾದ,

ಸೂಕ್ಷ್ಮವಾದ, ಅಪಾಯಕಾರಿಯಾದ, ಮುಖ್ಯವಾದ ಅಂಗ ಗಂಡಸ್ಥಲಕ್ಕೆ ನೇರವಾಗಿ ಹಾರಿ ತನ್ನ ಚೂಪಾದ ಉಗುರಿನಿಂದ ಪ್ರಾಣಾಘಾತ ಮಾಡುತ್ತದೆ. ಈ ಕಾರಣಕ್ಕಾಗಿಯೇ ಸಿಂಹಸ್ವಪ್ನ ಎಂದು ಕರೆಯುವುದು. ಆನೆ ಚಿಕ್ಕ ಕೋಲಿನಂತಿರುವ ಬರಿ ಅಂಕುಶಕ್ಕೆ ಹೆದರುವುದಿಲ್ಲ. ಅದರ ತುದಿಗೆ ಸಿಕ್ಕಿಸಿರುವ ಸಿಂಹದ ಉಗುರಿಗೆ ಹೆದರಿಕೊಂಡು ಮಾವುತ ಹೇಳಿದಂತೆ ಕೇಳುತ್ತದೆ. ಈ ಗುಟ್ಟನ್ನು ಅರಿತ ಮಾನವ ಅಂಕುಶದ ಸಹಾಯದಿಂದ ಆನೆಯನ್ನು ನಿಯಂತ್ರಿಸುತ್ತಾನೆ.

ಇದುವರೆಗೂ ನಾವು ಮಾವುತನ ಗುಟ್ಟನ್ನು ಅರಿತುದಾಯಿತು. ಈಗ ಆಡು-ಕುರಿ ಕಾಯುವ ಕುರುಬರ ಸಾಮರ್ಥ್ಯವನ್ನು ನೋಡೋಣ. ಸಾಮಾನ್ಯವಾಗಿ ಆಡು ಕುರಿ ಸಾಕುವವರು ಒಂದೆರಡು ಸಾಕುವುದಿಲ್ಲ. ಹಿಂಡು ಹಿಂಡಾಗಿ ಮೇಯಿಸುತ್ತಾರೆ. ಇವರಿಗೆ ಮಾವುತನಷ್ಟು ಪರಿಣತಿಯಾಗಲಿ, ಬುದ್ಧಿಯಾಗಲಿ, ಎಚ್ಚರಿಕೆಯಾಗಲಿ ಬೇಕಾಗುವುದಿಲ್ಲ. ಏಕೆಂದರೆ ಆಡುಗಳು ಆನೆಯಷ್ಟು ಶಕ್ತಿಶಾಲಿ ಮತ್ತು ತಂಟೆ ತಕರಾರು ಮಾಡುವ ಪ್ರಾಣಿಗಳಲ್ಲ. ಇಂಥ ಅಮಾಯಕ, ಮುಗ್ಧ, ಅಂಧಾನುಕರಣೆಯ ಪ್ರಾಣಿಗಳನ್ನು ಸಾಕುವುದು, ಕಾಯುವುದು ಬಹು ಸುಲಭ. ಆದ್ದರಿಂದಲೇ ಕುರುಬರು, ವಿಶಾಲವಾದ ಹುಲ್ಲುಗಾವಲಿನಲ್ಲಿ ಕುರಿ ಮೇಕೆಗಳನ್ನು ಮೇಯಲು ಬಿಟ್ಟು ಮರಗಳ ತಂಪಾದ ನೆರಳಿನಲ್ಲಿ ಹಾಯಾಗಿ ಮಲಗಿ ನಿದ್ರಿಸುತ್ತಾರೆ.

ಅದೇ ರೀತಿ ನಾವು ಆನೆಯನ್ನು ಮನಸ್ಸಿಗೂ, ಆಡುಗಳನ್ನು ಇಂದ್ರಿಯಗಳಿಗೂ ಹೋಲಿಸಿ ಹೇಳುವುದಾದರೆ ಮನಸ್ಸು ಆನೆಯನ್ನು ಮೀರಿಸುವಷ್ಟು ಶಕ್ತಿಶಾಲಿಯಾದುದು. ಇಂಥ ಅದ್ಭುತ ಶಕ್ತಿಯನ್ನು ಕೀಳು ಅಭಿರುಚಿಗಳಲ್ಲಿ ವ್ಯರ್ಥಗೊಳಿಸದೆ ಅದನ್ನು ನಿರ್ದಿಷ್ಟವಾದ ಗುರಿ ಮತ್ತು ದಾರಿಗಳ ದಿಕ್ಕಿನಲ್ಲಿ ಹರಿಸಿ ಉಪಯೋಗ ಪಡಿಸಿಕೊಳ್ಳಬೇಕು. ಇದು ಆನೆಯನ್ನು ಪಳಗಿಸುವಷ್ಟು ಕಷ್ಟವಾದರೂ ಅಷ್ಟೇ ಸುಲಭಸಾಧ್ಯವೂ ಆಗಿದೆ. ಹೇಗೆಂದರೆ ನಿತ್ಯವೂ ಪರಮಾತ್ಮನ ನೆನಪು ಎಂಬ ಅಂಕುಶದಿಂದ ಮಾತ್ರ ಇದು ಸಾಧ್ಯ. ಅದನ್ನೇ ಬಸವಣ್ಣನವರು "ಲಿಂಗದೇವಾ, ನೀನು ಸರ್ವಜೀವ ದಯಾಪಾರಿಯಾದ ಕಾರಣ ನಿನಗಂಜುವೆನು" ಎಂದಿರುವುದು. ಹೀಗೆ ಮನಸ್ಸನ್ನು ನಿಯಂತ್ರಿಸಲು ಕಲಿತ ಮೇಲೆ ಇನ್ನು ಆಡುಗಳಂಥ ಇಂದ್ರಿಯಗಳನ್ನು ಹತೋಟಿಯಲ್ಲಿಡುವುದು ಕಷ್ಟವಲ್ಲ. ಇದನ್ನು ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ಬಹಳ ಚೆನ್ನಾಗಿ ಹೇಳುತ್ತಿದ್ದರು "ಅಡುಗೆ ಮನೆ, ಪೂಜಾ ಕೋಣೆಗಳಲ್ಲಿಟ್ಟಿರುವ ಪ್ರತ್ಯೇಕ ಸ್ವಿಚ್‌ಗಳನ್ನು ಆರಿಸುವಂತೆ-ಹಾಕುವಂತೆ ಇಂದ್ರಿಯ ನಿಗ್ರಹ. ಮೇನ್ ಸ್ವಿಚ್‌ನಂತೆ ಮನೋ ನಿಗ್ರಹ" ಎಂದು. ಶರಣ ಬಂಧುಗಳೇ, ಈಗ ನಿಮಗೆ ಮಾವುತರಾಗಲು ಇಷ್ಟವೋ ಅಥವ ಕುರುಬರಾಗಲು ಇಷ್ಟವೋ ಎಂದು ನಿರ್ಧರಿಸಿರಿ.

ಈಗ ಹುಟ್ಟಿನಿಂದಲೇ ಮೈಗಂಟಿರುವ ಚಂಚಲ ಸ್ವಭಾವವು ನಿಶ್ಚಲವಾಗುವುದನ್ನು ನೋಡೋಣ. ಕೋಡಗನ ಪರಿಯಲ್ಲಿ ನೀ ಕುಳ್ಳಿರಲು ಕಲಿ ಕಂಡಾ ಎಂದು ಈ ವಚನ ಪ್ರತಿಪಾದಿಸುತ್ತಿದೆ. ಅಂದರೆ ಕೋತಿಯಂತೆ ಒಂದು ಕಡೆ ಕುಳಿತುಕೊಳ್ಳುವುದನ್ನು ನಾವು ಕಲಿಯಬೇಕಂತೆ. ಕೋತಿ ಮೊದಲೇ ಚಂಚಲಯುಕ್ತ ಪ್ರಾಣಿ. ಅದು ಹೇಗೆ ಒಂದೆಡೆ ಸ್ಥಿರವಾಗಿ ಕುಳಿತುಕೊಳ್ಳಬಲ್ಲುದು ಎಂಬ ಅನುಮಾನ ಹುಟ್ಟುತ್ತದೆ. ಇಲ್ಲಿ ಕೋಡಗಕ್ಕೂ ಮರ್ಕಟಕ್ಕೂ ಇರುವ ವ್ಯತ್ಯಾಸವನ್ನು ಮೊದಲು ತಿಳಿಯಬೇಕು. ಕೋಡಗ ಅಂದರೆ ಸಾಕಿದ ಕೋತಿ. ಮರ್ಕಟ ಅಂದರೆ ಕ್ಷಣಕ್ಷಣಕ್ಕೂ ಕೊಂಬೆಯಿಂದ ಕೊಂಬೆಗೆ

ಹಾರುತ್ತಾ ದಾಂಧಲೆ ಮಾಡುವ ಮಂಗ ಎಂದು ಅರ್ಥವಾಗುತ್ತಿದೆ. ಕೋಡಗ ತನ್ನ ಒಡೆಯ ಹೇಳಿದಂತೆ ಕೇಳುತ್ತಾ ವಿಧೇಯತೆಯಿಂದ ವರ್ತಿಸುತ್ತದೆ. ಈ ವ್ಯತ್ಯಾಸವನ್ನು ಕಂಡು

ಕೋಡಂಗಿಯಾಟವನಾಡಿದ ಭಕ್ತಂಗೆ
ಬೇಡಿದ್ದನೀವ ನಮ್ಮ ಲಿಂಗದೇವಾ -ಬ.ವ.ದೀ 181

ಎಂದು ಧರ್ಮಪಿತರು ನುಡಿದಿದ್ದಾರೆ. ನೀವು ಕೋತಿ ಆಡಿಸುವವರನ್ನು ನೋಡಿರಬಹುದು. ಚಂಚಲಸ್ವಭಾವದ ಈ ಪ್ರಾಣಿಯನ್ನು ಚಾಣಾಕ್ಷತೆಯಿಂದ ಹಿಡಿದು ತಂದು , ಅದಕ್ಕೆ ಬುದ್ಧಿ ಕಲಿಸುತ್ತಾನೆ. ಸ್ಥಿರತೆಯ ಪಾಠ ಹೇಳಿಕೊಡುತ್ತಾನೆ. ಅದನ್ನು ತನ್ನ ಜೀವನೋಪಾಯಕ್ಕೆ ಸಾಧನವನ್ನಾಗಿ ಮಾಡಿಕೊಳ್ಳುತ್ತಾನೆ. ಅದಾದರು ಅಷ್ಟೇ ವಿಧೇಯತೆ, ನಿಷ್ಠೆಯಿಂದ ತನ್ನ ಒಡೆಯ ಹೇಳಿಕೊಟ್ಟಿದ್ದನ್ನೆಲ್ಲ ಕಲಿತು ಅವನ ಕೃಪೆಗೆ ಪಾತ್ರವಾಗುತ್ತದೆ. ಮಾತ್ರವಲ್ಲ ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸುತ್ತದೆ. ಅದು ಹೇಗೆ ಎಂದು ಈಗ ನೋಡಿರಿ. ಕೋತಿ ಸಾಕಿದವನು ಜನ ಹೆಚ್ಚಾಗಿ ಓಡಾಡುವ ಜಾಗದಲ್ಲಿ ರಸ್ತೆ ಬದಿಗೆ ಒಂದು ಗೂಟ ನೆಟ್ಟು, ಒಂದು ಉದ್ದ ಹಗ್ಗದಿಂದ ಕೋಡಗವನ್ನು ಕಟ್ಟಿ ಬಂಧಿಸುತ್ತಾನೆ. ಆಗ ಅದು ಏನು ಮಾಡುತ್ತದೆ?! ತನ್ನ ಮುಂದೆ ಹಾಯ್ದು ಹೋಗುವ ದಾರಿಹೋಕರ ಸೀರೆಯ ನೆರಿಗೆಯನ್ನೋ ಅಥವ ಪ್ಯಾಂಟಿನ ತುದಿಯನ್ನೊ ಹಿಡಿದು ಜಗ್ಗುತ್ತದೆ. ತನ್ನ ಕಡೆಗೆ ಪಾದಾಚಾರಿಗಳ ಗಮನ ಸೆಳೆಯುತ್ತದೆ. ಮಾತ್ರವಲ್ಲ ತನ್ನ ಪುಟ್ಟ ಅಂಗೈಯನ್ನು ಚಾಚುತ್ತದೆ. ಕೋಡಗನ ಈ ಬೇಡಿಕೆಯನ್ನು ಅಲಕ್ಷಿಸಿ ನೀವಾದರೂ ಹೇಗೆ ಮುಂದೆ ಸಾಗುವಿರಿ. ಅದರ ದೀನತೆಯ ಬೇಡಿಕೆಗೆ ಮರುಳಾಗಿ ನಿಮ್ಮ ಪರ್ಸಿನಿಂದ ಹಣ ತೆಗೆದು ಕೋತಿಯ ಅಂಗೈಯ ಮೇಲಿಡುತ್ತಿರಿ. ನಂತರ ಅದು ನಿಮಗೆ ಮುಂದೆ ಹೋಗಲು ದಾರಿ ಬಿಡುತ್ತದೆ. ಮತ್ತೊಬ್ಬರು ಬರುವವರೆಗೂ ಅದು ಗಂಭೀರವಾಗಿ ಕಾಯುತ್ತಾ ಕುಳಿತುಕೊಳ್ಳುತ್ತದೆ. ನೋಡಿದಿರಾ! ಹೇಗಿದೆ ನಮ್ಮ ಕೋಡಗನ ಪರಿ. ಹಾಗೆಯೇ ಮಂಗನಂಥ ಚಂಚಲವಾದ ಮನಸ್ಸನ್ನು ಅಭ್ಯಾಸಬಲದಿಂದ ಕೋಡಗ ಮಾಡಲು ಬರುತ್ತದೆ ಎನ್ನುತ್ತಾರೆ ವಚನಕಾರರು.

ಶರಣ ಬಂಧುಗಳೇ, ಈಗ ನಿಮ್ಮ ಮನಸ್ಸನ್ನು ಒಂದು ಮಾತು ಕೇಳಿ ನೋಡಿರಿ. "ಎಲೈ, ಮನಸ್ಸೆ! ನೀನು ಮಂಗನಾಗಲು ಬಯಸುವೆಯೋ ಅಥವ ಕೋಡಗನಾಗಲು ಅಪೇಕ್ಷಿಯೋ ?" ಎಂದು. ಅದು ಮಂಗನಾಗಲು ಬಯಸಿದರೆ ಅದರ ನಾಯಕ, ನಿಮಗೆ ಗೊತ್ತಲ್ಲ ಹನುಮಂತ, ಅವನ ಬಳಿಗೆ ಕಳಿಸಿರಿ. ಕೋಡಗನಾಗಲು ಇಷ್ಟಪಟ್ಟರೆ ನಮ್ಮ ಬಸವಾದಿ ಪ್ರಮಥರಲ್ಲಿಗೆ ಕಳಿಸಿಕೊಡಿರಿ. ಅವರು ಅದಕ್ಕೆ ತಕ್ಕ ಪಾಠ ಕಲಿಸುತ್ತಾರೆ. ಏಕೆಂದರೆ ಲೌಕಿಕವೇ ಇರಲಿ, ಪಾರಮಾರ್ಥಿಕವೇ ಇರಲಿ ಯಾವುದೇ ಸಾಧನೆ ಯಶಸ್ವಿಯಾಗಬೇಕಾದರೆ ಮನದ ಏಕಾಗ್ರತೆ ಬಹಳ ಮುಖ್ಯ.

ಇನ್ನು ಮುಂದೆ ಈ ವಚನ ಮರುಳಿನ ಮನದ ಪರಿಯನರಿ ಕಂಡಾ ಎಂದು ಮನಸ್ಸಿನ ಮೂಲ ನೆಲೆಯನ್ನು ಅರಿಯಲು, ಕಾಣಲು ಹೇಳುತ್ತಿದೆ. ಮಾವುತನಾಗಿ ಮನಸ್ಸನ್ನು ನಿಗ್ರಹಿಸಲು ಕಲಿತ ಮೇಲೆ, ಕೋಡಗನಾಗಿ ಸ್ಥಿರತೆಯನ್ನು ಸಾಧಿಸಿದ ಮೇಲೆ ಮುಂದಿನ ಹಂತ ಸದಾ ಹುಚ್ಚನಂತೆ ತಿರುಗುತ್ತಿದ್ದ ಮನಸ್ಸಿಗೆ ಶಾಶ್ವತವಾದ ನಿಜನೆಲೆಯನ್ನು ತೋರಿಸಬೇಕು. ಏಕೆ ಹೀಗೆ?! ಈಗಾಗಲೇ ಮನಸ್ಸಿಗೆ ಸಾಕಷ್ಟು ತರಬೇತಿ ಕೊಟ್ಟಾಗಿದೆ. ಹೇಳಿದಂತೆ ಕೇಳಲು ಕಲಿಸಲಾಗಿದೆ. ಇಲ್ಲಿಗೆ ನನ್ನ ಕೆಲಸ ಮುಗಿಯಿತು. ಶ್ರಮ

ಸಾರ್ಥಕವಾಯಿತು ಎಂದು ಕ್ಷಣಕಾಲವಾದರೂ ಮೈಮರೆತು ಸುಮ್ಮನಿರಲು ಬರುವುದಿಲ್ಲ. ಏಕೆಂದರೆ ಸದ್ಯಕ್ಕೆ ಅದುನಿಮ್ಮ ನಿಯಂತ್ರಣದಲ್ಲಿದ್ದಂತೆ ಕಂಡು ಬಂದರೂ ಅದೇ ಸತ್ಯವಲ್ಲ. ನಿಮ್ಮ ಎದುರಿಗೆ ಮಾತ್ರ ಅದು ತನ್ನ ಸ್ಥಿರತೆಯನ್ನು ಕಾಯ್ದುಕೊಂಡಿರುತ್ತದೆ. ನೀವು ಸ್ವಲ್ಪ ಕಣ್ಮರೆಯಾದರೆ ಸಾಕು ಅದು ಮತ್ತೆ ತನ್ನ ಹುಟ್ಟುಗುಣವನ್ನು ತೋರಿಸಿಬಿಡುತ್ತದೆ. ಮದೋನ್ಮತ್ತ ಆನೆಯಂತೆ ಎಲ್ಲೆಂದರಲ್ಲಿ ಎಳೆದೊಯ್ಯುತ್ತದೆ. ಕೊಂಚ ಅವಕಾಶ ಸಿಕ್ಕಿದರೂ ಸಾಕು ಅಮಲೇರಿದ ಮಂಗನಂತೆ ನೆಗೆಯುತ್ತದೆ; ದಾರಿ ತಪ್ಪಿಸುತ್ತದೆ, ದಿಕ್ಕುಗೆಡಿಸುತ್ತದೆ, ನಮಗರಿವಿಲ್ಲದಂತೆ ವಂಚಿಸುತ್ತದೆ. ಇಂಥ ಮನಸ್ಸಿಗೆ ಏನು ಮಾಡಬೇಕು? ಅದನ್ನು ಅಲ್ಲಮಪ್ರಭುದೇವರು ತಮ್ಮ ವಚನವೊಂದರಲ್ಲಿ ಹೀಗೆ ಹೇಳುತ್ತಾರೆ:

ಪಶುಗಳೈವರು ಹಸನಗೆಡಿಸಿಹರೆಂದು
ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ
ಆವಾಗಲೂ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ.

ತುಂಟ ಪಶುಗಳಂತಿರುವ ಪಂಚೇಂದ್ರಿಯಗಳ ಹಿಂದೆ ಹೋಗಿ ಇಲ್ಲದ ಹಗರಣವನ್ನು ಸೃಷ್ಟಿಸುವ ಮನಸ್ಸಿಗೆ ನಿರಂತರವಾಗಿ ಜಾಗ್ರತಾವಸ್ಥೆ ಎಂಬ ಕಾವಲುಗಾರನನ್ನು ನೇಮಿಸಬೇಕು. ಆಗ ಅದಕ್ಕೆ ತಿಳಿಯುತ್ತದೆ "ಓಹೋ! ಇವನ ಮುಂದೆ ನನ್ನ ಆಟ ನಡೆಯುವುದಿಲ್ಲ. ಇನ್ನಾದರು ಮುಂದಿನ ಗುರಿಯನ್ನು ಸೇರಬೇಕು" ಎಂದು. ಅದನ್ನು ಜಗನ್ಮಾತಾ ಅಕ್ಕಮಹಾದೇವಿ ಚೆನ್ನಾಗಿ ಹೇಳುತ್ತಾರೆ.

ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭಯವುಂಟೆ ಚೆನ್ನಮಲ್ಲಿಕಾರ್ಜುನಾ?
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚ ಬರಿಯ ಬಯಲು ಕಾಣಾ ಚನ್ನಮಲ್ಲಿಕಾರ್ಜುನಾ.

ಮುಂದೆ ಇಂಥ ಉನ್ನತ್ತವಾದ, ಅದ್ವಿತೀಯವಾದ ಯೌಗಿಕ ಸ್ಥಿತಿಯನ್ನು ತಲುಪಲು ಸದಾಜಾಗೃತಾವಸ್ಥೆ ಎಂಬ ಸಮರ್ಥ ಕಾವಲುಗಾರನ ನೆರವಿನೊಂದಿಗೆ ಪರಮಾತ್ಮನಲ್ಲಿ 'ಕತ್ತಲೆ ಎಂಬುದು ಕಳೆ ಕಂಡಾ' ಎಂದು ಮೊರೆಯಿಡಬೇಕೆಂದು ಸೂಚಿಸುತ್ತಿದೆ. ಇಲ್ಲಿ ಕತ್ತಲೆ ಎಂದರೆ ಅಜ್ಞಾನ-ತಮಂಧ. ಇಂಥ ಅಜ್ಞಾನದ ಕತ್ತಲೆಯನ್ನು ಕಳೆಯಲು ಅಂತರಂಗದಲ್ಲಿ ಜ್ಞಾನ ಜ್ಯೋತಿಯನ್ನು ಹಚ್ಚಿಕೊಳ್ಳಬೇಕು. ಅದನ್ನೇ ವಿಶ್ವಗುರು ಬಸವಣ್ಣನವರು.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ -ಬ.ವ.ದೀ 137

ಎಂದಿರುವುದು. ಮತ್ತೊಂದು ಕಡೆ ಹೀಗೆ ಹೇಳುತ್ತಿದ್ದಾರೆ

ಸಮಸ್ತ ಕತ್ತಲೆಯ ಮುಸಕವ ಕಳೆದಿಪ್ಪ ಇರವ ನೋಡಾ
ಬೆಳಗಿಗೆ ಬೆಳಗು ಸಿಂಹಾಸನವಾಗಿ
ಬೆಳಗು ಬೆಳಗ ಕೂಡಿದ ಕೂಟವ
ಲಿಂಗದೇವಯ್ಯ ತಾನೇ ಬಲ್ಲ -ಬ.ವ.ದೀ 953

ಆದರೆ ಇಂಥ ಮಹಾಜ್ಞಾನ, ಮಹಾಪ್ರಕಾಶವನ್ನು ಬೀರುತ್ತಿರುವ ಬೆಳಕು ನಮಗೆ ಎಲ್ಲಿ

ಸಿಗುತ್ತದೆ? ಅದನ್ನು ಎಲ್ಲಿ ಹುಡುಕಬೇಕು? ಎಂದರೆ ಅದಕ್ಕೆಂದೆ ನಮ್ಮ ಕಡೆಗೆ ಸಹಾಯಹಸ್ತ ಚಾಚುತ್ತಾ ಇಲ್ಲಿ ಶರಣರು ನಿಂತು ತೋರಿಸುತ್ತಿದ್ದಾರೆ. ಅದಿರುವ ಜಾಗಕ್ಕೆ ಕರೆದೊಯ್ಯುತ್ತಾರೆ.

ಕತ್ತಲೆಯಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನಯ್ಯಾ
ನಿಮ್ಮ ಶರಣ ಬಸವಣ್ಣನ ತೇಜದೊಳಗಲ್ಲದೆ
ಆನಿನ್ನೆಂದು ಕಾಂಬೆನು ಹೇಳಾ ಚನ್ನಮಲ್ಲಿಕಾರ್ಜುನಾ
- ಅ.ಮ.ವ.114

ಎನ್ನ ಅರಿವಿನ ಕಣ್ಣ ಕತ್ತಲೆಯ ಕಳೆಯ ಬಲ್ಲಡೆ
ಸಂಗನ (ಕರ್ತನ) ಬಸವಣ್ಣನಲ್ಲದೆ ಮತ್ತಾರನೂ ಕಾಣೆನು
-ಚ.ಬ.ವ.250

ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯ
-ಶ್ರೀ ಸಿದ್ಧರಾಮೇಶ್ವರರು 558

ಇಂಥ ಸ್ವಯಂ ಪ್ರಭೆಯಿಂದ ಪ್ರಕಾಶಿಸುತ್ತಿರುವ ಜ್ಞಾನಜ್ಯೋತಿ ಅಪ್ಪ ಬಸವಣ್ಣನವರ ಬಳಿಯಿರುವ ಗುಟ್ಟನ್ನು ಹಲವಾರು ಶರಣರ ವಚನಗಳು ರಟ್ಟು ಮಾಡಿವೆ. ಅಂತೂ ವಚನಗಳು ತಾಯಿಯಂತೆ ಮಾತೃಹೃದಯದಿಂದ, ಗುರುವಿನಂತೆ ನೈತಿಕ ಜವಾಬ್ದಾರಿ ಹೊತ್ತು, ಅಪಾರವಾದ ಕಳಕಳಿಯಿಂದ ನಮಗೆ ಸೋಲನ್ನರಿಯದ ಬದುಕಿನ ಪಾಠಗಳನ್ನು ಕಲಿಸುತ್ತಿವೆ, ತಪ್ಪು ಒಪ್ಪುಗಳನ್ನು ತಿದ್ದಿ ತೀಡಿ, ನಮ್ಮ ವ್ಯಕ್ತಿತ್ವವನ್ನು ಹಿರಿದಾಗಿಸಲು ಶ್ರಮಿಸುತ್ತಿವೆ ಎಂಬುದನ್ನು ಅರಿತುದಾಯಿತು. ಆದರೆ ಇಂಥ ಅದ್ಭುತವಾದ ಜೀವರತ್ನಗಳಂತಿರುವ ವಚನಗಳನ್ನು ಕೆಲವರು "ರಾಗ, ತಾಳ, ಪಲ್ಲವಿ ಏನೂ ಇಲ್ಲದ ಶಿಶುಗೀತೆಗಳಂತಿವೆ. ಇವುಗಳನ್ನು ಹಾಡಲು, ಕಲಿಯಲು ಹೆಚ್ಚಿನ ಶ್ರಮ ಬೇಕಾಗಿಲ್ಲ. ಯಾರೂ ಬೇಕಾದರೂ, ಹೇಗೆ ಬೇಕಾದರೂ ಹಾಡಬಹುದು" ಎಂದು ಲೇವಡಿ ಮಾಡುತ್ತಿರುವವರು. ಹಗುರವಾಗಿ ಮಾತಾಡುತ್ತಿರುವವರು. ಜಗತ್ತಿನಲ್ಲಿ ಇಂಥ ಅಲ್ಪಮತಿಗಳು ಇದ್ದಾರೆಂದೇ ನಮ್ಮ ಅಪ್ಪ ಬಸವಣ್ಣನವರು ನಮಗೆ ಮೊದಲೇ ಹೀಗೆ ಹಾಡಲು ಕಲಿಸಿದ್ದಾರೆ ?!

ತಾಳಮಾನ ಸರಿಸವನರಿಯೆ
ಓಜೆಬಜಾವಣೆ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಲಿಂಗದೇವ ನಿಮಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ -ಬ.ವ.ದೀ 491

ಶರಣ ಬಂಧುಗಳೇ, ಇದುವರೆಗೂ ನೀವು ಈ ವಚನಗಳೊಂದಿಗೆ ಮಕ್ಕಳಾಗಿ ವಚನಗಳ ಅಂತರಂಗವನ್ನು ತಿಳಿದು ಆನಂದಿಸಿದಿರಲ್ಲವೆ? ಈಗಾಗಲೇ ನಿಮಗೆ ಮಕ್ಕಳ ಮತ ಯಾವುದು ಎಂದು ಅರಿವಾಗಿರಬೇಕು. ಆದ್ದರಿಂದ ಲಿಂಗಾಂಗಯೋಗಿ ಶ್ರೀ ಸಿದ್ಧರಾಮೇಶ್ವರರೊಂದಿಗೆ ನಾವು ಬಾಲಕರಾಗಿ ಅಪ್ಪ ಬಸವಣ್ಣನವರ ಬಳಿಗೆ ಈಗ ಹೋಗೋಣ ಬನ್ನಿ. ಅಲ್ಲಿ ಬಸವಣ್ಣನವರು ಏನು ಮಾಡುತ್ತಿದ್ದಾರೆಂದು ನೋಡಿ ಆನಂದಿಸೋಣ; ಕುಣಿದು ಕುಪ್ಪಳಿಸೋಣ.

ಬಾಲನಾಗಿದ್ದಂದು ಕರೆದು ಎತ್ತಿ ಮುದ್ದಿಕ್ಕಿ
ಮೊಲೆವಾಲಕೊಟ್ಟು ಸಲಹಿದ ಬಸವಾ
ಮೂಲ ಶಿವಜ್ಞಾನಕ್ಕೆ ದೀಪ್ತಿಯನಿಕ್ಕಿ ಸಲಹಿದ ಬಸವಾ
ಎನಗೆ ನೀನೆ ಗತಿಯಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ ಬಸವಾ -ಶ್ರೀ ಸಿದ್ಧರಾಮೇಶ್ವರರು 603


★★★

ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರಿಗೆ ನುಡಿ ಕಾಣಿಕೆ

(ಪೂಜ್ಯರ 44ನೇ ವರ್ಧಂತಿ ನಿಮಿತ್ತ)

ಪೂಜ್ಯ ಗುರು ಬಸವಣ್ಣನವರು ಸ್ಥಾಪಿಸಿದ ಶೂನ್ಯ ಪೀಠದ ಮೊದಲ ಗುರುವಾಗಿ ಕಲ್ಯಾಣ ರಾ
ಜ್ಯ(ದೈವೀ ರಾಜ್ಯ) ನಿರ್ಮಾಣಕ್ಕೆ ಸಹಕಾರಿಯಾಗಿ ವೈರಾಗ್ಯನಿಧಿ ಎನಿಸಿದ
ಶ್ರೀಗುರು ಬಸವಣ್ಣನೆಂಬ ಭಾಸ್ಕರನ ಪ್ರಭೆಯಲ್ಲಿ ಬೆಳಗಿದ ಚಂದ್ರ
ಜಗತ್ ಕಲ್ಯಾಣಕ್ಕಾಗಿ ದುಡಿದ ಯೋಗಿ ಮಹಾತ್ಯಾಗಿ ಜ
ಗದ್ಗುರು ಬಸವಣ್ಣನವರ ಬಲಗೈಯಾಗಿ ಸೇವೆಗೈದ ಜ್ಞಾನನಿಧಿ ಸ
ದ್ಗುರುವಾಗಿ ಜ್ಞಾನಸುಧೆಯನು ಸರ್ವರಿಗೂ ಉಣಬಡಿಸಿದ ಗು
ರು ಅನುಭವ ಮಂಟಪದ ಸಚೇತಕ ಶಕ್ತಿಯಾಗಿದ್ದವರು : ಇಂದು ಮತ್ತೆ
ಅಲ್ಲಮ ಪ್ರಭು ಸ್ವಾಮೀಜಿಯಾಗಿ ಪೂಜ್ಯ ಲಿಂ. ಮಹಾಜಗದ್ಗುರು ಲಿಂಗಾನಂದ
ಮಹಾಸ್ವಾಮೀಜಿ ಪೂಜ್ಯ ಮಾತಾಜಿಯವರ ಅನುಗ್ರಹದಿ ಎ
ಲ್ಲ ಜ್ಞಾನವನು ಪಡೆದು ವೈರಾಗ್ಯ ಮೂರ್ತಿಯಾಗಿ ಇಂದಿನ ಬಸವ
ಮಂಟಪದ ಸಚೇತಕ ಶಕ್ತಿಯಾಗಿರುವಿರಿ. ಈ ಧರ್ಮವನ್ನು
ಪ್ರಗತಿಯತ್ತ ಕೊಂಡೊಯ್ಯುತ್ತಿರುವ ಪೂಜ್ಯ ಬಸವಾತ್ಮಜೆಯು
ಭುವನದ ಬೆಳಕಾಗುವಂತೆ ಬಲಗೈಯಾಗಿ ಕಾರ್ಯನಿರ್ವಹಿಸುತ್ತ ಪೂಜ್ಯ ಗಂಗಾಮಾತಾಜಿ
ಈ ಗುರು ತ್ರಯರ ಅನುಗ್ರಹ
ಸ್ವಾಯತ ಮಾಡಿಕೊಂಡಿರುವ ತಾವು ತಮ್ಮ ಜೀವನವನ್ನೇ
ಮಿಸಲಾಗಿರಿಸಿಕೊಂಡು ಈ ಬಸವ ಧರ್ಮವನು ಸಾರುವುದಕ್ಕಾಗಿ
ಜೀವನದುದ್ದಕ್ಕೂ ಸೃಷ್ಟಿಕರ್ತ ಲಿಂಗದೇವ ಧರ್ಮಪಿತ ಬಸವಣ್ಣನವರು ಯಶಸ್ಸು ನೀಡಲಿ,
ಆಯುಷ್ಯ, ಆರೋಗ್ಯ ಕರುಣಿಸಲೆಂದು ಪ್ರಾರ್ಥಿಸುವೆ.

- ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ



ಅಮೆರಿಕಾದ ನ್ಯೂಯಾರ್ಕ್ ಕಾರ್ಯಕ್ರಮದಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿಯವರು.



ಅಮೆರಿಕಾದ ನ್ಯೂಯಾರ್ಕ್ ಕಾರ್ಯಕ್ರಮದಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿಯವರು.




ಅಮೆರಿಕಾದ ನ್ಯೂಯಾರ್ಕ್ ಕಾರ್ಯಕ್ರಮದಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿಯವರು.




ಅಮೆರಿಕಾದ ನ್ಯೂಯಾರ್ಕ್ ಕಾರ್ಯಕ್ರಮದಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿಯವರು.




ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿಯವರು.



ಗೋಕಾಕ್‌ದಲ್ಲಿ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮತ್ತು ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಗಳು



ಗೋಕಾಕ್ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಮೆರವಣಿಗೆಯಲ್ಲಿ ಪೂಜ್ಯ ಗಂಗಾಮಾತಾಜಿಯವರಿಗೆ ಆನೆಯ ಮೂಲಕ ಮಾಲಾರ್ಪಣೆ.



ಗೋಕಾಕನಲ್ಲಿ ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಮುಕ್ತಾಯ ಸಂದರ್ಭದಲ್ಲಿ ನಡೆದ ರಾ. ಬ. ದಳದ ಪಥ-ಸಂಚಲನದಿಂದ ಪೂಜ್ಯ ಪಥ ಸಂಚಲನ




ಬೆಂಗಳೂರಿನ ಬಸವ ಮಂಟಪದಲ್ಲಿ ನಡೆದ ಅಕ್ಕನಾಗಲಾಂಬಿಕಾ ಸಂಸ್ಮರಣಾ ಕಾರ್ಯಕ್ರಮ, ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮದಲ್ಲಿ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು ಪ್ರವಚನ ಮಾಡುತ್ತಿರುವುದು.




ಬೆಳಗಾಂ ರಾ.ಬ.ದಳ ಆಯೋಜಿಸಿದ್ದ 'ಬಸವ ಪಂಚಮಿ' ಮತ್ತು 'ಬಸವ ಜ್ಯೋತಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಎಸ್.ಆರ್. ಗುಂಜಾಳರು ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶರಣರಾದ ಎಸ್.ಬಿ. ಜೋಡಳ್ಳಿ, ಶಿವಪ್ಪ ಬಿಡಗೇರಿ ಮತ್ತು ಮಾಕಗಿ ಮತ್ತಿತರ ಶರಣ ಬಂಧುಗಳನ್ನು ಕಾಣಬಹುದು.




ಕನಕಪುರದಲ್ಲಿ ಪೂಜ್ಯ ಚೆನ್ನಬಸವಾನಂದ ಸ್ವಾಮೀಜಿಯವರ ಪ್ರವಚನ ಪ್ರಾರಂಭೋತ್ಸವದಂದು ಮಾಲಾರ್ಪಣೆ ಮಾಡುತ್ತಿರುವ ಸದ್ಭಕ್ತರು.




ಬೆಂಗಳೂರಿನ ಅಮೃತಹಳ್ಳಿಯಲ್ಲಿ ಪೂಜ್ಯ ಬಸವಕುಮಾರ ಸ್ವಾಮೀಜಿಯವರ ಪ್ರವಚನ ಮುಕ್ತಾಯ ಸಂದರ್ಭದಲ್ಲಿ ಪೂಜ್ಯ ಮಾತೆ ಮಂಗಳಾದೇವಿ, ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಶರಣ. ನಾಗರಾಜಪ್ಪ ಹಾಗೂ ಗಣಾಚಾರ ದಳದ ಶರಣರು.




ಸಂಜಯ್ ನಗರದಲ್ಲಿ ಆರಂಭಗೊಂಡ ಪೂಜ್ಯ ಬಸವಕುಮಾರ ಸ್ವಾಮಿಗಳ ಪ್ರವಚನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ನೆರೆದಿದ್ದ ಅನೇಕ ಗಣ್ಯರು.



ಗುಲಬರ್ಗಾದಲ್ಲಿ ಶ್ರಾವಣ ಮಾಸದ ಬಸವ ಜ್ಯೋತಿ ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣ. ಗುರುಲಿಂಗಪ್ಪ ಉಪ್ಪಿನ್‌ರವರಿಂದ ಉದ್ಘಾಟನೆ, ಚಿತ್ರದಲ್ಲಿ ಪೂಜ್ಯರಾದ ಸಿದ್ಧರಾಮೇಶ್ವರ ಸ್ವಾಮೀಜಿ ಹಾಗೂ ಜ್ಞಾನೇಶ್ವರಿಯವರನ್ನು ಕಾಣಬಹುದು.



ಗುಲಬರ್ಗಾ ಜಿಲ್ಲೆಯ ಸ್ಥಳೀಯ ವಡ್ಡರಗಲ್ಲಿಯ ಶರಣ. ಬಸವರಾಜ ಮುದ್ನಾಳರವರ ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಸಂದರ್ಭದಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತೆ ಜ್ಞಾನೇಶ್ವರಿಯವರು ಮತ್ತು ಅಧ್ಯಕ್ಷತೆ ವಹಿಸಿದ್ದ ಶರಣ. ಡಾ|| ನಾಗರಾಜ್ ವಾರದರವರು



ಕೂಡಲ ಸಂಗಮ ಮಹಾಮನೆಯಲ್ಲಿ ನಡೆದ ಅಕ್ಕನಾಗಲಾಂಬಿಕಾ ಹುಣ್ಣಿಮೆ ಕಾರ್ಯಕ್ರಮದಲ್ಲಿ ಬೆಳಗಾಂ ರಾ.ಬ.ದಳದವರಿಂದ ವಚನ ಭಜನೆ, ಚಿತ್ರದಲ್ಲಿ ಪೂಜ್ಯ ಮಾತೆ ಅಕ್ಕಮಹಾದೇವಿಯವರನ್ನು ಮತ್ತು ಇತರರನ್ನು ಕಾಣಬಹುದು.




ಧರ್ಮಗುರು ಬಸವಣ್ಣ

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನೇಳನೆಯ

ಶರಣ ಮೇಳ



ಗಣ ಧ್ವಜ

2004ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988 ಜನವರಿ 14, 15 ರಿಂದ 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೇಳನೆಯ ಶರಣ ಮೇಳವು 2004ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ , ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ' ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ದಿ. 11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಬಂಧಪಟ್ಟಂತೆ

ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ(ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1.ಮಹಾಪೋಷಕರು	: ರೂ. 5000 ಮತ್ತು ಮೇಲೆ ಕೊಟ್ಟವರು	4. ಹಿತೈಷಿಗಳು	: ರೂ. 500
2.ಪೋಷಕರು	: ರೂ. 2000 ಮತ್ತು ಮೇಲೆ ಕೊಟ್ಟವರು	5. ಸ್ವಾಗತ ಸಮಿತಿ ಸದಸ್ಯ	: ರೂ. 250
3.ದಾನಿಗಳು	: ರೂ. 1000 ಮತ್ತು ಮೇಲೆ ಕೊಟ್ಟವರು	6. ಪ್ರತಿನಿಧಿ ಶುಲ್ಕ	: ರೂ. 150

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ - ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ.ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಶರಣ ಮೇಳ ಉತ್ಸವ ಸಮಿತಿ(ರಿ)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 560010
ದೂರವಾಣಿ: 080-3325335/ 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ : 08351-768038/768007

ಮುಸಲ್ಮಾನ್ ಧರ್ಮಿಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ(ಜನವರಿ 14ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ವಿಶೇಷ ಮನವಿ

ಶರಣ ಬಂಧುಗಳೇ, ಕರ್ನಾಟಕ ರಾಜ್ಯ ಈ ವರ್ಷ ಮಳೆಯ ಕೊರತೆಯಿಂದಾಗಿ ಬರಗಾಲವನ್ನು ಎದುರಿಸುತ್ತಿದೆ. ಮಳೆಯ ಆಶ್ರಯದಲ್ಲಿ ವ್ಯವಸಾಯ ಮಾಡುವವರು, ಕೃಷಿಯ ಕೂಲಿಯನ್ನು ಅವಲಂಬಿಸಿರುವವರು ಭಯಂಕರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಶ್ರೀಮಂತರು, ಕಾಯಂ ಉದ್ಯೋಗಿಗಳು, ನೀರಾವರಿ ಕೃಷಿಯ ಅನುಕೂಲತೆಯುಳ್ಳವರು, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಅನ್ನ ದಾಸೋಹಕ್ಕೆ ತಮ್ಮ ಕಾಣಿಕೆಯನ್ನು ಸ್ವಯಂ ಪ್ರೇರಣೆಯಿಂದ ನೀಡಿ ಶರಣ ಮೇಳದ ಯಶಸ್ಸಿಗೆ ಸಹಕರಿಸಬೇಕೆಂದು ಕೋರುತ್ತೇವೆ.

ಬಸವ(ಲಿಂಗಾಯತ) ಧರ್ಮದ ಆರು ಸೂತ್ರಗಳು

1.ಧರ್ಮಗುರು	-	ವಿಶ್ವಗುರು ಬಸವಣ್ಣನವರು
2.ಧರ್ಮ ಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3.ಧರ್ಮ ಲಾಂಛನ	-	ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4.ಧರ್ಮ ಕ್ಷೇತ್ರ	-	ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ ಮತ್ತು ಶರಣ ಭೂಮಿ ಬಸವ ಕಲ್ಯಾಣ
5.ಧರ್ಮಧ್ವಜ	-	ಷಟ್ಕೋನ ಇಷ್ಟಲಿಂಗ ಸಹಿತ ಬಸವ ಧ್ವಜ
6.ಧರ್ಮದ ಧ್ಯೇಯ	-	ಜಾತಿವರ್ಣವರ್ಗ ರಹಿತ. ಧರ್ಮಸಹಿತ (ಶರಣ ಸಮಾಜ) ಕಲ್ಯಾಣ ರಾಜ್ಯ ನಿರ್ಮಾಣ.



ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥



ಸ್ವಯಂ ಸೇವಕರಿಗೆ ಕರೆ

ಕಾಯ ಸೇವೆ :

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತಲಿದೆ. ಧರ್ಮಪಿತರ ಆದೇಶ ಹೀಗಿರುತ್ತದೆ :

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬ.ವ.ದೀ 248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷ ಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ - ಮನ ಸೇವೆ, ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವನು ಮೆಚ್ಚಿ, ಒಲಿದು, ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ (ಧಾರ್ಮಿಕ) ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆಯನ್ನು ಸಂಗ್ರಹಿಸುತ್ತಲಿರಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯ ಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಪ್ರತಿ ರಾಷ್ಟ್ರಿಯ ಬಸವ ದಳದವರು ಮತ್ತು ಇನ್ನಿತರ ಶರಣರು ತನು ಸೇವೆಗೆ ಸನ್ನದ್ಧರಾಗಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾಕಾರ್ಯ ಸಾಕಷ್ಟು ಇರುತ್ತವೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ.
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ !
ಎಂಬುದು ತಮ್ಮೆಲ್ಲರಲ್ಲಿ ಆಚ್ಚೊತ್ತಲಿ.

\- ಬಸವಾತ್ಮಜೆ



ಅಮೇರಿಕಾದ ನ್ಯೂಯಾರ್ಕ್‌ದಲ್ಲಿ ಪ್ರಾರ್ಥನೆ ಮಾಡಿಸುತ್ತಿರುವ ಪೂಜ್ಯ ಮಾತಾಜಿಯವರು

CPMG/KA/BGW - 50/2003 -2005
WPP (W) -17 R. No. 19980/70



ಅಮೆರಿಕಾದ ಪಿಟ್ಸ್‌ಬರ್ಗ್‌ದಲ್ಲಿ ಪೂಜ್ಯ ಮಾತಾಜಿ ಪ್ರಾರ್ಥನೆ ಮಾಡಿಸುತ್ತಿರುವುದು